UNIVERSAL LIBRARY
OU_200353
UNIVERSAL LIBRARY

**OSMANIA UNIVERSITY LIBRARY**

Call No. K 81.6 J 83 B　　Accession No. K 2993

Author [illegible]

Title [illegible]

This book should be returned on or before the date last marked below.

ಬೇಂದ್ರೆ. ದ.ರಾ.

ಸಾಹಿತ್ಯ ಸಂಶೋಧನ.

1 SEP 1955 H V. Savithamma.

ಬೇಂದ್ರೆ

# ವಾಙ್ಮಯ ದರ್ಶನ

●

ಸಂಪಾದಕರು :

ಎಚ್. ಜಿ. ಜೋಶಿ, ಬಿ. ಎ., (ಆನರ್ಸ)

೧೯೪೬

೧-೪-೦

ಮುದ್ರಕರು :
ಎಮ್. ಜಿ. ಪಾಲೇಕರ
ಹಿಂದಮಾತಾ ಮುದ್ರಣಾಲಯ,
ಧಾರವಾಡ

ಪ್ರಕಾಶಕರು .
ರಾಮಾಚಾರ್ಯ ಕಾಖಂಡಿಕಿ,
ಸಂಪಾದಕರು 'ನಿರ್ಭಯ'
ಜಮಖಂಡಿ

*"A poet's guerdon is not Gold*
*Not Parion Bust, nor trappings brave*
*A tear a titter from young and old*
*Is all the meed I meekly crave"*

"ಹೊನ್ನೆ ? ಬಲ್ ಬಿರುದುಗಳೆ ?
ಹಾಲುಗಲ್ ವಿಗ್ರಹವೆ ?
ಕವಿ ಬಯಸನ್
ಇಂಧದೇ ಪ್ರತಿಫಲಬೇಕು
ಹಿರಿಯರುಂ ಕಿರಿಯರುಂ ಕಿಲಕಿಲನೆ
ನಕ್ಕೊಂದು ಕಣ್ಣಹನಿಯುರಿತ್ತರೆನಗದು
ಅನಿತೆ ಸಾಕು.

"ಕೈಲಾಸಂ

# ಅರ್ಪಣೆ

ಕರುಣೆಯ ಕಿರಣದಿಂದ ಎದೆಯ ಕತ್ತಲು ಕಳೆದು
ನನ್ನ ಬಾಳಬೆನ್ನಿಗೆ ರಕ್ಷೆಯಾಗಿರುವ
ಯೋಗಿವರ್ಯ **ಶ್ರೀ ಚಿದಂಬರ ದೀಕ್ಷಿತರ**
ಚರಣ ಸರೋಜದಲ್ಲಿ.

ಸಂಪಾದಕ

"ಅರಿವನರಿಯಲು ಜೀವ
ನೆರವಿರದೆ ನೆಲೆ-ತಪ್ಪಿ
ತಿರುತಿರುಗಿ ನೋಯುತಿರೆ ನಿಮ್ಮ ಅಭಯ
ಅರಿವಿನಮೃತವನುಣಿಸಿ
ಇರುವಾಳವನೆ ಬೆಳಗಿ
ಹರಸಿ ರಕ್ಷಿಸಿದಂತೆ ರಕ್ಷಿಸಲಿ ಸರ್ವನಮಯ."

# ಹೃದ್ಗತ

ಗಾಲವ ಋಷಿಯ ತಪೋನಿಕುಂಜದಲ್ಲಿ, ಕವಿಚಕ್ರವರ್ತಿ ಮೈದೊಳೆದ ಪೆರ್ದೊರೆಯ ಪುಣ್ಯಸೀಮೆಯಲ್ಲಿ ಇಂದಿನ ನಮ್ಮ ಚಟವಟಕೆಗಳು. ಋಷಿಯ ಋಜುಮಾರ್ಗ, ಸಾಹಿತಿಯ ಸೌಂದರ್ಯಪಥ ಎರಡರ ಅರಿವೂ ಇಂದಿನ ನಮ್ಮ ದೃಷ್ಟಿಯಾಗಿದೆ. ಋಷಿವರೇಣ್ಯಗಾಲವರೂ ಉದ್ದಾಮ ಕವಿ, ಕವಿಚಕ್ರವರ್ತಿ ರನ್ನನೂ ನಮ್ಮ ರಕ್ಷೆಗಿದ್ದಾರೆ.

ಶ್ರೀ. ಬೇಂದ್ರೆಯವರು ನಮ್ಮ ನಾಡನ್ನು ಹತ್ತಾರುಸಲ ಸುತ್ತಾಡಿ ನಮ್ಮೂರಿಗೆ ಬಂದುದು ಮೊನ್ನೆ ಸಾವಿರದ ಒಂಬತ್ತುನೂರು ನಲವತ್ತರಲ್ಲಿ ನಮ್ಮ 'ಜೀವನ ನಾಟ್ಯವಿಲಾಸಿ'ಗಳ ಒಂದು ಉತ್ಸವಕ್ಕೆ. ಶ್ರೀ. ಬೇಂದ್ರೆಯವರ ಆಗಮನವು ನಮ್ಮೂರಿನ ತರುಣರ ಸುಪ್ತಶಕ್ತಿಯನ್ನು ಜಾಗ್ರತಗೊಳಿಸಿತು. ರನ್ನಗಾಲವರು ಅವರ ಕಣ್ಣಲ್ಲಿ ಕುಣಿದಾಡಿದರು. ಊರಿನ ಮಕ್ಕಳಂತೂ ಬೇಂದ್ರೆಯವರು ನಿಂತು ಹಾಡಿದ ನೆಲವನ್ನೇ ಕೈಮಾಡಿ "ಕೊಳಲನೂದಿದನೋ ಸ್ವಾಮಿ ಕೊಳಲನುದಿದ । ಇಲ್ಲೆ ಕೊಳಲನೂದಿದ । ಎಂದೋ ಕೊಳಲನೂದಿದ । ಇಲ್ಲೆ ಕೊಳಲನೂದಿದ ।" ಎಂದು ಹಾಡಿಕೊಂಡು ಇಂದಿಗೂ ಹಿಗ್ಗುತ್ತಾರೆ. ಅಂತಹದೊಂದು ಪ್ರತೀತಿ ಹುಟ್ಟಿಸಿ ತೆರಳಿದರು ಕವಿಗಳು. ಅಂದಿನ ಅವರ ಪ್ರೇರಣೆ, ಎಂದಿನಿಂದಲೂ ಅವರ ಗೀತಗಳಲ್ಲಿ ನಾವಿನ್ಯ ಬರುವಂತೆ ಸಲಸಲಕ್ಕೂ ಹೇಳುತ್ತಿದ್ದ ನನ್ನ ಸಹೋದರ 'ಬಾಳು'ವಿನ ಸ್ಮರಣೆಯೆ ಈ ಪುಸ್ತಕದ ಕಲ್ಪನೆಗೆ ಅವಕಾಶ ಕೊಟ್ಟುದು.

ಹಿರಿಯರಾದ ಕೇಶವಶರ್ಮರು ನಮ್ಮ ಚಟುವಟಿಕೆಗಳನ್ನು ಎತ್ತಿಹಿಡಿದು ಅವುವಳಿಗೆ ಯೋಗ್ಯದಾರಿ ತೋರುತ್ತಲೆ ಇದ್ದಾರೆ. ಇಂದಿನ 'ಸಾಹಿತ್ಯ ಮಂದಿರ'ಕ್ಕೂ ಅವರ ಸಲಹೆ ಆಸರಗಳೆ ಬಲ.

ಕನ್ನಡದಲ್ಲಿಯ ಚಿರಂತನ ಸಾಹಿತ್ಯ ಸಂಕಲನವನ್ನೇ ಗುರಿಯಾಗಿಟ್ಟುಕೊಂಡು ಸಾಹಿತ್ಯ ಮತ್ತು ವಿಮರ್ಶೆಯ ಉದಾತ್ತ ಗ್ರಂಥಗಳನ್ನು ಕನ್ನಡಿಗರಿಗೆ ಅರ್ಪಿಸಲು ಮಂದಿರವು ತನ್ನ ಕಾರ್ಯಾಲಯದ ಬಾಗಿಲ ತೆರೆದಿದೆ.

ಶ್ರೀ. ಬೇಂದ್ರೆಯವರ ಕಾಲ್ಗುಣವೋ ನಮ್ಮ ಉದ್ದೇಶ ಫಲಿಸುವ ಲಕ್ಷಣ ತೋರಿವೆ, ಕನ್ನಡ ಜನತೆ ಕೈಗೊಡಬೇಕು. ಎಂದರೆ ಮಾತ್ರ ಸಾಹಿತ್ಯ ಭಾಂಡಾರದ ಬೀಗ ತೆರೆದು ಅದನ್ನು ಸೂರೆ ಮಾಡುತ್ತಿದೆ. ಆ ಧೈರ್ಯ ವನ್ನು ನಮಗಿತ್ತವನೂ ವಾಗ್ದೇವಿಯ ಬಂಡಾರದ ಮುದ್ರೆಯನ್ನೊಡೆದವನೆ. ನಮ್ಮ ಸಾಹಿತ್ಯ ಮಂದಿರದಿಂದ ಏನನ್ನಾದರೂ ಬಯಸುವವರು ಅದರ ಕಡೆಗೆ 'ಅರ್ಥವತ್ತಾಗಿ' ನೋಡಬೇಕು. ಎಂದರೇನೇ ಕನ್ನಡಿಗರ ರಸಾ ಕಾಂಕ್ಷೆ ತಣಿದೀತು.

'ವಾಙ್ಮಯದರ್ಶನ'ದ ಲೇಖಕ ವರ್ಗದಲ್ಲಿ ಶ್ರೀ. ಕೇಶವಶರ್ಮರನ್ನು ಳಿದು ಎಲ್ಲರೂ ಹೊಚ್ಚಹೊಸಬರೆ ಇದ್ದರೂ ಜಿಜ್ಞಾಸುಗಳೆಂದು ಓದುಗರು ಅರಿಯಬಹುದು. ಕೆಲದಿನಗಳ ಹಿಂದೆ ಗೆಳೆಯರೊಳಗಾದ ಅರೆದಾಟ ಜರೆದಾಟಗಳು ಲೇಖನದಲ್ಲಿ ಮೂಡಿವೆ. ನನ್ನ ಪೂಜ್ಯ ತಂದೆಯವರಾದ ಕೇಶವಶರ್ಮರು ನನ್ನ ಕಾರ್ಯದಲ್ಲಿ ಬಲವಿತ್ತಿದ್ದಾರೆ. ಅವರನ್ನು ಎಂದಿಗೂ ಅಭಿವಂದಿಸುತ್ತೇನೆ.

ನಮ್ಮ ಹೊತ್ತಗೆ ಬೆಳಕು ಕಾಣುತ್ತಿದೆ ಎಂದು ಹಿಗ್ಗಿದರೂ ನೋವಿನ ಒಂದು ಎಳೆತ ಹಿಂದೆಳೆಯುತ್ತಲಿದೆ. ಶ್ರೀ. ಬೇಂದ್ರೆಯವರನ್ನು ಮೆಚ್ಚಿದ ಜೀವಿ, ಬೇಂದ್ರೆಯವರ ವಿಷಯವಾಗಿ ನಮಗೆ ನಚ್ಚು ಹುಟ್ಟಿಸಿದ ಜೀವಿ, ಬೇಂದ್ರೆಯವರು ಮೆಚ್ಚಿದ ಜೀವಿ, ನಮ್ಮೂರಿನ ಕಿನ್ನರಿ-ನನ್ನ ಸಹೋದರ ಬಾಳು ಎಂದಿನಿಂದಲೂ ಒತ್ತಾಯಮಾಡುತ್ತಿದ್ದ "ಅಯ್ಯೋ ಪುಟ್ಟ ಹಾಳು ಲೇಖನ ಬರೆಯುತ್ತೀರಿ ಬೇಂದ್ರೆಯವರನ್ನು ಕುರಿತು ಪ್ರಕಟಿಸಬಾರದೆ" ಎಂದು ದುಂಬಾಲು ಬೀಳುತ್ತಿದ್ದ. ಪಾಪ ಅವನು ಇಂದು ದಿವಂಗತ. ಮೇಲೆ ನಿಂತು ನಮ್ಮ ಆಟ ನೋಡಿದರೂ ನಮ್ಮೊಡನಿದ್ದು ಹರ್ಷಿಸಲಿಲ್ಲವಲ್ಲಾ ಎಂದು ನೋವು. ಅಲ್ಲದೆ ನಮ್ಮ ಪುಸ್ತಕವನ್ನು ಆ ಮಹನೀಯರ ದೃಷ್ಟಿ ಪಥಕ್ಕೆಳೆದು ಅವರಿಂದ ಹರಕೆ ಪಡೆಯಬೇಕೆಂದು ಮಾಡಿದಾಗಲೆ ಕಣ್ಮರೆ ಯಾದ ಕನ್ನಡದ ಕಣ್ವರ (ಶ್ರೀ) ವಿಷಯದಲ್ಲೂ ತುಂಬ ವ್ಯಥೆಪಡುತ್ತೇವೆ.

ಪ್ರೊ. ಮಾಳವಾಡರು ಎಂದಿನಿಂದಲೂ ನನ್ನ ಚಟವಟಿಕೆಗಳಿಗೆ ಪ್ರೋತ್ಸಾಹನೆಕೊಟ್ಟು ಸೌಹಾರ್ದ ದೃಷ್ಟಿಯಿಂದ ನೋಡುತ್ತ ಬಂದಿದ್ದಾರೆ.

ಈ ಗ್ರಂಥ ಸಂಪಾದನೆಯಲ್ಲಿ ಅವರ ಸಹಾಯ ಸಲಹೆಗಳಿಲ್ಲದಿದ್ದರೆ ಇದು ಅಚ್ಚಾಗುವ ಸಂಭವವೇ ಇರಲಿಲ್ಲ. ನಾನು ಪುಸ್ತಕ ಸಂಪಾದಿಸಿ ತೋರಿಸಿದಾಗ ಸಂತೋಷಗೊಂಡು 'ಮುನ್ನುಡಿ'ಯ ಹರಕೆಯಿತ್ತು ನನ್ನನ್ನು ಉಪಕೃತನನ್ನಾಗಿ ಮಾಡಿದ್ದಾರೆ. ಶ್ರೀಯುತರ ವಾತ್ಸಲ್ಯಕ್ಕೆ ನಾನೆಂತು ಕೃತಜ್ಞತೆ ಸೂಚಿಸಿದರೂ ಕಿರಿದೆ.

ಈ ಗ್ರಂಥಕ್ಕೆ ನಾನು ಲೇಖಕನಾದುದು ಅದರಲ್ಲಿಯೂ ಅಲಂಕಾರ ಲೇಖನವನ್ನು ಬರೆದುದು ನನ್ನ ವಿದ್ಯಾಗುರುಗಳಾದ ಪ್ರೊ. ಮುಗಳಿಯವರ ಶಕ್ತಿಯಿಂದ. ನನ್ನ ಲೇಖನ ಕಾರ್ಯದಲ್ಲಿ ಮಾತ್ರವಲ್ಲದೆ ಪುಸ್ತಕದ ಸಹಾಯಕರಾಗಿಯೂ ಮಂದಿರದ ಆರ್ಥಿಕ ನಿಲುಮೆಗೆ ಬಲವಿತ್ತಿದ್ದಾರೆ. ಅವರ ಋಣ ದೊಡ್ಡದು.

ಇದೇ ಸಮಯದಲ್ಲಿ ಗುರುಗಳಂತಿದ್ದ ಹಿರಿಯರಾದ ರಾಮಾಚಾರ್ಯ ಕಾಖಂಡಿಕಿ ಇವರಿಗೆ ನನ್ನ ಸಮಸ್ಕಾರಗಳನ್ನರ್ಪಿಸದಿದ್ದರೆ ಕೃತಘ್ನನಾಗಬೇಕಾದೀತು. ಲೇಖಕರಾದ ಶಾಂತ ಹಾಗೂ ಸೊಲ್ಲಾಪೂರ ಇವರ ಹೆಸರನ್ನು ಎತ್ತದೆ ಇರಲಾರೆ. ಸಾರಸ್ವತ ಸಂಗ್ರಹದಲ್ಲಿ ಶಾಂತನ ಸಹಾಯವಂತೂ ಹೇಳಹೆಸರಿಲ್ಲದಷ್ಟು.

ಯುದ್ಧ ನಿಂತಿತೆಂದು ಕಾರ್ಯ. ಪ್ರವೃತ್ತರಾದೆವು. ಆದರೆ ನಾಡು ಇನ್ನೂ ಸೂತಕದ ಮನೆ. ಯಾವ ಶುಭಕಾರ್ಯಕ್ಕೂ ಅವಕಾಶವಿಲ್ಲ. ಬೆಲೆಗಳು ಗೌರೀಶಂಕರದಿಂದ ಕೆಳಗಿಳಿಯಲೇ ಇಲ್ಲ. ಲೇಖಕರು ಹೊಮ್ಮಿ ಬರುವ ಎಷ್ಟೋ ವಿಚಾರಗಳನ್ನು ಹೊಟ್ಟೆಯಲ್ಲಿಯೇ ಹುಗಿಯಬೇಕು.

ನಮ್ಮೀ ಪ್ರಕಟನೆಯ ಕಾರ್ಯಕ್ಕೆ ಸಮಯ ಒಹಳೇ ಕಿರಿದಾಗಿದ್ದರೂ ಹೊತ್ತಿಗೆ ಸರಿಯಾಗಿ ಹೊತ್ತಗೆಯು ಗ್ರಾಹಕರ ಕೈಸೇರುವಂತೆ ಅಂದವಾಗಿ ಮುದ್ರಿಸಿಕೊಟ್ಟ "ಹಿಂದಮಾತಾ" ಅಚ್ಚುಕೂಟದ ವ್ಯವಸ್ಥಾಪಕರಾದ ಎಮ್. ಜಿ. ಪಾಲೇಕರರನ್ನು ಅಭಿನಂದಿಸದೆ ಇರಲಾರೆ.

ಅಂದವಾದ ಮುಖಚಿತ್ರವನ್ನು ಬರೆದು ಪುಸ್ತಕವನ್ನು ಆಕರ್ಷಕಗೊಳಿಸಿದ ಗೆಳೆಯ ಅಷ್ಟಪುತ್ರೆ ಮಾಸ್ತರರಿಗೆ ನನ್ನ ಅಭಿವಾದನೆಗಳು. ಅದರ ಪಡಿ ಅಚ್ಚನ್ನು ಅವಸರದಲ್ಲಿಯೇ ಸಿದ್ಧಮಾಡಿಕೊಟ್ಟ ಶಿಷ್ಯನಾದ ಕುಮಾರ

ಪ್ರೋತದಾರ ಕೃಷ್ಣನೂ ಶ್ಲಾಘನೀಯ. ಅದರಂತೆ ನಮ್ಮ ಹೊತ್ತಿಗೆಗೆ ಹಣ ಸಂಪಾದನೆ ಕಾರ್ಯದಲ್ಲಿ ಸಹಾಯಮಾಡಿದ ಗೆಳೆಯರಾದ ಶ್ರೀ. ಎ. ಬಿ. ದೇಶಪಾಂಡೆ ಹಾಗೂ ಶ್ರೀ. ಹಬ್ಬು ರಾಮಚಂದ್ರರಿಗೆ ಕೃತಜ್ಞತೆ ಸಲ್ಲಿಸುವದು ನನ್ನ ಧರ್ಮ. ಸಹಾಯಕರೆಂದೂ ಆಶ್ರಯದಾತರೆಂದೂ ಹಣ ಸಲ್ಲಿಸಿ ಅಚ್ಚುಕೂಟನ ಕೆಲಸಕ್ಕೆ ಅನುವು ಮಾಡಿಕೊಟ್ಟ ಮಹನಿಯರಿಗೂ, ಮೊದಲಲ್ಲಿಯೇ ಹಣ ಸಲ್ಲಿಸಿ ಗ್ರಾಹಕರಾದ ಕನ್ನಡನಾಡಿನ ಗ್ರಾಹಕ ವರ್ಗಕ್ಕೂ ನಾನು ನನ್ನ ನಮ್ರತೆಯನ್ನು ಸೂಚಿಸುತ್ತೇನೆ. ಇದೇ ಸಂದರ್ಭದಲ್ಲಿ 'ಮುನ್ನುಡಿಯಲ್ಲಾದ' ಮುದ್ರಣ ದೋಷಗಳನ್ನು ತಿದ್ದಿಕೊಟ್ಟ ತರುಣ ಸಾಹಿತಿಗಳಾದ ಶ್ರೀಮಾನ್ ಎನ್. ಕೆ. ಯವರಿಗೂ ನನ್ನ ಧನ್ಯವಾದಗಳು.

ನನ್ನೀ ಕಾರ್ಯವನ್ನು ತುಂಬಾ ಹೊಗಳಿ ಒಳ್ಳೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ ವಿದ್ಯಾಗುರುಗಳಾದ ಆಂಗ್ಲ ಕವಿ "ಅರ್ಮೆಂಡೋ ಮೇನೇ-ಝಿಸ್"ರಿಗೂ, ಮುಗಳಿಯವರಿಗೂ ನಮ್ರತೆಯಿಂದ ಬಾಗುತ್ತೇನೆ.

ಶ್ರೀ. ಬೇಂದ್ರೆಯವರು ಇನ್ನೂ ಇಂತಹ ಹಲವಾರು ಉತ್ಸವಕಾಣಲಿ, ಕನ್ನಡ ಸಾರಸ್ವತ ಸಂಗ್ರಹಕ್ಕೆ ಇನ್ನೂ ಅನೇಕ ಕಾಣಿಕ ತರಲಿ. ಕನ್ನಡ ಶಕ್ತಿ ಭಾರತಶಕ್ತಿಯಾಗಲಿ ವಿಶ್ವಶಕ್ತಿಯಾಗಲಿ ಬೇಂದ್ರೆಯವರು ವಿಶ್ವಕವಿಯಾಗಲಿ ಎಂದು ಹಾರೈಸುವೆ. ಅಚ್ಚಿನ ಕಾರ್ಯ ಅವಸರದಿಂದಾಗಬೇಕಾದುದರಿಂದ ಗ್ರಂಥವು ಮುದ್ರಣದೋಷಾಕರವಾಗಿರಬಹುದು. ಸಹೃದಯರು ಸಹನೆಯಿಂದ ಸ್ವಾಗತಿಸಬೇಕೆಂದು ಬಿನ್ನವಿಸುವೆ.

"ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ"

ಮಾಳಮಡ್ಡಿ ಹೈಸ್ಕೂಲ
ಧಾರವಾಡ.
೧೭-೨-೧೯೪೭

**ಸಂಪಾದಕ**

# ಮುನ್ನುಡಿ

ಗಲಗಲಿ ಗ್ರಾಮದ ಹಿರಿಯರು ಕಿರಿಯರು ಸೇರಿ ರಚಿಸಿದ ಈ ಹೊತ್ತಿಗೆಯಲ್ಲಿ ಹೊಸತನವಿದೆ, ಸಾಹಿತ್ಯ ವ್ಯಾಸಂಗವಿದೆ; ಕವಿಭಕ್ತಿಯಿದೆ. ಒಂದೇ ಊರಿನ ಲೇಖಕರ ಲೇಖನಗಳ ಸಂಗ್ರಹವೆಂಬುದು ಒಂದು ಬಗೆಯ ಹೊಸತನ; ತಂದೆ, ಮಗ ಇವರಿಬ್ಬರ ಲೇಖನಗಳು ಒಂದೆಡೆ ಬಂದಿರುವುದು ಇನ್ನೊಂದು ಬಗೆಯದು. ಮುನ್ನುಡಿಯನ್ನು ಬರೆಯುವ ನನ್ನ ಶಿಷ್ಯರೊಬ್ಬರ ಹಾಗು ನನಗೂ ಗುರುಗಳಾಗಬಹುದಾದಷ್ಟು ಹಿರಿತನವುಳ್ಳವರ ಲೇಖನಗಳು ಇಲ್ಲಿರುವುದು ಮಗದೊಂದು ಬಗೆಯದು.

ಆಧುನಿಕ ಕನ್ನಡ ಕವಿಯೊಬ್ಬನನ್ನು ಕುರಿತು ಎಂಟು ಲೇಖನಗಳು ಪ್ರಸ್ತುತ ಗ್ರಂಥದಲ್ಲಿವೆ. ಕವಿಯ ಪ್ರತಿಭೆ, ಅಲಂಕಾರಗಳು, ರಸಾವಿಷ್ಕರಣ, ನಾದಲೋಲುಪತೆ' ಹಸಿವೆಯನ್ನು, ಪ್ರೇಮವನ್ನು ಕುರಿತ ಕವನಗಳು ಎಂಬ ವಿಮರ್ಶಾತ್ಮಕ ವಿಷಯಗಳು ಇಲ್ಲಿವೆ. ಇವುಗಳಲ್ಲಿ ಸಾಹಿತ್ಯ ವ್ಯಾಸಂಗ ಎದ್ದು ಕಾಣುತ್ತಿದೆ.

ಹಿರಿಯ ಸಾಹಿತ್ಯ ವ್ಯಾಸಂಗಿಗಳಾದ ಶ್ರೀ. ಕೇಶವಶರ್ಮಾ ಗಲಗಲಿ ಅವರು 'ಶ್ರೀ' ಬೇಂದ್ರೆಯವರಿಗೆ ಬಹುಕಾಲದಿಂದ ಪರಿಚಿತರೂ ಆಪ್ತ ಸ್ನೇಹಿತರೂ ಆಗಿದ್ದಾರೆ. ಬೇಂದ್ರೆಯವರ ಕವಿತ್ವವನ್ನು ಕುರಿತ ಅವರ ಮೊದಲನೇಯ ಲೇಖನವು ಈ ಗ್ರಂಥಕ್ಕೆ ಒಂದು ಮುನ್ನುಡಿಯಂತಿದೆ. ಸಾಮಾನ್ಯರು ಆಡುವ ಭಾಷೆಯನ್ನು ಉಪಯೋಗಿಸಿಯೂ ಬೇಂದ್ರೆಯವರು ತಮ್ಮ ಕವನಗಳಲ್ಲಿ ತೋರುವ ಅಪೂರ್ವ ಸೌಂದರ್ಯವನ್ನು ಕುರಿತ ಪ್ರಶಸ್ತಿ ಇಲ್ಲಿದೆ. ಸಾಹಿತ್ಯವ್ಯಾಸಂಗದೊಂದಿಗೆ ಜ್ಯೋತಿಷದ ವ್ಯಾಸಂಗವನ್ನೂ ಮಾಡಿರುವ ಈ ಲೇಖಕರು ಕವಿ ಬೇಂದ್ರೆಯವರ ಪ್ರತಿಭೆಯನ್ನು ಅವರ ಕುಂಡಲಿಯ ಆಧಾರದಿಂದ ವಿವರಿಸಿದ್ದಾರೆ. ಅಲ್ಲದೆ ಬೇಂದ್ರೆಯವರ ಜನ್ಮಕುಂಡಲಿಯನ್ನು ವಿವರವಾಗಿ ಮತ್ತೊಂದು ಲೇಖನದಲ್ಲಿ ಚರ್ಚಿಸಿದ್ದಾರೆ. ಕೇಶವಶರ್ಮರ ಮಕ್ಕಳಾದ ಶ್ರೀ. ಜೋಶಿ ಅವರು ಅಂಬಿಕಾತನಯರ ಅಲಂಕಾರಗಳನ್ನು ಚರ್ಚಿಸಿದ್ದಾರೆ. ಅಲಂಕಾರಗಳ ವಿಮರ್ಶಾತ್ಮಕ ಅಭ್ಯಾಸ, ಅದನ್ನು ಬೇಂದ್ರೆಯವರ ಕವನಗಳಿಗೆ ಅನ್ವಯಿಸಿ ತೋರಿಸಿರುವ

ಜೋಶಿಯವರ ಜಾಣ್ಮೆಯನ್ನು ನಾನು ಮೆಚ್ಚಿಕೊಂಡು ಅಭಿಮಾನಪಡು ತ್ತೇನೆ. ಅಲಂಕಾರಗಳು ಬರಿಯ ಮೇಲ್ಹೊದಿಕೆಗಳಲ್ಲ; ಆದರೆ ಅವು ಲಾವಣ್ಯರೇಖೆಗಳೆಂದು ವಿವೇಚಿಸುವಲ್ಲಿ ನವೀನತೆಯಿದೆ. ಬರಲಿರುವ ಮಮ್ಮಟ, ಕಮ್ಮಟರ ಮುದ್ರೆಯ ಮಾತನ್ನು ಮಾರ್ಮಿಕವಾಗಿ ಹೇಳಲಾಗಿದೆ. ಅಲಂಕಾರದ ಇಂದ್ರಜಾಲಿಕ ಅಂಬಿಕಾತನಯರ ಕವನಗಳಲ್ಲಿ 'ಹಾಡಿ ನೊಂದಿಗೆ ಹಿಗ್ಗು ಹೊಮ್ಮುವಾಗ ಅಲಂಕಾರಗಳು ಮೈತಾಳಿ'ರುವದನ್ನು ಉದಾಹರಣೆಗಳೊಂದಿಗೆ ಇಲ್ಲಿ ಜೋಶಿಯವರು ಎತ್ತಿ ತೋರಿಸಿದ್ದಾರೆ.

'ರತಿದರ್ಶನ' ಎಂಬ ಇನ್ನೊಂದು ಅಭ್ಯಾಸಪೂರ್ಣ ಲೇಖನದಲ್ಲಿ ಪ್ರೇಮದ ಬಗೆಬಗೆಯ ಬಗೆಗಳನ್ನು ಬೇಂದ್ರೆಯವರು ತಮ್ಮ ಕವನಗಳಲ್ಲಿ ಬಳಸಿಕೊಂಡಿರುವದನ್ನು ಜೋಶಿಯವರು ವಿವೇಚಿಸಿದ್ದಾರೆ.

ಇನ್ನೊಬ್ಬ ಸಾಹಿತ್ಯವ್ಯಾಸಂಗಿಗಳಾದ ಶ್ರೀ. ಶಾಂತ ಗಲಗಲಿಯವರು ಬೇಂದ್ರೆಯವರ ರಸಸಿದ್ಧಿಯನ್ನೂ, ನಾದಲೋಲುಪತೆಯನ್ನೂ ಚರ್ಚಿಸುವ ಲೇಖನಗಳು ಹುರುಳುಳ್ಳವಾಗಿವೆ. ಶ್ರೀ. ಶಾಂತರು ಪೌರ್ವಾತ್ಯ ರೀತಿಯ ಸಾಹಿತ್ಯಶಾಸ್ತ್ರದ ವ್ಯಾಸಂಗಿಗಳಾಗಿದ್ದು ರಸವನ್ನು, ನಾದವನ್ನು ಲಾಕ್ಷಣಿಕರ ರೀತಿಯಲ್ಲಿ ವಿವೇಚಿಸಿದ್ದಾರೆ. ಮೃತ್ಯುವಿನಿಂದ ಅಮೃತದ ಕಡೆಗೆ ಕರೆ ದೊಯ್ಯುವ ಕವಿಯ ಮಾಯೆಯನ್ನು ರಸವೆಂದು ಹೇಳಿ ಅಂಬಿಕಾತನಯರ ರಸಸಿದ್ಧಿಯನ್ನು ಗುರುತಿಸಲಾಗಿದೆ. ಹೊಸಬಗೆಯ ಕಾವ್ಯವನ್ನು ಅನು ಸರಿಸಿ ಲಕ್ಷಣಶಾಸ್ತ್ರದ ಕೊಡೆಯೂ ತಿರುಗುವದನ್ನು ಸೂಚಿಸಿ ಅಂಬಿಕಾತನ ಯರ ರಸಗಂಗಾವತರಣವನ್ನು ಮೆಚ್ಚಿಕೊಂಡಿದ್ದಾರೆ. ಶೃಂಗಾರವನ್ನು ಜೀವನದ ಶಾಂತಿಗಾಗಿ ಒಲಿಸಿಕೊಂಡಿರುವ ಸಿದ್ಧಕವಿ ಬೇಂದ್ರೆಯವರ ಧ್ಯಾನ ಮಂತ್ರ 'ರಸೋಹಂ' ಎಂದಾಗಬೇಕೆಂಬ ಹಂಬಲವೂ ಇಲ್ಲಿದೆ. ಕವಿ ಲಕ್ಷ್ಮೀಶನ ನಾದಲೋಲುಪತೆಯನ್ನು ಗುರುತಿಸಿದ 'ನಾದಲೀಲೆ'ಯನ್ನು ಸೃಷ್ಟಿಸಿದ ಕವಿಯು 'ನಾದನಿಧಿ'ಯಾಗಿರುವದನ್ನು ಶಾಂತರು ಸಿದ್ಧಮಾಡಿ ತೋರಿಸಿದ್ದಾರೆ. ನಾದದ ಬಗೆಗಿರುವ ಚರ್ಚೆ ನಾದಸಿದ್ಧಿಯಲ್ಲಿ ಶಬ್ದಾ ಲಂಕಾರಗಳಿರುವ ಮಹತ್ವ ಈ ವಿವೇಚನೆಗಳು ಶ್ರೀ. ಶಾಂತರ ವ್ಯಾಸಂಗಕ್ಕೆ ಒಳ್ಳೆಯ ಸಾಕ್ಷಿಗಳಾಗಿವೆ.

ಒಕ್ಕಲತನ ವಿಭಾಗದ ಒಂದು ಸಣ್ಣ ನೌಕರಿಯಲ್ಲಿರುವ ಶ್ರೀ. ಸೊಲ್ಲಾ ಪೂರ ಅವರು 'ಅನ್ನದೇವರು' ಎಂಬ ಲೇಖನದಲ್ಲಿ ಅನ್ನದ ಸರಿಯಾದ

ವಿತರಣ; ಹಸಿವೆಯ ಕೂಗು ಈ ವಿಚಾರಗಳು ಬೇಂದ್ರೆಯವರ ಕವನಗಳಲ್ಲಿ ಒಡಮೂಡಿರುವದನ್ನು ಪರಿಣಾಮಕಾರಕ ರೀತಿಯಲ್ಲಿ ಮಂಡಿಸಿದ್ದಾರೆ.

ಇನ್ನುಳಿಯಿತು ಕವಿಭಕ್ತಿಯ ವಿಷಯ. ಈ 'ವಾಙ್ಮಯದರ್ಶನ'ವೆ ಆ ಕವಿಭಕ್ತಿಯ ಪ್ರತೀಕ. ಬೇಂದ್ರೆಯವರ ಹುಟ್ಟು ದಿನದ ಕಾಣಿಕೆಯಾಗಿರುವ ಈ ಗ್ರಂಥ ಲೇಖಕರ ಕವಿಭಕ್ತಿಯನ್ನು ಸಾರಿ ಹೇಳುತ್ತದೆ. ಅಖಿಲ ಕರ್ನಾಟಕದ ಅಭಿಮಾನದ ಕವಿಯಾದ 'ಅಂಬಿಕಾತನಯ'ರ ಬಗೆಗೆ ಗಲಗಲಿ ಗ್ರಾಮವು ತನ್ನ ಗೌರವವನ್ನು ಈ ಮೂಲಕ ಸೂಚಿಸುತ್ತಿದೆ. ಗಲಗಲಿಯ ಗ್ರಾಮವಾಗಲಿ ಹಲಸಂಗಿಯ ಹಳ್ಳಿಯಾಗಲಿ ಬೆಂಗಳೂರು ನಗರವಾಗಲಿ ಚಿಕ್ಕಮಗಳೂರಿನ ಮೂಲೆಯಾಗಲಿ ಸಾಧನಕೇರಿಯ ಬೀದಿಯಲ್ಲಿ ನಡೆದಿರುವ ಒಕ್ಕಲುಮಕ್ಕಳಲ್ಲಾಗಲಿ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಲ್ಲಾಗಲಿ ಎಲ್ಲೆಲ್ಲೂ ಬೇಂದ್ರೆಯವರ ಹೆಸರು ಹಾಡುಗಳು ಮನೆಯ ಮಾತಾಗಿವೆ. ತನ್ನ ಸಮಕಾಲೀನರಿಂದ ಮನ್ನಣೆಪಡೆಯುತ್ತಿರುವ ಈ ಕವಿ ಧನ್ಯ. ಈ ಧನ್ಯತೆಯಲ್ಲಿ ತಮ್ಮ ಪಾಲನ್ನು ಪಡೆಯಲು ಗಲಗಲಿ ಗೆಳೆಯರು ಈ 'ವಾಙ್ಮಯದರ್ಶನ'ವನ್ನು ನೀಡಿದ್ದಾರೆ.

ಯಾರ ಉತ್ಸಾಹದಿಂದ ಈ 'ದರ್ಶನ' ಪ್ರಕಟವಾಗುತ್ತಿದೆಯೋ ಆ ಜೋಶಿಯವರು ನನ್ನ ವಿದ್ಯಾರ್ಥಿಗಳೆಂಬ ಅಭಿಮಾನ ಬೇಂದ್ರೆ ಜನ್ಮದಿನೋತ್ಸವ ಸಮಿತಿಯ ಅಧಿಕಾರಿ ವರ್ಗದವರಲ್ಲಿ ಒಬ್ಬನೆಂಬ ಹೊಣೆಗಾರಿಕೆ, ಬೇಂದ್ರೆಯವರ ವ್ಯಕ್ತಿತ್ವ ವಾಙ್ಮಯಗಳ ಬಗೆಗೆ ನನಗಿರುವ ಗೌರವ, ಈ ಕಾರಣಗಳಿಂದಾಗಿ ನಾನು ಈ 'ವಾಙ್ಮಯದರ್ಶನ'ದ 'ಪೂರ್ವದರ್ಶನ'ವನ್ನು ಸಂತೋಷದಿಂದ ಕೃತಜ್ಞತೆಯಿಂದ ಮೂಡಿಸುತ್ತಿದ್ದೇನೆ.

ಪ್ರಾಧ್ಯಾಪಕ ನಿಲಯ<br>ಧಾರವಾಡ<br>೧೨-೧-೧೯೪೬

**ಸ. ಸ. ಮಾಳವಾಡ**<br>ಎಂ. ಎ.

# ಒ ಳ ಪಿ ಡಿ


| | | ಪುಟ |
|---|---|---|
| ೧. ಬೆಂದ್ರೆ (ಕವಿತೆ) | ಜಾತವೇದ | |
| ೨. ಬೇಂದ್ರೆಯವರ ಕವಿತ್ವ | ಪಂ. ಕೇಶವ ಶರ್ಮಾ ಗಲಗಲಿ | ೧ |
| ೩. ಅಂಬಿಕಾತನಯರ ಅಲಂಕಾರಗಳು | ಎಚ್. ಜಿ. ಜೋಶಿ ಬಿ.ಎ.(ಆನರ್ಸ) | ೮ |
| ೪. ರಸ-ಸಿದ್ಧಿ | ಶಾಂತ ಗಲಗಲಿ | ೨೦ |
| ೫. ಅನ್ನದೇವರು. | ಎಸ್. ಎಮ್. ಸೋಲಾಪೂರ | ೩೫ |
| ೬. ನಾದಲೀಲೆ, | ಶಾಂತ ಗಲಗಲಿ | ೪೩ |
| ೭. ಬೇಂದ್ರೆಯವರ ಪ್ರತಿಭಾವಿಲಾಸ | ಪಂ. ಕೇಶವ ಶರ್ಮಾ ಗಲಗಲಿ | ೬೩ |
| ೮. ರತಿದರ್ಶನ, | ಎಚ್. ಜಿ. ಜೋಶಿ. ಬಿ. ಎ. (ಆನರ್ಸ) | ೭೧ |
| ೯. ದತ್ತರ ದೈವವಿವೇಚನೆ, | ಪಂ. ಕೇಶವ ಶರ್ಮಾ ಗಲಗಲಿ | ೮೫ |

# ಬೇಂದ್ರೆ

ಕನ್ನಡದಾಗ ಕವಿಗೋಳ್ ಅಂದ್ರೆ
ಒಬ್ಬನೇ ಒಬ್ಬ ಬೇಂದ್ರೇ ।
ಬಾಕೀ ಕವಿಗೋೞ್ ಎಲ್ಲಾ ಸುಮ್ಕೆ
ಬೆಳಕೊಂಡ್ ಬಂದ ತೊಂದ್ರೆ ॥ ೧ ॥

ಮಾತೀನ್ಹೆಣ್ಣೀನ್ ಕಾಲ್ಗೆಬಿದ್ದು
ಕೈ ಹಿಡಿದೋರು — ಸಾಲ್ಗೆ
ಮಾತೀನ್ಹೆಣ್ಣೆ 'ಕೈಹಿಡಿ'ಯಂತ
ಬಿಪ್ಪಡದ್ ಬೇಂದ್ರೇನ್ ಕಾಲ್ಗೆ ॥ ೨ ॥

ಬೇಂದ್ರೆ ಹಾಡ್ಲಿಕ್ ನಿಂತಾಂತಂದ್ರೆ
ಹಾವಿಗ್ಹಾಕಿದ್ ಮಂತ್ರಾ
ತಲೆಯನ್ ತೂಗ್ಸೊ ಹಾಡಿನ್ ರೀತಿ
ಮಾಟಾ ಮಾಡೋನ್ ತಂತ್ರಾ ॥ ೩ ॥

ಹಾಡೋದ್ ಮುಗದ್ರು ಕಿವಿಯೊಳಗೇನೊ
ಗುಂಯ್‌ಗುಡ್ತದ ಗಾನಾ
ಹಾಡಿದ್ ಬೇಂದ್ರೆನ್ ಹಾಡಿಗ್ ತಾನೆ
ಹಿಡಿದಿದ್ ಹೃದಯದ್ ತಾನಾ ॥ ೪ ॥

ನವಿಲೀನ್ ಬಿಟ್ಟು ಶಾಂಸ್ದಾದೇವಿ
ಬೇಂದ್ರೆನ್ ನಾಲ್ಗೀ ಏರಿ
ಸ್ವರ್ಗಾ ಬಿಟ್ಟು ಕನ್ನಡಕ್ ಇಳಿದು
ನಿಂತಾಳ್ ಬೂಮಿ ಸೇರಿ ॥ ೫ ॥

"ಪಾಲಾಫೂ" ಬಿಟ್ಯಾಂದ್ರೊಮ್ಮೆ
ಕಲ್ಲೀನ್ ಕಣ್ಣಾಗ್ ಸೀರು
'ಸಾಯೋಆಟಾ' ಆಡ್ತಾಂತಂದ್ರೆ
ನಕ್ಕೀ ಸಾಯ್ ಬೇಕ್ ಯಾರು ‖ ೬ ‖

ಹುಟ್ಯಾನಗೀ ಕ್ಯಾನಿಗಿ ಮುಡಿದಾವ
ಅಂತ ಹೇಳ್ತಾನ್ ಆತ
ಮಾತನ್ ಆಡ್ಲಿ ಆಡ್ದೇ ಇರ್ಲಿ
ಕಂಡವ ಮೈಮನ ಸೋತ ‖ ೭ ‖

ಮುಗಿಯದ್ ಹಾಡೋಡ್ ಮೂಡಿರ್ತದ
ಚೇಂದ್ರೆನ್ ಮಾರಿ ಮ್ಯಾಲ
ಕಿರಿದಾಗಿದ್ರು ಭಾರಿ 'ಆಳ'
ಎರಡೇ ಕಣ್ಗೆ ಸಾಲಾ ‖ ೮ ‖

ಜಾತವೇದ

# ಶ್ರೀ. ಬೇಂದ್ರೆಯವರ ಕವಿತ್ವ

ಲೇ:— **ಪಂಡಿತ ಕೇಶವಶರ್ಮಾ ಗಲಗಲಿ**

"ತತ್ ತತ್ಸಮುಗ್ರ ಬಹುಶಾಸ್ತ್ರ ವಿಮರ್ಶ ಸಿದ್ಧ
ವೈದಗ್ಧ್ಯ ದಿಗ್ಧಮತಯೋ ಬಹವಃ ಕವಂತಾವುತ್ |
ಯತ್ ಕಿಂಚಿದಸ್ತಿ ತು ಮಹಾಕವಿ ವಾಗ್ರಹಸ್ಯಂ
ಸ್ವಪ್ನೇಪಿ ತಸ್ಯ ಕಿಲತೇ ನದಿಶಂ ಸ್ಪೃಶಂತಿ

ಕಾಶ್ಮೀರದ ಕವಿಯಾದ ಮಂಖಕನು ಬಹು ದಿನಗಳ ಹಿಂದೆಯೇ ಈ ಪದ್ಯವನ್ನು ಬರೆದಿಟ್ಟಿರುವನು. ಆಯಾ ಶಾಸ್ತ್ರಗಳ ವಿಮರ್ಶನದಿಂದ ಸಿದ್ಧ ದಾದ ಪಾಂಡಿತ್ಯದಿಂದ ಲೇಪಿಸಲ್ಪಟ್ಟ ಬುದ್ಧಿವಂತರು ಬೇಕಾದಷ್ಟು ಜನರು ಕವಿತೆಗಳನ್ನ ಬರೆಯಲಿ, ಆದರೆ ಆ ಮಹಾಕವಿ ವಾಕ್ಯದ ರಹಸ್ಯವನ್ನು ಅವರು ಸ್ವಪ್ನದಲ್ಲಿ ಕೂಡಾ ಮುಟ್ಟಲಾರರು ಶ್ರೀ. ಬೇಂದ್ರೆಯವರ ಕವಿತೆ ಗಳನ್ನು ಕೇಳಿದಾಗ ಮತ್ತು ಓದಿದಾಗ ನನಗೆ ಈ ಕವಿತೆ ನೆನಪಿಗೆ ಬರುತ್ತದೆ. ಈ ಆಧುನಿಕ ಮಹಾಕವಿಯ ವಾಣಿಯಲ್ಲಿ ಯಾವ ಶಕ್ತಿಯನ್ನು ಪ್ರಕೃತಿ ದೇವಿಯು ಅಡಕವಾಗಿಟ್ಟಿರುವಳೋ ನಾನರಿಯೆನು! ಅನೇಕರು ಈ ಕವಿಯನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ಒಬ್ಬನಿಗೂ ಆ ರಹಸ್ಯವು ತಿಳಿಯದು. ಮಂಖಕನೆಂದದ್ದು ಸರ್ವಥಾ ನಿಜವದೆ. ಬೇಂದ್ರೆಯವರಂತೆ ಅನೇಕ ಉಚ್ಚ ಪದವೀಧರರಿದ್ದಾರೆ. ಶಾಸ್ತ್ರಪಾರಂಗತರೂ ಇರಬಹುದು. ಆದರೆ ಯಾವ ಕವಿಯ ವಾಣಿಯನ್ನು ಕೇಳಿದಕೂಡಲೇ ಸಹಸ್ರಾರು ಜನರು ಮಂತ್ರ ಮುಗ್ಧರಂತೆ ಆಕರ್ಷಿತರಾಗುವರೋ ಅಂತಹ ಕವಿಯನ್ನು ಕಾಣುವದು ಅಪರೂಪ, ದುರ್ಲಭ, ಅಸಾಧ್ಯ.

ಕಬೀರ, ತುಕಾರಾಮ, ರಾಮದಾಸ ಮೊದಲಾದ ಸಾಧುಕವಿಗಳು ನಮ್ಮ ಭರತ ಖಂಡದಲ್ಲಿ ಆಗಿ ಹೋದರು. ನಮ್ಮ ಕರ್ನಾಟಕವೂ ಪುರಂದರ, ಕನಕದಾಸ ಮೊದಲಾದ ಸತ್ಕವಿಗಳನ್ನು ಕಂಡಿದೆ. ವಂಗವೂ ಆಧುನಿಕ ಕಾಲದಲ್ಲಿ ರವೀಂದ್ರರನ್ನು ಪುಟ್ಟಿಸಿ, ಕವಿತ್ವ ಭಾಗ್ಯದ ಚರಮ ಸೀಮೆ

ಯನ್ನು ಕಂಡಿತು. ನಮ್ಮ ಕರ್ನಾಟಕವೂ ಈಗಿನ ದುರ್ಭಾಗ್ಯದ ತನ್ನ ದಿನಗಳಲ್ಲಿ ಶ್ರೀ. ಬೇಂದ್ರೆಯವರಂತಹ ಕವಿಗಳನ್ನು ಹುಟ್ಟಿಸಿ ಕನ್ನಡಿಗರಿಗೆ ಆಶಾದಾಯಕ ದಿನಗಳನ್ನು ತಂದಿದೆ. ಶ್ರೀ. ಬೇಂದ್ರೆಯವರ ಕಾವ್ಯವು ಅನೇಕ ಕನ್ನಡ ತರುಣರಿಗೆ ಹೊಸ ಸ್ಫೂರ್ತಿಯನ್ನುಂಟುಮಾಡಿದೆ. ಅದು ತನ್ನದೊಂದು ಪರಂಪರೆಯನ್ನೇ ನಿರ್ಮಿಸುತ್ತದೆಯೋ ಏನೋ ಅನ್ನುವಂತೆ ಅನೇಕ ಸಾಂಪ್ರದಾಯಿಕ ಗೆಳೆಯರ ಗುಂಪುಗಳನ್ನು ಹುಟ್ಟಿಸಿದೆ. ಶ್ರೀಮಾನ್ ಬೇಂದ್ರೆಯವರ ಕವಿತೆಯನ್ನು ಮೊದಲು ನಾನು ಓದಿದ್ದು ೧೯೨೦ರ ಸುಮಾರಿನಲ್ಲಿ. ವಾಗ್ಭೂಷಣದ ಸಂಚಿಕೆಯೊಂದರಲ್ಲಿ ಮುದ್ದಣನ ಮೇಲೆ ಬರೆದ ಕವಿತೆ ಅದು. ಅದನ್ನು ನೋಡಿ ಇವನೊಬ್ಬ ಪ್ರತಿಭಾಶಾಲಿ ಕವಿ ಕನ್ನಡದಲ್ಲಿ ಹುಟ್ಟುತ್ತಲಿದ್ದಾನೆ ಎಂದೆನಿಸಿತು. ಬಳಿಕ ೧೯೨೧ ರಲ್ಲಿ ನನಗೆ ಬೇಂದ್ರೆಯವರ ಪ್ರಥಮ ಪರಿಚಯವಾಯಿತು ಮಿ. ಶಂ. ಬಾ. ಜೋಶಿಯವರ ಮುಖಾಂತರ. ಅಂದಿನಿಂದ ಅನೇಕಸಾರೆ ಅವರ ಕವಿತೆಗಳನ್ನು ಅವರ ಬಾಯಿಂದಲೇ ಕೇಳುವ ಸುಯೋಗವೇ ದೊರೆತಿರುವದು. ನಿರ್ಮಾತ್ಸರ್ಯದಿಂದ ಅವರ ಕವಿತೆಗಳನ್ನು ಕೇಳಿದರೆ ಪಾಮರರಿಂದ ಪಂಡಿತರ ವರೆಗೆ ಎಲ್ಲರೂ ಅವರ ಕವಿತೆಗಳನ್ನು ಮೆಚ್ಚದಿರಲಾರರು. ಅವರ ಕವಿತೆಗಳಲ್ಲಿ ರಳಕುಳ ಕ್ಷಳಗಳ ಲಾಗುವೇಗಗಳಿರಲಿಕ್ಕಿಲ್ಲ. ಅಥವಾ ಶಬ್ದಮಣಿದರ್ಪಣ ಶಬ್ದಾನುಶಾಸನಗಳ, ಸೂತ್ರೋದಾಹರಣಗಳು ಸಿಕ್ಕಲಿಕ್ಕಿಲ್ಲ. ಆದರೆ ಅಂತಹ ಕವಿತ್ವದ ಕುಸ್ತೀ ಆಟವೆಲ್ಲ ಹಿಂದಾಗಿ ಹೋಯಿತು. ಆ ಕಸರತ್ತಿಗೆ ಈಗ ರಾಜಾಶ್ರಯವೂ ಇಲ್ಲ. ಆದರೆ ನಿಜವಾದ ಕವಿತ್ವವು ಬೇರೆಯೇ ಆಗಿದೆ. ಬೇರೆಯಾಗಿಯೇ ಇದೆ. ಅಂತಹ ಕವಿತ್ವಶಕ್ತಿ ಬೇಂದ್ರೆಯವರಲ್ಲಿ ಇದೆಯೆಂದು ನಾವು ಧಾರಾಳವಾಗಿ ಹೇಳಬಹುದು. ಬೇಂದ್ರೆಯವರೆಂದರೆ ನಾಲ್ಕರ್ಥಗಳಲ್ಲಿ ಹಿಗ್ಗಿಸಿ ಹೇಳುವ ಶ್ರೀಹರ್ಷರಲ್ಲ. ವ್ಯಾಕರಣ ನಿಯಮಗಳಿಗೆ ಉದಾಹರಣಾತ್ಮಕವಾಗಿ ಪದ್ಯಗಳನ್ನು ಬರೆದ ಭಟ್ಟಿಯೂ ಅಲ್ಲ. ಸೊಗಸಿನ ಸುಖದ ಸ್ವಾತಂತ್ರ್ಯದ ನೆಲೆವೀಡಾದ ಭರತ ಖಂಡದಲ್ಲಿ ಹುಟ್ಟಿದ ವಿಲಾಸ ಕವಿ ಕಾಳಿದಾಸರೂ ಅಲ್ಲ. (ಆದರೆ ಅವರ ನೊಂದ ಬೆಂದ ಹೃದಯದಿಂದ ಹೊರಬಿದ್ದ ಗೀತಗಳು ಕಾಲಿದಾಸನ ಗೀತಗಳನ್ನು ಸರಿದೂಗಲಿಕ್ಕೆ ಹಚ್ಚಿವೆ.) ಭಗ್ನ ಮನೋರಥ ಭವಭೂತಿಯಂತೆ "ಯಥಾ ಸ್ತ್ರೀಣಾಂ ತಥಾ ವಾಚಾಂ ಸಾಧುತ್ವೇ ದುರ್ಜನೋ ಜನಃ" ಎಂದು ನುಡಿಯದಿದ್ದರೂ

ಆರಂಭಕಾಲದಲ್ಲಿ ಅವರ ಕವಿತೆಗಳು ಪಾಂಡಿತ್ಯಾಹಂಕಾರಿಗಳ ಕೋಪಾಟೋಪಕ್ಕೂ ಕಾರಣವಾಗಿವೆ.

ಶ್ರೀ. ಬೇಂದ್ರೆಯವರ ಕವಿತೆಗಳನ್ನು ನಾನು ಪ್ರೀತಿಸುವದು ಎರಡು ಕಾರಣಕ್ಕಾಗಿ. ಶಬ್ದಮಣಿದರ್ಪಣ ಶಬ್ದಾನುಶಾಸನಗಳ ಸೂತ್ರಗಳ ಸೆರೆಯಲ್ಲಿ ಸಿಕ್ಕು ನರಳುತ್ತಿರುವ ಕವಿತಾ ಕಾಮಿನಿಯನ್ನು ಬಂಧನದಿಂದ ಬಿಡಿಸಿ ಆಕೆಯ ಸ್ವಚ್ಛಂದ ರಮಣೀಯ ವಿಹಾರಕ್ಕೆ ಆಸ್ಪದಮಾಡಿಕೊಟ್ಟಿತು. ಸ್ವಚ್ಛಂದ ರಮಣೀಯ ವಿಹಾರವೆಂದು ಬೆದರುವ ಕಾರಣವಿಲ್ಲ. ಕವಿತೆಯ ಸ್ವಚ್ಛಂದ ವಿಹಾರವನ್ನು ಓರ್ವ ಪ್ರಾಚೀನ ಕವಿಯೇ ಅಭಿನಂದಿಸಿದ್ದಾನೆ. ಸತ್ಯವಾಗಿ ಮನೆ ಮನೆಗೆ ಕವಿಗಳಿರುವರು. ಅವರ ಕವಿತೆಗಳು ತಮ್ಮ ಹರ್ಮ್ಯಗಳಲ್ಲಿ ಕುಲಕನ್ನಿಕೆಯರಂತೆ ಗೌರವವನ್ನು ಪಡೆಯುವವು. ಆದರೆ ಯಾರ ಕವಿತೆ ವಾರಾಂಗನೆಯಂತೆ ವಿಹರಿಸುತ್ತ ಅನೇಕರ ಮನಸ್ಸನ್ನು ಸೆಳೆಯುವದೋ ಅವನೇ ಮಹಾಕವಿ. ಶ್ರೀ. ಬೇಂದ್ರೆಯವರ ಕವಿತೆ ಈಗಾಗಲೇ ಹಳ್ಳಿಹಳ್ಳಿಗಳಲ್ಲಿ ಕೂಡ ಸಂಚರಿಸಿ ತರುಣರ ಮನಸ್ಸನ್ನು ಎಳೆದುಕೊಂಡಿದೆ. ಹಳ್ಳಿಯ ಜನರಿಗೆ ಕೂಡ ತಿಳಿಯುವ ಭಾಷೆಯಲ್ಲಿ ಬರೆದರೂ, ಅವರ ಉದಾತ್ತ ಕಲ್ಪನೆಯ ಸೊಗಸು ಬಲ್ಲವರನ್ನೂ ಬೆರಗುಗೊಳಿಸಿದೆ. ಅವರ ಅಲಂಕಾರಗಳ ಸೊಗಸು ಆಲಂಕಾರಿಕರನ್ನು ಮುಗ್ಧಗೊಳಿಸಿದೆ. ಅವರ—

"ಹೊಸ ಹರಯ ಈಸತಿತ್ತೊ ಹೊಳಿಯಾಗ" ಎಂಬಲ್ಲಿ ಅತಿಶಯೋಕ್ತಿ ಅಲಂಕಾರವು ತುಂಬಾ ಶೋಭೆಯನ್ನುಂಟುಮಾಡಿದೆ. ಉಪಮೇಯ ಪದಗಳನ್ನು ಬಚ್ಚಿಟ್ಟು ಕೇವಲ ಉಪಮಾನ ಪದಗಳಿಂದ ವರ್ಣಿಸುವದು ಅತಿಶಯೋಕ್ತ್ಯಲಂಕಾರ. ಅನಾಕಾಶದಲ್ಲಿ ಗಲಿತ ಹರಿಣಃ ಶೀತಕಿರಣಃ ಎಂಬಂತೆ ತರುಣ ತರುಣಿ ಈ ಉಪಮೇಯ ಪದಗಳನ್ನು ಉಲ್ಲೇಖಿಸದೆ. "ತಾವರಿಯೊಂದು ಬಾಯ್ ಬಿಡುತಿತ್ತೊ'' ಇತ್ಯಾದಿ ಉಪಮಾನ ಪದಗಳಿಂದಲೇ ನಿಗೀರ್ಯಾಧ್ಯವಸಾನವನ್ನು ಮಾಡಿರುವರು. ಇಂತಹ ಸುಂದರ ಅಲಂಕಾರಗಳೆಷ್ಟೋ ಅವರ ಸಾಮಾನ್ಯವಾಗಿ ತೋರುತ್ತಿರುವ ಕವಿತೆಗಳಲ್ಲಿ ಕಂಡುಬರುವವು. ಕಳೆಗುಂದಿದ ಮುಖವನ್ನು ಹೋಲಿಸುವಾಗ ಬೇಂದ್ರೆಯವರ ಉಪಮೆಯ ಸೌಂದರ್ಯವನ್ನು ನೋಡಿರಿ. "ಹುಣ್ಣಿಮೆಯ ಚಂದಿರನ ಹೆಣಾ ಬಂತೋ ಮುಗಿಲಾಗ ತೇಲುತ ಹಗಲ"

“ಲಕ್ಷ್ಮೀರ್ವಿನೋದಯತಿ ಯೇನ ದಿಗಂತಲಂಬೀ ಸೋಪಿತ್ವ ದಾನನ· ರುಚಿಂ ವಿಜಹಾತಿ ಚಂದ್ರಃ” ಮಲಗಿದ ರಘುರಾಜನನ್ನು ಎಬ್ಬಿಸಿದಾಗ ಹಾಡುವ ಸುಂದರ ವೈತಾಲಿಕರ ಕಾಲಿದಾಸನ ಗೀತಗಳನ್ನು ನೆನಪಿಗೆ ತಂದು ಕೊಳ್ಳಿರಿ. ಕಳೆಗುಂದಿದ ಮುಖವು ಪ್ರಾತಃಕಾಲದ ಚಂದ್ರನಂತೆ ಅಲ್ಲ ಅದು ಚಂದ್ರನ ಹೆಣ ಮುಗಿಲಲ್ಲಿ ತೇಲುತ್ತಿದೆ. ಇಂತಹ ಸುಂದರ ಕಲ್ಪನೆ ಪ್ರತಿಭೆ ಇಲ್ಲದೆ ಬಡಬಡಿಸುವ ಕವಿಗೆ ಬರುವದುಂಟೆ? ಇನ್ನೊಂದು ಕವಿತೆಯಲ್ಲಿ ಶುಕ್ರಚಂದ್ರಯುತಿಯನ್ನು ಬಣ್ಣಿಸುವರು. “ಬಿದಿಗಿ ಚಂದ್ರನಾ ಜೊಗಚೀ ನಗೆ ಹೂ ಮೆಲ್ಲಗ ಮೂಡಿತ್ತ ಮ್ಯಾಲಕ ಬೆಳ್ಳಿನ ಕೂಡಿತ್ತ” ಈ ಶುಕ್ರಚಂದ್ರ ಯುತಿ,ಎಷ್ಟು ಫಲಿತ ಶಾಸ್ತ್ರದಲ್ಲಿ ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದಾಗಿ ಈ ಕವಿತೆ ಸಾಹಿತ್ಯ ರಸಿಕ ಲೋಕದಲ್ಲಿ ಮೆರೆಯುತ್ತಿದೆ. “ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ” ಮೊದಲಾದ ಕವಿತೆಗಳಲ್ಲಿ ತೀರ ಸಾಮಾನ್ಯರ ಭಾಷೆ ಯಲ್ಲಿ ಬರೆದಿದ್ದರೂ ತೋರುವ ಅಪೂರ್ವ ಸೌಂದರ್ಯವನ್ನು ಕರ್ನಾಟಕ ದಲ್ಲಿ ಇಂದಿನ ವರೆಗೆ ಯಾರೂ ಹಬ್ಬಿಸಿರಲಿಲ್ಲ. ಆದುದರಿಂದ ಇವರಿಗೆ ಕರ್ನಾಟಕದಲ್ಲಿ “ಕನಿಷ್ಠಾಧಿಷ್ಠಿತ ಕಾಳಿದಾಸಃ” ಎಂಬ ಬಿರುದು ಸಲ್ಲುವ ದೆಂದು ನನಗೆ ತೋರುವದು. ಜಯದೇವನು ಸಂಸ್ಕೃತದಲ್ಲಿ ಗೀತಗೋವಿಂದ ವನ್ನು ಬರೆದಿರುವನಷ್ಟೇ ಅವನ ಪದಲಾಲಿತ್ಯದಿಂದ ಭಕ್ತಿರಸದ ಹಿರಿಮ ಯಿಂದ ಆ ಕಾವ್ಯವು ಸಂಸ್ಕೃತ ಸಾಹಿತ್ಯದಲ್ಲಿ ಉಚ್ಚಸ್ಥಾನವನ್ನು ಪಡೆದಿದೆ. ಆದರೆ ಅಷ್ಟು ಸ್ವಾಭಾವಿಕ ಲಾಲಿತ್ಯವನ್ನು ಪಡೆಯದ ಸಂಸ್ಕೃತ ಸಹಕಾರ ವಿಲ್ಲದೆ ಅಷ್ಟು ಮಧುರತೆಯನ್ನು ಪಡೆಯದ ದ್ರಾವಿಡವರ್ಗಕ್ಕೆ ಸೇರಿದ ಕನ್ನಡ ಭಾಷೆಯಲ್ಲಿ ರಸವತ್ತಾದ ಗೇಯಗೀತಗಳನ್ನು ಬರೆದು ಬೇಂದ್ರೆಯವರು ಕನ್ನಡಿಗರಿಗೆ ಶಾಶ್ವತ ಉಪಕಾರವನ್ನು ಮಾಡಿದ್ದಾರೆ. ಜನರಾಡುವ ಸಾಮಾನ್ಯ ಭಾಷೆಯಲ್ಲಿ ಉದಾತ್ತ ಕಲ್ಪನೆಗಳನ್ನು ತರುವದು ಶಕ್ಯವೇ ಎಂದು ಎಷ್ಟೋ ದಿವಸ ನಾನು ಚಿಂತಾಕ್ರಾಂತನೂ ಶಂಕಾಕುಲನೂ ಆಗಿದ್ದೆನು. ಬೇಂದ್ರೆಯವರ ಕವಿತೆಗಳನ್ನು ಓದಿದಂತೆ ಅಲ್ಲ ಕೇಳಿದಂತೆ, ಆ ಕಲ್ಪನೆ, ಆ ಶಂಕೆಗಳು ಮಾಯವಾದವು. ಮೇಘಸಂದೇಶದಂತಹ ಕಾವ್ಯವನ್ನು ಕನ್ನಡ ದಲ್ಲಿ ಇಳಿಸಬಹುದೇ? ಆ ಕಾಳಿದಾಸನ ಉದಾತ್ತ ಭಾವನೆಗಳನ್ನು ಅಷ್ಟೇ ಆನಂದವು ಜನಿಸುವಂತೆ ಕನ್ನಡಕ್ಕೆ ತರಬಹುದೇ? ಶಬ್ದಕ್ಕೆ ಪ್ರತಿಶಬ್ದವನ್ನು ತರಬಹುದು. ತಂದವರೂ ನಮ್ಮಲ್ಲುಂಟು., ಬೇಂದ್ರೆಯವರು ತಂದ ಹೊಸ

ಛಂದಸ್ಸಿನಲ್ಲಿ ಆ ಗೀತವನ್ನು ಕೇಳಿ ನೋಡಿರಿ. ಕೇವಲ ಓದಬೇಡಿರಿ. ಸಾಲೆಯ ಹುಡುಗರಿಗೆ ಈ ಗೀತಗಳನ್ನು ಕಲಿಸಿ ಕೇಳಿ ಆನಂದಪಟ್ಟಿದ್ದೇನೆ ನಾನು. ಆ ಯಕ್ಷನ ಮನೆಯ ವರ್ಣನೆ, ಆ ಉಜ್ಜನಿಯ ವರ್ಣನೆ, ಅವಶ್ಯ ವಾಗಿ ಆ ಸಂಸ್ಕೃತ ಮೇಘಸಂದೇಶವನ್ನು ಮುಂದಿಟ್ಟುಕೊಂಡು ನೋಡಿರಿ. ಕನ್ನಡಲ್ಲಿ ತರಲಾಗದ ಸೌಂದರ್ಯವನ್ನು ಬೇಂದ್ರೆಯವರು ಇಲ್ಲಿ ತಂದು ಸೂಸಿಬಿಟ್ಟಿದ್ದಾರೆ. ಬೇಂದ್ರೆಯವರು ತಂದ ಛಂದಸ್ಸೇ ಇಲ್ಲಿ ಮೊದಲು ಕರ್ಣರಂಜಕವಾಗಿದೆ. "ಕೈ ಎತ್ತರಾದ ಮಂದಾರವೊಂದು ಇದೆ ಗೊಂಚ ಲಾಗಿ ಬಾಗಿ'' "ಹಸ್ತಪ್ರಾಪ್ಯಸ್ತಬಕ ನಮಿತೋ ಬಾಲಮಂದಾರವೃಕ್ಷಃ" ಸಂಸ್ಕೃತ ಮೇಘದೂತವನ್ನು ಆರಂಭದಲ್ಲಿ ಓದುವಾಗ ನಾನು ಅಲ್ಲಿಯ ಸಮಸ್ತಪದಗಳಿಂದ ಬೇಸತ್ತು ಹೋಗುತ್ತಿದ್ದೆನು. ಕಾಳಿದಾಸನ ರಘು ವಂಶವು ದ್ರಾಕ್ಷಾಪಾಕವಾದರೂ ಮೇಘದೂತ ಹುಡುಗರಿಗೂ ದ್ರಾಕ್ಷಾಪಾಕ ವಷ್ಟು ಸುಲಭವಾಗಿ ವ್ಯಾಕರಣ ಸೂತ್ರಗಳ ಜ್ಞಾನವಿಲ್ಲದೆ ರಸವು ವಿಪುಲ ವಾಗಿ ಬಾಲಕರಿಗೂ ದೊರೆಯುವದು. ಕುಮಾರವ್ಯಾಸನಂತೆ ಬೇಂದ್ರೆ ಯವರು ಅನೇಕ ಸಾರೆ ಶಬ್ದಶುದ್ಧಿಯನ್ನೂ, ವ್ಯಾಕರಣವನ್ನೂ ಬುದ್ಧಿ ಪೂರ್ವಕವಾಗಿ ಛಂದಸ್ಸನ್ನೂ ದುರ್ಲಕ್ಷಿಸಿದ್ದುಂಟು. ಕುಮಾರವ್ಯಾಸನ ಕಾವ್ಯಪ್ರವಾಹದ ಸೆಳೆತದಲ್ಲಿ ಸಿಕ್ಕು ಹೇಗೆ ವಾಚಕರು ಅವನ ಕಾವ್ಯದೋಷ ಗಳೆಲ್ಲವನ್ನೂ ಮರೆತು ಬಿಡುವರೋ ಹಾಗೆಯೆ ಒಳ್ಳೆಯ ಸಂಸ್ಕಾರವನ್ನು ಪಡೆದ ವಾಚಕರು ಕೂಡ ಶ್ರೀ ಬೇಂದ್ರೆಯವರ ಛಂದೋಭಂಗ ಮೊದಲಾದ ದೋಷಗಳನ್ನು ರಸಾಸ್ವಾದನೆಯಲ್ಲಿ ಮರೆತು ಬಿಡುವರು. ಅಷ್ಟೊಂದು ರಸ ಮಾಧುರ್ಯ ಅವರ ಕವಿತ್ವದಲ್ಲುಂಟು. ಅವರ "ಹುಬ್ಬಳ್ಳಿಯಾವಾ" ಎಂಬ ಹಾಡನ್ನು ಕೇಳಿ ಎಷ್ಟೋ ಶಿಷ್ಟ ವಾಚಕರು ಮೂಗು ಮುರಿದದ್ದನ್ನು ನಾನು ನೋಡಿದ್ದುಂಟು. ಆದರೆ ಸಂಸ್ಕೃತ ಕಾವ್ಯಗಳಲ್ಲಿ ಬರುವ ವಿಟ ಅಭಿಸಾರಿಕೆ ಗಳ ವರ್ಣನೆಗಳನ್ನು ನೋಡಿ ಆನಂದಪಡುವ ಈ ಶಿಷ್ಟರು ಇದಕ್ಕೇಕೆ ಮೂಗು ಮುರಿಯಬೇಕೋ ನಮಗೆ ತಿಳಿಯದು. ಈ ಕವಿತೆಯಲ್ಲಿ ವಿರಹ ವೇದನೆಯ ಕಾತರತೆಯ ವರ್ಣನೆಯ ಸೊಗಸು ವೈಖರಿ ಮಹಾಕವಿಯ ಕಲ್ಪನೆಗೇ ನಿಲುಕತಕ್ಕವುಗಳಾಗಿವೆ ಎಂಬಲ್ಲಿ ಎಳ್ಳನಿತೂ ಸಂದೇಹವಿಲ್ಲ.

ಶ್ರೀ. ರವೀಂದ್ರರ "ಕ್ರಿಸೆಂಟಮೂನ"ಬಿದಿಗೆಯ ಚಂದಿರ ಎಂಬ ಕಾವ್ಯ ವನ್ನು ಓದಿ ಆನಂದಪಟ್ಟವರು, ಬೇಂದ್ರೆಯವರ ರಮಣೀಯ ಬಾಲಲೀಲೆಯ

ಗದ್ಯ ಕಾವ್ಯದ ಕಡೆಗೂ ಹೊರಳಿ ನೋಡಬಹುದು. "ಬಾಲಕನ ಪಿಶಂಗ ತಲಂ ಬಾಲಕನಸ್ಖಲಿತ ಚಲನ ವಿನ್ಯಾಸದ ಲೀಲಾಸಮುಂ ಕಾಣದ ದುರ್ಲೀಲ ಮೆನಿಪ್ಪೊಂದು ಜೀವನಂ ಜೀವನಮೇ?" ಎಂದು ಕನ್ನಡ ಕವಿಯೊಬ್ಬನು ಬಾಲಲೀಲೆಯ ಮಹಿಮೆಯೆನ್ನು ಹೇಳಿದ್ದಾನೆ. "ಧನ್ಯಾಸ್ತದಂಗ ರಜಸಾ ಮಲಿನೀ ಭವಂತಿ" ಎಂದು ಕಾಲಿದಾಸನು

" ಅನಿಯತರುದಿತಸ್ಮಿತಂ ವಿರಾಜ ರಾಜತ್
ಕತಿಪಯಕೋಮಲದಂತ ಕುಡ್ಮಲಾಗ್ರಂ
ವದನ ಕಮಲ ಕಂ ಶಿಶೋಃ ಸ್ಮರಾಮಿ "

ಎಂದು ಭವಭೂತಿಯಾ ಶಿಶುಸೌಂದರ್ಯ ಮೋಹವನ್ನು ಬಣ್ಣಿಸಿರು ವರು. ಶ್ರೀ ಬೇಂದ್ರೆಯವರು ಈ ಬಾಲಲೀಲೆಯನ್ನು ಕಂಡು ಹಿರಿಹಿರಿ ಹಿಗ್ಗುವ ತಾಯಿಯ ಮೋಹದ ಮಾತಿನಲ್ಲಿ ಕಾವ್ಯದ ಸೊಗಸನ್ನು ತುಂಬಿ ದ್ದಾರೆ.

" ನನ್ನ ಚೆಲ್ಲದಚ್ಚಿನ ಬೊಂಬೆ ನೀನು ನಕ್ಕರೊಂದು ರುಚಿ
ನೀನು ಅತ್ತರೊಂದು ರುಚಿ "

ಇತ್ಯಾದಿ ನುಡಿಗಳಲ್ಲಿ " ನನ್ನ ಮಗನ ಮುಚ್ಚಿದ ಮುಟ್ಟಿಗೆಯಲ್ಲಿ ಮೂಲೋಕದೊಡೆತನ ವಿರಬಹುದು ತೆರೆದು ನೋಡಲಿಯಾ ? ಬೇಡ. ದೈವ ತೆರೆದಮೇಲೆ ಕೈತೆರೆಯುವದೇನು ತಡ ?" ಇತ್ಯಾದಿ ಗದ್ಯ ಕಾವ್ಯಗಳಲ್ಲಿ ಸೊಗಸು ಬೀರುವ ಕಾವ್ಯ ಸೌಂದರ್ಯವನ್ನು ನೋಡಿರಿ. ಬಿದಿಗೆಯ ಚಂದಿರನಲ್ಲಿ ಯಾವ ಸೊಗಸು ತೋರುವದೋ ಅಂತಹ ಸೊಗಸನ್ನೇ ಕವಿ ಯಿಲ್ಲಿ ಕನ್ನಡಿಗರಿಗೆ ಬೀರಿಬಿಟ್ಟಿರುವನೆಂಬುದು ತೋರದೆ ಇರದು.

ಬೇಂದ್ರೆಯವರ ಪ್ರಭಾತ ಕಾಲದ ಸರ್ವೋತ್ಕೃಷ್ಟ ಗೀತವೊಂದಿರು ವದಷ್ಟೇ ! " ಮೂಡಲಮನೆಯಾ ಮುತ್ತಿನ ನೀರಿನ ಎರಕವಹೊಯ್ದಾ ನುಣ್ಣ ನ್ನೆರಕವ ಹೊಯ್ದಾ !'' ಈ ಗೀತವನ್ನು ಜಗತ್ತಿನ ಸರ್ವೋತ್ಕೃಷ್ಟ ಪ್ರಭಾತ ಗೀತಗಳೊಡನೆ ತುಲನೆಮಾಡಿ ನೋಡಿರಿ.

" ಅರುಣೋದಯಾಕ್ತ ವರರುಕ್ಮವೆಲ್ಲವೂ
ಸರಿಯಾಗಿ ಬೀಳ್ವುದಿಳೆಯಲ್ಲಿ ಚಂದದಿಂ "

ಎಂದು ರವೀಂದ್ರರು ಅರುಣೋದಯವನ್ನು ಬಣ್ಣಿಸಿರುವರು. ಮತ್ತು

" ಪುರುಹೂತದಿಗಂಗನಾ ಪ್ರಸೂತಾ
ರಘುಮುದ್ಧಾಮಸುತಂ ಚಿರಾದುಪೈತಿ ||
ಅಲಿನೋ ನಲಿನೋದರಾದ್ವಿಮುಕ್ತಾ "

ಎಂಬ ಪ್ರಾಚೀನ ಪದ್ಯದೊಡನೆಯೂ ತುಲನೆಮಾಡಿ ನೋಡಿರಿ. ಸಾದಾ ಭಾಷೆಯಲ್ಲಿ ಎಂತಹ ಉದಾತ್ತ ಕಲ್ಪನೆಯನ್ನು ಬೇಂದ್ರೆಯವರು ಚಿತ್ರಿಸಿರುವ ರೆಂಬುದು ಗೊತ್ತಾಗುವುದು. ಮೊನ್ನೆ ಅವರು ಬರೆದ ಪುತ್ರ ವಿರಹದ ಪಾಡಂತೂ ಅವರ ಶೋಕವು ಶ್ಲೋಕತ್ವವನ್ನು ಪಡೆದು ಕರುನಾಡಿನಲ್ಲಿ ಕರುಣ ಗೀತೆಯಾಗಿ ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿಯು ವದು ಈ ಶೋಕ ಗೀತವಿರಲಿ ಅವರು ಬರೆದ "ತುತ್ತಿನ ಚೀಲ" ಮೊದ ಲಾದ ಹಸಿದ ಗೀತಗಳು ಈಗಿನ ಕ್ರಾಂತಿಯುಗಕ್ಕಷ್ಟೇ ಪ್ರಯೋಜಕಾರಿ ಯಲ್ಲ. ಸ್ಥಾಯೀ ಸಾಹಿತ್ಯವಾಗಲು ಅರ್ಹವಾಗಿವೆ.

# ಅಂಬಿಕಾತನಯರ ಅಲಂಕಾರಗಳು

ಲೇ:— **ಎಚ್. ಜಿ. ಜೋಶಿ** ಬಿ. ಎ. (ಆನರ್ಸ)

ಕಾವ್ಯಕ್ಕೆ ರಸವು ಜೀವಧ್ವನಿಯಾದರೆ, ಅಲಂಕಾರವು ದೇಹಕಾಂತಿ. "ಹಾರಾದಿವದಲಂಕಾರಾಃ" ಎನ್ನುವ ಮಾತು ಅಲಂಕಾರಿಕ ಹಾರಿಕೆಯು ಸತ್ಯದ್ದು. ಮಾತು ಭಾವದ ಮೈ. ಭಾವವು ಮಾತಿಗೆ ಆತ್ಮಮೂರ್ತಿ. ಅಲಂಕಾರಗಳನ್ನು ತೆಗೆದು ಹಾಕಿದರೆ ಕಾವ್ಯವು ಮೈತೆಗೆದ ಆತ್ಮನಂತೆ ಅಂತರಪಿಶಾಚಿ. ಅದು ಹಾರದಂತಹ ಆಗಮಾಪಾಯೀ ಭೂಷಣವಲ್ಲ. ಹಾಗಾದರೆ ಜೀವದುಸಿರು ಬಯಲು ಗಾಳಿ. ಅಲಕಾಂರವು ಕಾವ್ಯದ ರೂಪು. ಅಂತಃಸತ್ವದ ಬಾಹ್ಯದ ಹೊದಿಕೆ. ಆಚಾರ್ಯ ಮಮ್ಮಟರು 'ಕ್ವಾಪ್ಯನಲಂಕೃತಿ' ಎಂದು ಪೇಚಿಗೆ ಬಿದ್ದರು. ಅನಲಂಕೃತಿಗೆ ಅಲಂಕಾರದ ವಿರೋಧಾಭಾಸತ್ವ ಹೇಳಬೇಕಾಯಿತು. ಬೇಂದ್ರೆಯವರೇ ಹೇಳುವಂತೆ ಅವು ಲಾವಣ್ಯರೇಖೆಗಳು ಒರಿ ಮೇಲ್ದೊಡವುಗಳಲ್ಲ. ರಸಕ್ಕೆ ಪೇಯಪಾತ್ರತೆ ಬರಬೇಕಾದರೆ ಅಲಂಕಾರವೇ ಪಾನಪಾತ್ರೆ. ಅಲಂಕಾರವು ರಸಭಾಜನ. ಅರವಟ್ಟಿಗೆಯ ನೀರಿಗೆ ಬೊಗಸೆಯೇ ಪಾತ್ರೆ. ಕಡಬಿಗೆ ನೆಲದೊಡಲೆ ತುಂಬು ಒಡವೆ. ರಸಕ್ಕೆ ಅಲಂಕಾರದ ಅಪೇಕ್ಷೆ ಇದೆ. ಹೀಗೆ ಅಲಂಕಾರವು ರಸದ ಸಹಧರ್ಮಿಣಿ.

"ಯಾವದೊಂದು ಮಾತು ಹೇಳುವಾಗ ಅಲ್ಲಿರದ ಸಮಾನವಸ್ತು ಒಂದು ಬಗೆಯ ಕಣ್ಣಿಗೆ ಕಾಣುತ್ತಿದೆ. ಆ ಸಾದೃಶ್ಯದಿಂದ ಚಿತ್ರ ಮೈದಾಳುತ್ತಿದೆ. ಆ ಚಿತ್ರದಿಂದ ಮೂಡಿದ ಅಲಂಕಾರವೇ ಉಪಮೆ." ಉಪಮೆಯು ಅಲಂಕಾರ ವಸುಂಧರೆ, ರತ್ನಗರ್ಭೆ. ಎಲ್ಲ ಅಲಂಕಾರಗಳು ಆ ರತ್ನಗರ್ಭೆಯ ಗರ್ಭರತ್ನಗಳು. ಕವಿಯ ಕೃತಿಯಲ್ಲಿ ಉಪಮೆಯು ಎಳೆದು ಹಚ್ಚಿದ ಹೋಲಿಕೆಯಲ್ಲ. ವಸ್ತುಚಿಂತನೆಯಲ್ಲಿ ಅಕ್ಷಿಗಾದ ಆತ್ಮಸಾಕ್ಷಿ. ಅದನ್ನು ಕೇವಲ ಹೋಲಿಕೆಯೆಂದು ತಿಳಿಯುವುದು ದೃಷ್ಟಿಸಂಕೋಚ. ಚಿನ್ನವಾಲರ ಕಟ್ಟಿಯಲ್ಲಿಟ್ಟಂತೆ ಸಾರಸ್ವತ ಸಂಗ್ರಹದಲ್ಲಿ ಅಲಂಕಾರಗಳು

ಬಿಡಿಬಿಡಿಯಾದ ಪಣ್ಯ ವಸ್ತುಗಳಲ್ಲ. ಅದು ಚೈತನ್ಯದ ರೂಪು. ಚಿಂತನೆಯಲ್ಲಿ ಉದ್ಬುದ್ಧವಾದ ಆತ್ಮ ವಿಲಾಸ ಭಾವವಾಗುತ್ತದೆ. ಅರ್ಥವನ್ನು ಬೆನ್ನಟ್ಟಿಕೊಂಡು ಹೊರಟು ನಾದದೊಡನೆ ದನಿಗಯ್ಯುವಾಗಲೇ, ಶಬ್ದವಾಗಿ ಕಾವ್ಯವಾಗುತ್ತದೆ. ಶುದ್ಧ ಭಾವವೊಂದನ್ನು ಬೇರೆ ಇರಿಸಿದರೆ ಕಾವ್ಯವೆಲ್ಲ ಅಲಂಕಾರವೇ! ಕವಿಯ ಒಲವು ಚಲುವಿನ ಕಡೆಗಿದ್ದರೆ ಸಾಲಂಕೃತ ಕಾವ್ಯದ ಕಾಣಿಕೆ. ದಿಟದ ಕಡೆಗಿದ್ದರೆ ಗಾಂಭೀರ್ಯವೇ ಅಲಂಕಾರಕ್ಕೆ ಆವರಣ. ಅಂಬಿಕಾತನಯರ ಗೀತಗಳಲ್ಲಿ ಕಂಡಬರುವ ಮಾತು ಅಲಂಕಾರಸೃಷ್ಟಿಯಲ್ಲಿ ಎಚ್ಚತ್ತ ಸತ್ಯದೃಷ್ಟಿ. ಇದುವೇ ಕಾವ್ಯಯೋಗಸಮನ್ವಯ. ಅನುಭವ ಸ್ಪಂದನದಿಂದ ಪ್ರಾಣಸಮೀರಣನು ಹೃದಯದ ಗಂಧವಹನಾಗುವನು. ಅದುವೇ ಕಂಡರೆ ಕಾವ್ಯವಾಗುವದು.

ಕವಿಯು ಬೇರೆ ರೂಪದಲ್ಲಿ ಒಮ್ಮೆ ರೂಪಿಸಿದರೆ ಇನ್ನೊಮ್ಮೆ ಅಲ್ಲಿಯೇ ಮುಳುಗಿಸುವನು. ಅದನ್ನು ಇದಕ್ಕೆ ಇಟ್ಟುನೋಡುವದು, ಒಂದೇ ಎರಡೇ? ಮಾಟಬಲ್ಲವನಿಗೆ ಆಟಕಲಿಸಬೇಕೆ? ಕವಿಯ ಅಲಂಕಾರ ದರ್ಶನವು ರಸ ಸಂಸ್ಪರ್ಶನಕ್ಕೆ ಸಾಧನೆಯಾಗಬೇಕು. ಬೇಂದ್ರೆಯವರ ಕಾವ್ಯಬೋಧೆಯಲ್ಲಿ ಅದರ ಧ್ವನಿಯಿದೆ.

ಉಪಮೆಯು ಭಾವ ಸಹಧರ್ಮಿಣಿಯಾದ ಅಲಂಕಾರದ ಆದಿಮಾತೆ. ಉಪಮೆಯದು ಮುಗ್ಧ ಸಾದೃಶ್ಯವಾದರೆ ಅವಳ ಅಪತ್ಯ ಲೋಕದ್ದು ವಿದಗ್ಧ ಸಾಮರಸ್ಯ. ಕುಶಲ ಶಿಲ್ಪಿಗೆ ತನ್ನ ಪ್ರತಿಯೊಂದು ಕೃತಿಯನ್ನೂ ನೂತನವಾಗಿಸುವ ಕಲೆಗಾರಿಕೆಯಿದೆ. ಹಾಗೆಯೆ ಅಲಂಕಾರಗಳು ಬೆಳೆದುದು. ಒಂದು ಮತ್ತೊಂದರಂತಿದ್ದರೂ ಒಂದೇ ಅಲ್ಲ. ಭರತನಿಗೆ ಕಂಡ ನಾಲ್ಕು ಉದ್ಭಟಾದಿಗಳಿಗೆ ಮೂವತ್ತಾರಾಗಿ ತೋರಿದುವು. ಮಮ್ಮಟನಿಗೆ ಅರವತ್ತಾರಾಗಿ ತೋರಿದರೆ ಜಯದೇವನಿಗೆ ನೂರರ ಮೇರೆ ಗೋಚರಿಸಿದವು. ಅಲಂಕಾರದ ಸಂಖ್ಯೆ ನಮ್ಮ ದೇಶದ ಜನತೆಯ ಹಾಗೆ ಬೇಜಾರ ಪಡುವಂತೆ ಬೆಳೆಯಲಿಲ್ಲ. ಅದಕ್ಕೆ "ಬರ್ಥಕಂಟ್ರೋಲೂ" ಮಾಡಬೇಕಿಲ್ಲ. ಅದು ಕವಿಯ ವಿಕಾಸ. ಕಾವ್ಯ ಸಮುದ್ರದಲ್ಲಿ ಹೆಸರಾಗಿಯೂ ಕೂಡ ಹೇಳ ಹೆಸರಿಲ್ಲದ ಅಲಂಕಾರಗಳು ಅಗಣಿತ ಕವಿಯ ಸೌಂದರ್ಯ ಪಿಪಾಸೆ ಲಾಕ್ಷಣಿಕರ (Rheloricians) ಅಲಂಕಾರ ಜಿಜ್ಞಾಸೆಗಿಂತಲೂ ಹಿರಿದು.

ಈ ಅಜ್ಞಾತಾಲಂಕಾರಗಳನ್ನು ಎಳೆದು ಇದ್ದ 'ಲಿಮಿಟೆಡ್' ಅಲಂಕಾರ ಗಳಲ್ಲಿ ನೇಣು ಹಾಕುವದಕ್ಕಿಂತಲೂ ಹಾಗೇ ಬೀದಿಗೂಸೆಂದು ಮುದ್ದಿಸಿದರೂ ಒಳಿತು. ಮುಂದೆ ಮತ್ತೊಬ್ಬ ಮಮ್ಮಟ ಕಮ್ಮಟದಲ್ಲಿ ಮುದ್ರೆಯೊತ್ತುವ ಕಾಲಬಂದೀತು.

ಒಮ್ಮೆ ಬೇಂದ್ರೆಯವರ ಕಾವ್ಯಕನ್ನಿಕೆ ನೂತನಾಲಂಕಾರ ಭರಣೆಯೆನಿಸಿ ದರೆ, ಇನ್ನೊಮ್ಮೆ ಸನಾತನಾಲಂಕಾರ ಶರಣೆ ಎಂದೂ ತೋರುವಳು. "ಮಾಯಾಕಿನ್ನರಿ"ಯು ಉಪಮೆಯ ಮಾಲಿಯಾಗಿ ಬಂದರೆ 'ಮೊದಲಗಿತ್ತಿ' 'ಚಿಗರಿಗಂಗಳ ಚೆಲುವೆ'ಯರು ರೂಪಕದಿಂದ ಮೈದಳೆದ ಉಕ್ತಿಮಾಲೆಯ ತೊಡಕಿನವರು. 'ಭಾವಗೀತಕ್ಕೂ' 'ನಾದಲೀಲೆಗೂ' ಕಪಿ ಲೀಲೆಯೇ ಎನ್ನ ಬೇಕು. ಇಲ್ಲವೆ ದಿಟ್ಟತನದಿಂದ ಬೇರೆ ಹೆಸರಿಡಬೇಕು. ಬೇಂದ್ರೆಯವರ ಕಾವ್ಯವನದಲ್ಲಿ ಅಲಂಕಾರ ಸಂಶೋಧನಕ್ಕೆ ಹೊರಟವನಿಗೆ ಇದ್ದ ಗಮಕ ಗಳೆಲ್ಲ ದುರ್ಬಲವಾಗುವವು. ಕೊನೆಗೆ ಶೃಗಾಲಸಮಾಧಾನದಂತೆ 'ಸಂಸೃಷ್ಟಿ' 'ಸಂಕರ' ಎಂಬೆರಡೇ ಅಲಂಕಾರ ಇವೆ ಎಂದು ಹಿಂತಿರುಗ ಬೇಕು. ಬೇಂದ್ರೆಯವರ ಮಾತಿನಲ್ಲಿ ಅಲಂಕಾರವು ಬಿಚ್ಚದ ತೊಡಕಾಗಿರು ವದು ಸಹಜವೆ. ಕವಿಗೆ ಕಟ್ಟುವದೇ ಕಾರ್ಯವಾದರೆ ವಿಮರ್ಶಕನಿಗೆ ಬಿಚ್ಚುವದು ಅನಿವಾರ್ಯ.

ಬೇಂದ್ರೆಯವರು ಅಲಂಕಾರದ ಇಂದ್ರಜಾಲಿಕರು ಕಾವ್ಯ ಅದರಿಂದ ನೆಯ್ದ ಇಂದ್ರಧನು, ಅದರದೊಂದು ದರ್ಶನವನ್ನು "ದವನದ ಹುಣ್ಣಿ ಮೆಯ ಜಾತ್ರೆಯ ರಾತ್ರಿಯಲ್ಲಿ" ಕಾಣಬಹುದು.

"ಇದೊ, ಬಂತು ದವನದುಣ್ಣಿವಿ ಬಿಚ್ಚಿ ಕಣ್ಣಿವಿ
ಕುಡಿದು ಅಮೃತಾ, ಕಂಡವರಿಗುಣಿಸಿ ಸಮತಾ"

ಹುಣ್ಣಿಮೆಯ ಬರವಿನಿಂದ ಯುಗಪುರುಷ ಯೋಗಿಯೊಬ್ಬನು ನಿಮೀ ಲಿತ ನೇತ್ರನಾಗಿ ಸಮಾಧಿಯಿಂದೆದ್ದು ಅದರ ಸುಖವನ್ನು ಜಗತ್ತಿಗೆ ವಿತರಣ ಗೈಯುವನೆಂಬ ಕಲ್ಪನೆಯು (೧) **ಸಮಾಸೋಕ್ತ್ಯಲಂಕಾರ**ದಲ್ಲಿ ಕಂಡರೆ, **ಕೆಳಗಿನ** ಹಂತದಲ್ಲಿ

" ಹಿಂದೀನ ಹೊಳಲು ಗೊಡತಾವ ಹಾಡು ಆ ಹೇಮ
ಕೂಟದಾಗ ತುಂಗೀಯ ದಂಡಿವ್ಯಾಗ
ಅಗೋ ಕಾಮಸತಿಯೋ ರಾಮ ಸೀತೆಯೋ ನರಳಿ
ನಕ್ಕಹಂಗ ಪತಿಸತಿಗೆ ಸಿಕ್ಕಹಾಂಗ
ಬಯಲಾಟದವರ ಹಿಮ್ಮೇಳದಿಂದ ದನಿತಾಳ ಗತ್ತಿನ್ಯಾಗ
ಬರತದ ಕುಣಿವುತೀಗ "

ತುಂಗಾ ತೀರದಲ್ಲಿ ದನಿಗೊಡುವ ಆ ರಸಪ್ರಸಂಗ ಸಂಗೀತವು ವಿರುಪಾಕ್ಷನ ರಾಜಪೂಜೆಯ ಸಂಗೀತವಾಗಿದೆ. ಅಂತೆಯೇ ಕವಿಗೆ 'ಅಗೋ ಕಾಮಸತಿಯೋ ರಾಮಸೀತೆಯೋ ನರಳಿನಕ್ಕಹಾಂಗ'' ಎನ್ನುವಲ್ಲಿ (೨) **ಸ್ಮರಣೆ ಸಂದೇಹದೊಡನೆ** ಸಾದೃಶ್ಯ ಪಡೆದಿದೆ. ಪ್ರತಿಭಾಶಾಲಿಯಾದ ಕವಿಗೆ ಅಲಂಕಾರವು ಅಯಾಚಿತವಾದ ದೈವ ಪ್ರೇರಣೆ. ಇಲ್ಲಿ ಅಲಂಕಾರಗಳು ಎರವಲಾಗಿ ತಂದ ಮುಸ್ತುಗಳೆಂದು ಎಂದೂ ಸಹೃದನಿಗೆ ತೋರದು. ಹಾಡಿನೊಡನೆ ಹಿಗ್ಗು ಹೊಮ್ಮುವಾಗಲೇ ಅಲಂಕಾರಗಳು ಮೈತಾಳಿವೆ. ಬೇಂದ್ರೆಯವರ ಅಲಂಕಾರಗಳು ರಸಮಾನಸದಲ್ಲಿ ನಲಿಯುವ ಮರಾಳಗಳು.

" ಬಯಲಾಟದವರ ಹಿಮ್ಮೇಳದಿಂದ ದನಿ
ತಾಳಗತ್ತಿನ್ಯಾಗ ಬರತದ ಕುಣಿವುತೀಗ "

ಇಲ್ಲಿ ಬಯಲಾದಟವರ ಹಿಮ್ಮೇಳದವರ ಹಾಡು ತಾನೇ ರೂಪುಗೊಂಡು ತಾಳಮೇಳದೊಡನೆ ಬರುವ ಭಾವನೆಯಲ್ಲಿ. (೩) **ಅತಿಶಯೋಕ್ತಿಯ ಆವಿರ್ಭಾವ**ವಿದೆ. ಹಾಳು ಹಂಪೆಯ ಗುಡಿಯೊಂದರಿಂದ ಕೇಳಬರುವ ದನಿಯೊಂದಕ್ಕೆ ಕಹಳೆಯೊನ್ನೆ ಮೆರೆದು ಬರುವ ದಳನಾಯಕರೀವಿಯನ್ನು ಕಲ್ಪಿಸುವುದು ಇಲ್ಲಿ ಕವಿಯ ಕೆಲಸವಾಗಿದೆ. ಕವಿಯ ಧ್ವನಿಗೆ ಯೋಗ್ಯವಾದ ರೂಪು ಎನಿಸಿದೆ.

" ತಂಗಾಳಿ ಸುಳಿದು ಸುಳಿಸುಳಿದು ಬಂತು ತುಳು
ತುಳುಕಿ ಮ್ಯಾಲ ಮ್ಯಾಲ ಆಲೀಯ ಕಬ್ಬಿನ್ಹಾಲ ''

ಇಲ್ಲಿ ಎಲ್ಲಿಂದಲೋ ಹರಿದು ಬರುವ ತಂಗಾಳಿಯೊಂದು ಆಲೀಯ ಕಬ್ಬಿನ್ಹಾಲು ಆಗಿದೆ. (೪) **ಈ ರೂಪಕದ ಸ್ವಾರಸ್ಯ**ವನ್ನು ಅರಿಯುವವನು

ಅಲ್ಲಿಯ ಕಬ್ಬಿನಸ್ಥಾಲಿನ ಸ್ವಾರಸ್ಯವನ್ನು ಆಸ್ವಾದಿಸಿರಬೇಕು. ಅಂದರೆಯೇ ಇಲ್ಲಿಯ ರೂಪಕಕ್ಕೆ ಒಂದು ತರದ ಔಚಿತ್ಯ. ಇಲ್ಲವೆ ಕವಿಯ ಅನುಭವ ಸಾಕ್ಷಿಯ ಮಹಿಮೆಗಳು ಗೋಚರಿಸುತ್ತವೆ. ಇಲ್ಲಿಯ ಶಬ್ದಶಕ್ತಿ ನೂಪುರ ಝಂಣತ್ಕಾರದ ಕಲ್ಪನೆ ತಂದುಕೊಡುತ್ತದೆ. ಅನುಪ್ರಾಸದ ರೀತಿ ಇಲ್ಲಿಯ ಕಾವ್ಯ ವೈಯಾರವೆಂದು ಹೇಳಬಹುದು.

" ಹರದಾರಿ ಹಬ್ಬಿದೆರಿ ಹೊಲದ ಎದಿಯಮ್ಯಾಲ
ಕಟ್ಟಿತೇನೋ ಕವನ ಒಡಮುರಿದು ಎದ್ದ ದವನ"

ಇಲ್ಲಿಯ (೫) **ಉತ್ಪ್ರೇಕ್ಷೆಯು** ಕೇವಲ ಗಾಳಿಗೋಪುರದ ಊಹೆಯಲ್ಲ. ಕವಿಯ ಜಡ ಜಂಗಮ ಸಮಷ್ಟಿಯ ವಿಚಾರ ವಿಲಾಸ ಹೊಲದ ಹೃದಯದಮೇಲೆ ದವನ ಹಾಡುಕಟ್ಟಿದೆ. ದವನದ ಮೇಲೆ ತಂಗಾಳಿ ದಾಳಿ ಗೈದಿದೆ. ದವನ ಬೆಳೆಯುವದು, ಏಳುವದು, ಒಡಮುರಿದು ಏಳುವದು ಎರಿ ಹೊಲದಎದೆ, ಎಲ್ಲವೂ ಉತ್ಪ್ರೇಕ್ಷೆಗೆ ಸಂಜೀವಕಗಳು. ಇಲ್ಲಿ ಉತ್ಪ್ರೇಕ್ಷೆ ಕೇವಲ "ಉತ್ಕಟ ಕೋಟಿಕ ಸಂಶಯ"ವಾಗಿದ್ದರೆ ಅದಕ್ಕೆ ಬೆಲೆ ಅಷ್ಟಕ್ಕಷ್ಟೆ ಬರುತ್ತಿತ್ತು. ಸಂಶಯದ ಜಾಗ್ರತಿಯು ಅಂತಃ ಸತ್ಯದಿಂದಾಗಬೇಕು. ಅದು ಇಲ್ಲಿ ಆಗಿದೆಯೆಂದು ಬೇರ ಹೇಳಲುಬೇಡ.

" ಹಣ್ಣಾದ ಬಿಸಿಲ ಬಣ್ಣನಕಳಿತು ಬೆಳದಿಂಗಳಾತೋ ಏನೋ"

ಇದು ಕಾವ್ಯಯೋಗಾನುಭವದ ಮಾತು. ಇಲ್ಲಿಯ ಒಂದು ಸತ್ಯ ಉತ್ಪ್ರೇಕ್ಷೆಗೆ ಸಾಧಕವಾಗಿದೆ. ಅಂತೆಯೇ ಇದನ್ನು ಲಾಕ್ಷಣಿಕರ ಉತ್ಪ್ರೇಕ್ಷೆಯಿಂದ ಭಿನ್ನವಾದುದು ಎಂದು ಹೇಳಬಹುದು. ಅದನ್ನೇ ಜಿವೋತ್ಪ್ರೇಕ್ಷೆ ಎನ್ನಬಹುದು.

" ದನಿಯಮ್ಯಾಲದ ದನಿಯನೆತ್ತೆತ್ತಿ ಓಲಗ ಏರತಾವ
ಹ್ಯಾಂಗ ಗೋಪುರ ಕಟ್ಟಿಧಾಂಗ "

**(೬) ವಿಭಾವನೆಯ ನಸುಕಿನಲ್ಲಿ** ಬೆಳೆದ ಉಪಮೆ. **ಕೊನೆಯಲ್ಲಿ ಕಂಡುದು ಎಲ್ಲಕ್ಕೂ ಹೆಚ್ಚಿನ ಆದರ್ಶ.**

"ಆಕಾಶ ಅನಿಸತದ ಗುಡಿಯಹಾಂಗ ಪ್ರಕಾಶ
ಮಹಾಲಿಂಗ ನೆಲ ಅಗಲ ಪೀಠಧಾಂಗ"

(೭) ಉಪಮಾ ತ್ರಿವೇಣಿ **ಗುಪ್ತ ರೂಪಕ ಸೂಚ್ಯ**ಳಾಗಿದ್ದಾಳೆ. ಇಲ್ಲಿಯ **ಉಪಮೆ ಭವ್ಯ**ವಾದುದು. ಅಶರೀರಿಗೆ ಶರೀರ ಕಲ್ಪನೆಯು. ಎಲ್ಲಕ್ಕೂ ಒಂದು ಭವ್ಯವಾದ ದೇಗುಲದ ಅಪ್ರಸ್ತುತ ಪ್ರಶಂಸೆಗೆ ಇಲ್ಲಿಯ ಉಪಮೆ ಸಾಗಿನಿಂತಿದೆ. ಇದಲ್ಲವೆ ಅಲಂಕಾರಿಕ ಇಂದ್ರಧನು?

ಮಕ್ಕಳನ್ನು ಹಡೆಯುವ ಮಾನವರೆಲ್ಲ ಒಂದು ರೀತಿಯಿಂದ ಹೆರಿಗೆಯ ಯಂತ್ರಗಳೇ ಹೊರತು ಪ್ರಜಾಪತಿಗಳಲ್ಲ. ಅಂತೆಯೇ ಕಾವ್ಯ ಬರೆದವರೆಲ್ಲ ಕವಿಗಳು ಅಲ್ಲವೆನ್ನಬಹುದು. ಯಾವನ ಸೃಷ್ಟಿಯಲ್ಲಿ ಸಹಜತೆ ಇದೆಯೋ ಸಾಕಲ್ಯತೆ ಇದೆಯೋ ಅವನೇ ಪ್ರಜಾಪತಿ. ಯಾವನ ಕಾವ್ಯದಲ್ಲಿ ರಸ ಅಲಂಕಾರಗಳಲ್ಲಿ ಹೊಂದಿಕೆ ಇದೆಯೋ ಅದು ಕಾವ್ಯ ಪತಿಯ ಸೃಷ್ಟಿ ರಸಕ್ಕೆ ಕ್ಷಯಹತ್ತಿದಲ್ಲಿ ಅಲಂಕಾರದ ಝಣತ್ಕಾರ ದುಂದುಗಾರಿಕೆಯ ಸಂಸಾರವೇ ಎನ್ನಬಹುದು. ಬೇಂದ್ರೆಯವ ಮಾತುಗಳಲ್ಲಿ ಈ ದೋಷ ಕಾಲಿರಿಸಿರಿಲ್ಲವೆಂದೇ ಅವರು ರಸಸೃಷ್ಟಿಯ ಬ್ರಹ್ಮರು. ಕವಿ ತನ್ನ ಅಲಂಕರಣ ದೃಷ್ಟಿಯನ್ನು ತನ್ನ ಆತ್ಮವಿಲಾಸಕ್ಕಾಗಿ ಪ್ರತಿಭೆಯ ವಿಕಾಸದೊಡನೆ ಬದಲಿಸುವನು.

"ನನ್ನ ಚಿತ್ರಕ ಶಕ್ತಿ ಉತ್ಪ್ರೇಕ್ಷೆಯನೇರಿ
ಬಣ್ಣಬಣ್ಣದ ಬಣ್ಣನೆಗೆ ಒಲಿದಿತು.
ಯಾವುದಕೆ ಯಾವುದು ಸರಿದೊರೆಯೆನ್ನುತ
ತನ್ನ ಗೆರೆಬಣ್ಣಗಳ ನೊರೆ ಹಚ್ಚಿತು"

ಉಪಮಾ ಸರೋವರದಿಂದ ಹೊರಟ ಸಾದೃಶ್ಯ ಪ್ರಣಾಲಿ ಉತ್ಪ್ರೇಕ್ಷೆಯಲ್ಲಿ ವಿಜೃಂಭಿಸಿ ರೂಪಕದಲ್ಲಿ ಹುಟ್ಟೊಡೆದು ನವೀನವಾಗಿ ಅತಿಶಯದಲ್ಲಿ ಹಿರಿಮೆ ಸಾರುವ ವೈಜಯಂತಿ. ಉಪಮೆ ರೂಪಕ ಅತಿಶಯದಲ್ಲಿ ಅವಗಾಹಿಸಬೇಕು. ಒಮ್ಮೊಮ್ಮೆ ಅತಿಶಯವು ಪ್ರಗಲ್ಭವಾಗಿ ಮಧ್ಯಾಹ್ನ ಸೂರ್ಯನಾಗುವದರಿಂದ ಕೆಲವೆಡೆಯಲ್ಲಿ

"ಅತಿಸರ್ವತ್ರ ವರ್ಜಯೇತ್". ಮಧ್ಯಮ ತರದ ಸಹೃದಯನಿಗೆ ರೂಪಕವೇ ಅಲಂಕಾರದ ಪ್ರತಿನಿಧಿ. ಬೇಂದ್ರೆಯವರಿಗೂ ಕೂಡ ಈ ಮಾತು ಎನಿಸಿದೆ.

" ಬ್ರಹ್ಮಪಟ್ಟವನೇರಿ ರೂಪಕ ಶಕ್ತಿಯು ಸೃಷ್ಟಿಯ
ನೆಳೆದಿತು ದೃಷ್ಟಿಯೊಳೆ "

ಎನ್ನುವದು ಕವಿಹೃದಯದ ಹರಿತ ಹದನವೊಂದಲ್ಲವೇ? ರಸಸಿದ್ಧಿಗಾಗಿ ಹೊರಟಕವಿ ರೂಪಕದಲ್ಲಿಯ ವೈರೂಪ್ಯ ತೊಳೆದು, ಕಾವ್ಯ ನಿರ್ಮಲಗೊಳಿಸಬೇಕು. ರವೀಂದ್ರರ ಕವಿತೆಗಳಲ್ಲಿ ಕಾಣುವ ಜನಮನೋಹಾರಿ ಶಕ್ತಿಯೆಂದರೆ ರೂಪಕಪ್ರಯೋಗ. ರೂಪಕವು ಆಕಾಂಕ್ಷೆಯ ಪ್ರತಿರೂಪ. ಅತಿಶಯೋಕ್ತಿಯು ಗಂಭೀರತೆಯ ಆಹ್ವಾನ. ಪ್ರಯೋಗವು ಎರಡರ ನಡುವಿರಬೇಕು. ಉತ್ಪ್ರೇಕ್ಷೆಯು ಕವಿಯ ಊಹಾವಿಲಾಸದ ಅನಂತ ಚಿತ್ರಗಳ 'ಜೇನು'.

ಅಲ್ಲಿ ಕವಿಯು ನಿರಂಕುಶನು. ಅವನ ಕಲ್ಪನೆ ಕಡಿವಾಣವಿಲ್ಲದ ಕುದುರೆಯು. ಉತ್ಪ್ರೇಕ್ಷೆಯು ಸಾಂಪ್ರದಾಯದ ಗಡಿಯನ್ನು ದಾಟಿ ಬಂದುದಾದರೆ ಇಂದಿನ ವಿಮರ್ಶಕರಿಗೆ ಮೆಚ್ಚಿನದಾಗುವದು. ಅಂತಹ ಕೆಲವು ಉತ್ಪ್ರೇಕ್ಷೆಗಳನ್ನಿಲ್ಲಿ ಉದಹರಿಸಬಹುದು.

" ಹೂವು ಪಕಳೆ ಪ್ರಾಣತುಂಬಿ ಚಿಟ್ಟೆಯಾಗಿ ಕಾಂಬವೋ"
ಕುಣಿದು ದಣಿದ ಚಿಟ್ಟೆಪಕ್ಕ ಹೂವು ಎನಿಸಿಕೊಂಬವೋ
'ಹಕ್ಕಿಹಾರುತಿದೆ' ಯಂತೂ ಉತ್ಪ್ರೇಕ್ಷೆಯ ಒಡವೆಯೇ ಆಗಿದೆ.

" ಶ್ರಾವಣನ ಗಜ್ಜೆ ಹೆಜ್ಜೆ ಕುಣಿದು ಹೊದುವೆನೋ ಇನ್ನೂ
ಬಾನುತೊಳಗಿ ಹೊಳೆವುದಿನ್ನೂ ನೀಲಿ ಹರಳ ಗಣಿಯಹಾಂಗ
ಶಾಮಸುಂದರನಪ್ಪಿದನೆನೋ ಸೀಮೆಯನ್ನೇ ಎಂಬುವಂತೆ
ಕೊಳಲನೂದಿದನ ನೇ...."

" ಶಾರದ ಶುಭ್ರಾಭ್ರ ಶಾರದೆ ರಸದುಂಬಿ
ನಡಿಸಿದ ನವಿಲಿನ ನರ್ತನವೋ

ಕಾರ್ತಿಕ ಸ್ವಾಮಿಯು ತಾರಕನ ಗೆದ್ದಾಗ
ತಾರೆಗೆ ಹಚ್ಚಿದ ಕಾರ್ತಿಕವೋ"

"ಅಮೃತದರವಟ್ಟಿಗೆಯೋ ಹಾಲಅಲೀ ಮನೆಯೋ"
ಮರಮರದ ಗೊನಿಗೆ ಕೂತು ಹಾರಿ ಮೈಸೋತು! ತೆಪ್ಪನಗಾಳಿ!
ತೆಪ್ಪನಗಾಳಿ ಹಾರಿ ಮೈಸೋತು !
ತೂಕಡಿಸತದ ತಾನೀಗ! ಜಂಪು ಬಂಧ ಂಗ!
ಜಂಪು ಬಂಧ ಂಗ! ಇದು ಅದರ

ತುಪ್ಪಳದ ಗೂಡ.

"ಒಂದನೊಂದು ತಬ್ಬಿಮುತ್ತಿ ಏಕಜೀವವಾಗಿದೆ
ಜಡವು ಜೀವವೆಂದು ಸುಳ್ಳೆ ಎರಡು ರೂಪವಾಗಿದೆ."

ಇಲ್ಲಿ ರೂಪಕ ಪ್ರಭಾವಿಯಾದ ಅಲಂಕಾರಗಳನ್ನು ಗುರುತಿಸ ಬಹುದು.

"ಹೂವ ಹಡಲಿಗೆಯನು ಹೊತ್ತ ಭೂಮಿತಾಯಿ ಜೋಗಿತಿ
ನ್ಯೆಯು ತುಂಬಿ ಕುಣಿಯುತಿಹಳು ಅನಂತಕಾಲವೀಗತಿ"

ಎನ್ನುವಲ್ಲಿ ವಿಶೇಷ್ಯ ಸಾಭಿಪ್ರಾಯದ ಪರಿಕರಾಂಕುರವನ್ನು ಅರಿಯ ಬಹುದು. ಪರಿಕರಾಂಕುರವನ್ನು ಒಪ್ಪದವರು ಪರಿಕರವೆಂದು ಭಾವಿಸಿದರೂ ಸರಿ. ಹಿಗೆಯೇ ಕಾವ್ಯದ ತುಂಬೆಲ್ಲ ಅಲಂಕಾರ ಚಲ್ಲುವರಿದು ಹಬ್ಬಿಕೊಂಡಿದೆ. ಅದರ ಕುಡಿ ಮಿಡಿಗಳ ಗಣನೆ ಚಿಕ್ಕೆ ಎಣಿಕೆಯಾಗುವದು. ಕವಿ ತನ್ನ ಮಾತು ಅಲಂಕಾರವಾಗಬೇಕೆಂದು ಬರೆದವನಲ್ಲ. ಅದು ಬರೆಯುವಾಗಲೆ ಹಾಗಾ ದುದು.

"ಮುಗಿಲು ನೆಲಕೆ ಮುಕ್ಕು ಚಿಕ್ಕೆ
ಕಾಳುಗಳನು ಬಿತ್ತಿದೆ;
ನೆಲವು ಮುಗಿಲಗರ್ತಿಯಿಂದ
ಆರತಿಯ ನೆತ್ತಿದೆ."

ರೂಪಕ್ಕೆ ಅತಿಶಯೋಕ್ತಿಯನ್ನು ಮುಟ್ಟುವ ಆಕಾಂಕ್ಷೆಯೂ ಅಗತ್ಯ. ಪದರೂಪಕ, ಪದ್ಯರೂಪಕದಲ್ಲಾಡಿದ ರೂಪಕ ವಿಲಾಸವು ಈ ಗೀತದಲ್ಲಿ

ಕಂಡಿದೆ. ಅದು ಶಬ್ದ ಶ್ರುತಿಯ ಫಲವೆಂದವರಿಗೆ ಬೇಂದ್ರೆಯವರ ಕವನದಲ್ಲಿ ಅಪರೂಪ. ಭಾವ ಪರಿಣತಿಯು ನಿದರ್ಶನವೆಂದರೆ ವಿರಳವಲ್ಲ. ಸಾಮಾನ್ಯವಾಗಿ ಭಾವಪರಿಣತಿಗೊಳ್ಳುವ ಅವಧಿಗೆ ಗೀತವನ್ನು ಸಂಕರ ಸಂಸೃಷ್ಟಿಗಳು ಕಪಿಮುಷ್ಟಿಯಲ್ಲಿ ಹಿಡಿಯುತ್ತವೆ. ಆದರೂ ಬೇಂದ್ರೆಯವರ ರೂಪಕ ಶಕ್ತಿಯ ಅವರಿಗಾಗಬೇಕಾದರೆ "ನನ್ನ ಕಿನ್ನರಿ"ಯನ್ನು ಓದಿ.

"ಹಕ್ಕಿಯಾಯಿತು ಜೀವ ರೆಕ್ಕೆಯಾದವು ಭಾವ"
"ಗಾಳಿಗುದುರೆಯನ್ನು ಏರಿ....
"ಮರದ ಹಸಿಯ ಮಣಿಗಳನ್ನು
ಅತ್ತ ಇತ್ತ ತೂರುತಾ"
"ನಗುವ ತುಟಿಯ ನೆನೆದ ಎವೆಯ
ತರಳ ಸೀನು ಶ್ರಾವಣಾ"
ಮೋಡಗವಿದ ಕಣ್ಣಿನವನನು
"ಮುದಿಯ ತಂದೆ ಮುಗಿಲರಾಯ"
"ಬಿಸಿಲ ಹಣ್ಣ ತಿಂಹು ಹೊತ್ತು"
"ಪ್ರಾಣವೊಂದು ಮೂಕ ಪ್ರಾಣಿ"

ನಗೆಯ ನಾಗಸ್ವರವನ್ನು ನೆನೆದು ಹೃದಯ ಸಮುದ್ರಕ್ಕಿಳಿದರೆ ಗಂಭೀರ ರೂಪಕವನ್ನು ಅಲ್ಲಿ ಕಾಣುತ್ತೇವೆ. ಬೇಂದ್ರೆಯವರ ರೂಪಕವು ಇನ್ನೊಂದನ್ನು ಆಶ್ರಯಿಸಿಕೊಂಡಿರುವ ಬಳ್ಳಿ, ತಾನು ಒಂಟಿಯಾಗಿರಲು ನಾಚುವ ಮಳ್ಳ ಹೆಣ್ಣು. ಆದರೆ ಅವರ ಕವನ ಸುಂದರವಾಗಿದೆ ಎನ್ನುವಲ್ಲಿ ರೂಪಕವೂ ಬೆರೆತಿದೆ ಎಂದು ಸಾಮಾನ್ಯವಾಗಿ ಊಹಿಸಬಹುದು.

"ಭರತ ಇಳಿತದಲ್ಲಿ ತೊಟ್ಟಿಲಾಡಿಸುತಿರಲು
ಚಂದ್ರಿಕೆ ತಿಂಗಳು ತಿಂಗಳಕೆ"
"ಇರುಳ ಹಡಗಿನಲ್ಲಿ ಮರುಳ ಜೀವಗಳೆರಡು
ಧ್ರುವನಲ್ಲಿ ಕಣ್ಣಿಟ್ಟು ಸಾಗುತಿದೆ"
ಹರೆಯೊಂದು ಹರಿನೀರ ತಿರೆಯೊಂದು ಕರಿನೀರ
ಜನುಮವು ಹರಿಗಿಡಿಯದಂಥ ಹೊಳೆನೀರು"

ಎಂಬವು ಸ್ಪಷ್ಟರೂಪಕಗಳಾದರೆ,

''ಮಾತು ಜ್ಯೋತಿ ಆ ಹುರುಳು ಧೂಮ ರಸಸಲಿಲ ಭಾವಗಾಳಿ
ಕವಿಯೊಳಾಗಿ ಕಟ್ಟಿತ್ತು ಕಾವ್ಯ ನವ ಮೇಘ ರೂಪ ತಾಳಿ''

ಎನ್ನುವಲ್ಲಿ ರೂಪಕದ ವೈಶಿಷ್ಟ್ಯವಿದೆ. ಅವರ ಮಾತಿನಲ್ಲಂತೂ ಶ್ಲಿಷ್ಟ ರೂಪಕಕ್ಕೆ ಕೊರತೆಯಿಲ್ಲ. ಅಲಂಕಾರವು ಧ್ವನಿ ಸಮುದ್ರಕ್ಕಿಳಿಯುವ ಕೊನೆಯ ಮೆಟ್ಟಲೆ ಅತಿಶಯೋಕ್ತಿ. ಅಲ್ಲಿ ಉಕ್ತಿಮಾಲೆಗೆ ಆರಂಭ. ಅದು ವ್ಯಂಗ್ಯ ವಿಲಾಸ. ಅಲಂಕಾರದ ನೋಗಿನಲ್ಲಿ ವ್ಯಂಗ್ಯವು ಸೂತ್ರಧಾರಿಯಾಗಿ ಅದರ ಪಾತ್ರವಾಡಿಸುವದು ಕಾವ್ಯರಂಗದಲ್ಲಿ.

ಪರ್ಯಾಯೋಕ್ತಿ, ಸಮಾಸೋಕ್ತಿ, ವ್ಯಾಜೋಕ್ತಿ, ಅನ್ಯೋಕ್ತಿ, ಅಪ್ರಸ್ತುತಪ್ರಶಂಸೆಗಳು—ಆ ಪಾತ್ರಗಳು.

''ಶಾಂತೀ ರಸವೇ ಪ್ರೀತಿಯಿಂದಾ ಮೈದೋರಿತಣ್ಣಾ
ಇದು ಬರಿ ಬೆಳಗಲ್ಲೊ ಅಣ್ಣಾ''

ಎನ್ನುವಲ್ಲಿ ಅಪಹ್ನವ ತೋರಿದರೆ—

''ಓಂಕಾರದ ಶಂಖನಾದಕಿಂತ ಕಿಂಚಿದೂನಾ''ದಲ್ಲಿ

ವ್ಯತಿರೇಕ ಕಂಡಿದೆ.

''ಕೈಗೆ ಕೈಯು ಹತ್ತರಿದ್ದು ಮೈಗೆ ಮೈಯು ಹತ್ತದು
ಕಣ್ಣು ಕಣ್ಣೆ ಮುತ್ತದು ಎವೆಗಳನ್ನು ಎತ್ತದು''

ಎಂಬಲ್ಲಿ ವಿಶೇಷಾಲಂಕಾರವಿದೆ.

''ಜಲದೇವತೆ, ವನದೇವತೆ, ಒಂದೆಡೆಯಲಿ ಸೇರಿ....
....ತೀರಲು ಕಾವೇರಿಯೆ ತಂಪೇರಿ''
''ಕಂಡವರಿಗಲ್ಲೊ ಕಂಡವರಿಗಷ್ಟೆ ತಿಳದದ ಇದರ ಬೆಲೆಯು''

ಎನ್ನುವವು ಶ್ಲೇಷಯುಕ್ತ ಅಲಂಕಾರಗಳು. ''ತುಂಬಿ ಬಂದಿತ್ತ'' ಎನ್ನುವದಂತೂ ಶ್ಲಿಷ್ಟಗೀತೆ.

''ಯಾರಾಗವೆಂದರು ಯಾರಾಗ ಕೇಳುವರು" ಎನ್ನುವದು ಶಬ್ದಶ್ಲೇಷ, ಭಾಷಾಗ್ರಹಣವಾದ ಮೇಘದೂತದಲ್ಲಿ ಕಾಲಿದಾಸನು ಪ್ರಯೋಗಿಸಿದ ಶ್ಲಿಷ್ಟ ವಚನಗಳು ತುಂಬಿವೆ.

ಅಲಂಕಾರಗಳು ಹಾರಾದಿಗಳಂತಲ್ಲವೆನ್ನುವದು ತೋರಬೇಕಾದರೆ ವ್ಯಂಗ್ಯ ಸಾಮೀಪ್ಯದ ಅಲಂಕಾರ ಪ್ರಯೋಗಗಳು ಬೇಕು. ವ್ಯಂಗ್ಯ ಮೂಲಕವಾದ ಅಲಂಕಾರಗಳು ಕವಿಯ ಜಾಣ್ಮೆಯ ಒರೆಗಲ್ಲು ಇದ್ದ ಹಾಗ. ಯಾರ ಕಾವ್ಯವು ಸಮಾಸೋಕ್ತ್ಯಾದಿ ಅಲಂಕಾರ ರಂಜಿತವೋ ಅದಕ್ಕೆ ಪ್ರೌಢಿಮೆ ಹೆಚ್ಚು. ಲಾಕ್ಷಣಿಕ ದೃಷ್ಟಿಯಲ್ಲಿ ಅತಿಶಯೋಕ್ತ್ಯಲಂಕಾರವು ವ್ಯಂಗ್ಯ ಮೂಲವೂ ಅಲ್ಲ, ವ್ಯಂಗ್ಯ ಸಾಮೀಪ್ಯದ್ದೂ ಅಲ್ಲ. ಆದರೂ ಸಾಧ್ಯಾವ ಸಾನ ಲಕ್ಷಣಾವೃತ್ತಿಯ ಪ್ರಯೋಜನವನ್ನು ಎಣಿಸಿದರೆ ವ್ಯಂಗ್ಯ ಸಾಧ್ಯವ ಸಾನ ಲಕ್ಷಣಾವೃತ್ತಿಯ ಪ್ರಯೋಜನವನ್ನು ಎಣಿಸಿದರೆ ವ್ಯಂಗ್ಯ ಸಾಮೀಪ್ಯ ವನ್ನು ಹಿಪ್ಪುವ ಮನಸಾಗುತ್ತದೆ. ಅತಿಶಯೋಕ್ತಿಯ ಮುಖ್ಯ ಲಕ್ಷಣವು ಅಲಂಕಾರದ ಮತದಲ್ಲಿ ''ನಿಗೀರ್ಯಾಧ್ಯವಸಾನವು" ಅನುಕ್ತ ವಿಷಯಾ ಲಂಕಾರವೆನ್ನಲೂ ಬಹುದು. ಇಲ್ಲಿಯೂ ಸಾದೃಶ್ಯವು ಜೀವಾಳ. ಬೇಂದ್ರೆ ಯವರ ''ವಾರಿಸೋಟ''ದಲ್ಲಿ ಇದನ್ನು ಕಾಣಬಹುದು ಅಲ್ಲದೆ--' ತಾವ ರಿಯ ಹೂವಾಗಿ ಯಾವರಿಗರಳಿತ್ತೊ

ಆವರಿಗೆ ತುಂಬಿ ತುಂಬ್ಯಾವ ಬಾಡುತಲೆ
ತಾವ್ಯಾರೊ ಎಂದು ತೆರಳ್ಯಾವ"

ಇಲ್ಲಿ ಅತಿಶಯೋಕ್ತಿ ದುರ್ಬಲರಾದರೂ ರೂಪಕವಲ್ಲ. ಹಾಗೆಯೇ ''ಕುರುಡು ಕಾಂಚಾಣಾ" ''ಬಾಳಗರಡಿ"ಗಳು ಕೇವಲ ಅತಿಶಯೋಕ್ತಿಗಳಲ್ಲ. ಯಾಕಂದರೆ ಅವುಗಳಲ್ಲಿ ಬೇರೊಂದರಡೂ ಪ್ರತೀತಿಯಿದೆ. ಆದರೆ ಅತಿಶ ಯೋಕ್ತಿಗೆ ಅವು ಹೊರಗಾಗಿಲ್ಲ. ''ಸಖಿಗೀತ''ದಲ್ಲಿ ಬರುವ ''ಚಿತ್ತ ಮಳೆಯ ಸಂಜೆ''ಯಂತೂ ಸ್ಪಷ್ಟವಾದ ಅತಿಶಯೋಕ್ತಿ.

"ಸ್ವಭಾವೋಕ್ತಿಸ್ತು ಡಿಂಭಾದೇ: ಸ್ವಕ್ರಿಯಾ ರೂಪ ವರ್ಣನಂ" ಎಂದು ಸ್ವಭಾವೋಕ್ತ್ಯಲಂಕಾರದ ಲಕ್ಷಣವನ್ನು ಹೇಳುವರು. ಕಾಲಿದಾಸನ ಚಿಗುರೆಯ ವರ್ಣನೆಯು, ಬಾಣನ ಕುದುರೆಯ ವರ್ಣನೆಯೂ ಉತ್ತಮವಾದ ಸ್ವಭಾವೋಕ್ತ್ಯಂಕಾರದ ಲಕ್ಷ್ಯಗಳೆಂದು ಲಾಕ್ಷಣಿಕರು ಹೇಳುವದುಂಟು. ಇದೇ ತೆರನಾದ ಸಹಜವಾದ ವರ್ಣನೆಯನ್ನು ಅಂಬಿಕಾತನಯರ 'ಪಾತರಗಿತ್ತಿ ಪಕ್ಕ'ದಲ್ಲಿ ಕಾಣಬಹುದು. ಸ್ವಭಾವೋಕ್ತ್ಯಲಂಕಾರದಲ್ಲಿ ಕಲ್ಪನೆ ಪಾತರಗಿತ್ತಿಯಂತೆಯೇ ಕುಣಿದಾಡಿದೆ.

ಅಲಂಕಾರಗಳ ನಡುವಿನ ವಿಶೇಷ ಭೇದಗಳನ್ನು ವಿವರಿಸುವದು ಕಷ್ಟಸಾಧ್ಯ ಆದರೂ ಮತ್ತೆ ಅಲ್ಲಿಯೂ ಮತಭೇದ. ಒಬ್ಬ ಲಾಕ್ಷಣಿಕನ ಲಕ್ಷಣ ಇನ್ನೊಬ್ಬರಲ್ಲಿ ಮತ್ತೊಂದು ಅಲಂಕಾರಕ್ಕೆ ಅತಿ ವ್ಯಾಪ್ತವಾಗಬಹುದು. ಹೀಗಾಗಿ ಅಲಂಕಾರದ ಶಾಸ್ತ್ರವು ಬುದ್ಧಿ ಚಾಪಲ್ಯದ ಪ್ರಯೋಗವಾಗಿಯೇ ಉಳಿದಿದೆ. ತನ್ನ ಬುದ್ಧಿಯ ಹಿರಿಮೆಯನ್ನು ತೋರಿಸಲು ಲಾಕ್ಷಣಿಕ (Rhe torician) ಇಂತಹದು ಈ ಅಲಂಕಾರವಲ್ಲ ಎಂದರೆ ಮತ್ತೊಬ್ಬನು 'ಅದು ಇದೇ' ಎಂದು ವಾದಿಸಿ ಓದುಗರನ್ನು ಮುರಿದಿದ್ದಾರೆ, ಅವರ ಬುದ್ಧಿ ವೈಭವ ಪ್ರದರ್ಶನದಲ್ಲಿ ಅಭ್ಯಾಸಿಗಳ ತಲೆ ಬಿರಿದುಹೋಗುತ್ತದೆ. ಆ ಮಾತುಗಳೆಲ್ಲ ಇಲ್ಲಿ ಅಪ್ರಸ್ತುತವಾದವು. ಅಲಂಕಾರಗಳು ಕವಿಯ ಮನಕ್ಕೆ ಗೋಚರಿಸುವವೇ ಹೊರತು ಲಾಕ್ಷಣಿಕನಿಗಲ್ಲ (Rhe torician). ಬಹಳವಾದರೆ ನಾಮಕರಣವೋ ವರ್ಣವ್ಯವಸ್ಥೆಯೋ ಅವನ ಕೆಲಸ. ಕವಿ ಅನಾದ್ಯನಂತನಾದ ಕಾಲಾತೀತ ಪುರುಷ. "ರಸಸಿದ್ಧ"ರಾದ ಅಂಬಿಕಾತನಯರ ಅಲಂಕಾರಗಳು ಅಗಣಿತ.

# ರಸ-ಸಿದ್ಧಿ

**ಲೇ: — ಶಾಂತ ಗಲಗಲಿ**

" ನಹಿ ರಸಾದೃತೆ ಕಶ್ಚಿದರ್ಥಃಪ್ರವರ್ತತೆ ಎಂಬುವದು ಭರತವಾಕ್ಯ "ರಸೊ ವೈ ಸಃ" ಎಂಬುವದು ಆಮ್ನಾತ. ಅಂತೆಯೆ "ಕಾವ್ಯ ಮಾನಂದಾಯ" ಎಂದರಿತವರೆ "ರಸಾತ್ಮಕಂ ವಾಕ್ಯಂ ಕಾವ್ಯಂ" ಎಂದರು.

ರಸಾತ್ಮಕವಾದ ವಾಕ್ಯವು ಕರ್ತೃ ಕರ್ಮ ಕ್ರಿಯೆಗಳ ಬಯಲಾಟ ಭೂಮಿಯಲ್ಲ. ಮಿಂಚಿನ ನುಡಿಯಲ್ಲಿ ನೆಯ್ದ ಹಿಗ್ಗಿನ ಮಾಲೆಯದು. ದರ್ಶನ ಮಾರ್ಗದಲ್ಲಿ ಮನದೊಡನೆ ಮಾತು ಹಿಗ್ಗನ್ನರಿಯದೆ ಹಿಂತಿರುಗುವದಾದರೆ, ಕಾವ್ಯ ಲೋಕದಲ್ಲಿ ಮಾತಿಗೆ ಪಂಥವಿದೆ. ಹಿಗ್ಗನ್ನು ಹಿಡಿದುತರದ ಮಾತಿನ ಮಾತೇ ಇಲ್ಲ. ಮಾತಿನ ಹಿಡಿತದಲ್ಲಿ ಹಿಗ್ಗು ಸಿಕ್ಕುವದು. ಕವಿ ಹಿಗ್ಗ ನುಂಡು, ಚಲುವು ಕಂಡು ಅದನ್ನೆ ಬಗ್ಗಿಸುವ ಹಕ್ಕಿಯೊಂದು. ಕಾವ್ಯವೆಲ್ಲ ಅವನ ಕೂಗು. ಅದು ಛಂದದ ಬಂಧಕ್ಕೀಳಿದರೂ ಸ್ವಚ್ಛಂದ ಸುಂದರವೆ. ಯಾವ ಜೀವದ ಮಾತು ಮನಸ್ಸಿನಲ್ಲಿ, ಮನಸ್ಸು ಮಾತಿನಲ್ಲಿ ಪೂತ ವಾಗಿದೆಯೋ, ಆ ಮಾತು ಮನಸ್ಸುಗಳು ಹಿಗ್ಗಿಗಾಗಿ ಹೊರಟವುಗಳು, ಹಿಗ್ಗಿನವು.

ಕವಿ ಎನ್ನುವವ ಕಾವ್ಯದ ತಂದೆ. ಹಿಗ್ಗನ್ನರಿತವ, ಹಿಗ್ಗಿಗೆ ಬೆರೆತವ. ಶಬ್ದಾರ್ಥಗಳ ಹಿಡಿತದಲ್ಲಿ ಹಿಗ್ಗನ್ನು ಹಿಡಿಸಬೇಕೆಂದೇ ಅವನ ಕಾಯಕ. ಜೀವನದಲ್ಲಿ ಅವನು ಕಾಣುವದು, ಕೇಳುವದು, ಉಣ್ಣುವದು, ತೋರುವದು ಎಲ್ಲವೂ ಹಿಗ್ಗಿಗೆ. ನೋವು ನವೆದಾಟ ಸಾವುಸಂತಾಪಗಳು ಜೀವನದಲ್ಲಿ ಅಡಗಿಕೊಂಡ ಕಡಲುಗೆಂಡ. ಕವಿ ಎನ್ನುವದೊಂದು ಶಕ್ತಿಗೆ, ಭಿನ್ನದೇ ಹದಲಿ ಏಕಜೀವ ಕಾಣುವದೊಂದು ಬಲವಿದೆ. ಜಗದ ನೋವನ್ನು ಕಂಡು ತನ್ನ ಮನಕ್ಕೆ ಬಿಸಿಹತ್ತಿದಾಗಲೆ ಅವನ ಹೃದಯದ ಬೆಣ್ಣೆ ಕರಗುವದು. ಅದೇ ರಸ.

ಜೀವನವು ಸುಳ್ಳು ಅರಿವುಗುರುಡುತನಗಳಿಂದ ತುಂಬಿದ್ದರೂ ಮಾನಸವು ಅದನ್ನು ಕನ್ನಡಿಸಬಾರದು. ಈ ಐಂದ್ರಿಯ ಸತ್ಯವನ್ನು ಸುಳ್ಳೆಂದು ತಿಳಿಯುವದರಲ್ಲಿಯೆ ನೊಗಸಿನ ಮೂಲವಿದೆ. ಅಂತೆಯೆ ವೇದಾಂತವು ಇರವುಗೊಂಡ ನೆಲವನ್ನು ಸುಳ್ಳು ಎಂಬು ಸಾರುತ್ತಿದೆ. "ಗಜನ್ಮಿಥ್ಯಾ" ಭಾವನೆಯು ಆತ್ಮದರ್ಶನ ಸಾಕ್ಷಿ. ಜೀವನವನ್ನು ನಾಟಕ ವೆಂದು ತಿಳಿಯಲು ಬಲ್ಲವರು ಹೇಳುತ್ತಾರೆ. ಅದರಲ್ಲಿ ತುಂಬ ಅರ್ಥವಿದೆ. ರಸದ ಅವಶ್ಯಕತೆಯಾಗಲಿ, ಕಾರ್ಯವಾಗಲಿ ಇಷ್ಟೆ. ಸಾವಿನ ಮರೆಯಲ್ಲಿಯೆ ಅಮೃತದೂಟ, ನೋವಿನ-ನೆರೆಯಲ್ಲಿಯೇ ಹಿಗ್ಗಿನ ಕೂಟಗಳನ್ನು ಕಲ್ಪಿಸು ವದು.

ಜೀವಕ್ಕೆ ಕವಿಯು ಕಣ್ಣೆಲ್ಲದಿದ್ದರೆ ಸೃಷ್ಟಿ ಇಬ್ಬಗೆ. ತಾನು ಉಂಡ ಮನೆಯನ್ನು ಹೀಗೆ ಎರಡು ಬಗೆಯಬಾರದು. ಎಂತಲೇ ಕವಿ ಈ ರೋಷ ತೋಷಗಳನ್ನು ಮೀರಿ ನಿಲ್ಲಬೇಕಾಯಿತು. ಅಂತೆಯೇ ಅವನ ನೋಟ ಯಾವಾಗಲೂ ಸ್ನೇಹಮಯ. ಕಾವ್ಯದಿಂದ ಕವಿ ಹೇಳಿದ್ದು ಜೀವನವನ್ನೆ. ಆದರೆ ಅದು ನಮ್ಮದಲ್ಲ. ನಮ್ಮಂತಹದು. ಅವನ ಸಂಕಷ್ಟಗಳು, ಅಳುವು ಗಳು ಹಿಗ್ಗನ್ನು ಹೆಚ್ಚಿಸಲಿಕ್ಕೆ ಬಂದವುಗಳು ಹೊರತು ಎದೆಯನ್ನು ಹೀರಲು ಬಂದಿಲ್ಲ. ಊರ ಕೇರಿಗಳಲ್ಲಿ ಎಷ್ಟೋ ಸತಿಯರ ಪತಿಗಳ ಮರಣ ಕೇಳಿ ನೋಡಿದಾಗ ಎದೆಗೆ ಬರೆಕೊಟ್ಟಂತೆ ನೋವಾಗಿದೆಯೇ ಹೊರತು ಹೃದಯಕ್ಕೆ ಹಿಗ್ಗುತೂ ಬಂದಿಲ್ಲ. ಅತಿವಿಲಾಪವನ್ನು ಓದಿ ಕೇಳಿದಾಗ ಹೃದಯಕ್ಕಾದ ಹಿಗ್ಗಿಗೆಗ್ಗು ಇಲ್ಲ. ಇಲ್ಲಿಯೇ ಕವಿಯ ಮಾಯೆ ಸತ್ಯದರ್ಶನದ ಸೇತುವಾಗಿ ನೆರವಾಗುವದು. ಕಾಮನ ಸಾವು ರತಿಗೆ ಸಿಡಿಲಾದರೂ ಸಹೃದಯನಿಗೆ ಹಿಗ್ಗಿನ ಪಿಂಡ ಮೃತ್ಯುವಿನಿಂದ ಅಮೃತದ ಕಡೆಗೆ ಕರೆದೊಯ್ಯುವ ಕವಿಯ ಮಾಯೆಯೆ ರಸ. ಅದು ಕಾವ್ಯಕ್ಕೆ ಬೇಕೊ ಬೇಡವೊ ಎನ್ನುವ ವಿಚಾರವಂತೂ ತಲೆಯಿಲ್ಲ ದವರ ತಲೆಹರಟೆ. ರಸವಿರದ ಕಾವ್ಯ ಎನ್ನುವುದೇ ಇರದು. ಯಾಕಂದರೆ ಕವಿ ಯಾದವನು ನೀರಸವಾದುದನ್ನು ನುಡಿವುದುದೆಂತು? ಕೃತಿಯಲ್ಲಿ ರಸವಿಲ್ಲ ದಿದ್ದರೆ ಕರ್ತೃ ಕವಿಯಲ್ಲ, ಕರ್ಮ ಕಾವ್ಯವಲ್ಲ.

ಕಂಡದ್ದಕ್ಕೆಲ್ಲ ಪ್ರೇಮ ದೀಕ್ಷೆಕೊಟ್ಟು ಕವಿ

ಇಂದಿನ ಜಗತ್ತಿಗೆ ಈ ರಸದೃಷ್ಟಿಬೇಡ. ಜೀವನದಲ್ಲಿದ್ದ ಇಬ್ಬಗೆ ಕೋಲಾಹಲವೆಲ್ಲ ಭಾವನೆಯಲ್ಲಿಳಿಯಲಿ, ಸಾಹಿತ್ಯದಲ್ಲಿ ಮೈದಾಳಲಿ. ಇದು

ಇಂದಿನವರ ವಾದ. ಇದನ್ನೆ ತಿಳಿದುಕೊಂಡಿದ್ದು ಪ್ರಗತಿ ಎಂದು. ಆದರೆ ಇದೇ ಪರಾಗತಿ ಎನ್ನುವದು ಬೇರೆ ಹೇಳಬೇಕಾಗಿಲ್ಲ. ಅರಿತವನಿಗೆ ಅಂಜಿಕೆಯಿಲ್ಲ.

ಸತ್ಯಶೋಧನೆ ಕೆಲಸವಿಲ್ಲದವರ ಹುಡುಕಾಟ; ಆನಂದಬೋಧೆ ಅರಿಯದವರ ತಲೆ ಹರಟೆ. ಎಂದು ಇಂದಿನವರ ಅನ್ನುವಿಕೆ. ಅಂತೆಯೆ ಇಂದಿನವರಿಗೆ ರಸವೆಂದರೆ ಕಾಲುಕಸ. ದೃಷ್ಟಿಯು ಸೃಷ್ಟಿಯ ಸಂಕಲ್ಪ. ನೋಡಿದ್ದನ್ನೆಲ್ಲ ನುಡಿಯದಿರಬಹುದು. ದೃಷ್ಟಿ ದೊಡ್ಡದು. ಸೃಷ್ಟಿ ಚಿಕ್ಕದು. ನುಡಿದದ್ದೆಲ್ಲವನ್ನೂ ಮಾತ್ರ ಅನುಭವಿಸಿದವ. ಕವಿಯನ್ನು ಪ್ರೇರಿಸಿದ್ದೆಲ್ಲ ಹಿಗ್ಗಲ್ಲ ಹಾಗಿದ್ದರೆ ನೆಲವೆಲ್ಲ ಆನಂದಭೂಮಿಯೆ ಆಗಿರಬೇಕಿತ್ತು. ಅವನು ಅನುಭವಿಸಿದ್ದು ಜಗತ್ತಿನ ಕಿವಿಗಿಳಿಸಿದ್ದು ಹಿಗ್ಗೇ. ಅಮೃತವೇ. ಲೌಕಿಕ ಸುಖ, ಸುಖವಲ್ಲ. ಅಂತೆಯೇ ಅದು ಸುಖವನ್ನು ಕೊಡದು. ಅಲೌಕಿಕ ಸುಖ,ಆನಂದ, ಆನಂದದ ತಂದೆ ಕೂಡ. ವ್ಯವಹಾರದಲ್ಲಿ ನಿದ್ರೆ ಬರಿ ನಿದ್ರೆ. ಅಲೌಕಿಕ ನಿದ್ರೆ ಯೋಗಮುದ್ರೆ. ರಸದೃಷ್ಟಿಯಲ್ಲಿ ಸೃಷ್ಟಿ ಅಲೌಕಿಕತೆ ಪಡೆಯುತ್ತದೆ. ಬ್ರಹ್ಮಸೃಷ್ಟಿಯೇ ಕವಿಸೃಷ್ಟಿಗೆ ಮೂಲವಾದರೂ ಅವನು ಅದನ್ನು ತನ್ನ ದೃಷ್ಟಿದೀಕ್ಷೆಯಿಂದ ಬಳಿಸಿದ್ದಾನೆ. ತನ್ನ ದೃಷ್ಟಿಯೇ ಸೃಷ್ಟಿಯ ಅಸಾಧಾರಣ ಕಾರಣ. ಬ್ರಹ್ಮಸೃಷ್ಟಿ ನಿಮಿತ್ತ ಮಾತ್ರ ಕವಿಯ ಮಾನಸ ಸೃಷ್ಟಿಗೆ ರಸವೇ ಜೀವಿತವಾಗಿರದಿದ್ದರೆ ವ್ಯವಹಾರದಂತೆ ಬ್ರಹ್ಮಸೃಷ್ಟಿಯಂತೆ ಕಾವ್ಯವು ರಣರಂಗವಾಗುತ್ತಿದೆ. ಎನ್ನಬಹುದಿತ್ತು. ಕಾವ್ಯದಲ್ಲಿರುವುದು ಹಿಗ್ಗು ಅಲ್ಲದೆ ಇನ್ನೊಂದಿರುವದಿಲ್ಲ. ನೋವನುಂಡರೂ ಮಡುವು ಗಟ್ಟಿಕೊಂಡು ನಿಂತ ಹಿಗ್ಗು ಕವಿಯ ಕೃತಿ. ಸಹೃದಯನ ಅರಿವು ಅನುಭವದ ಕಡೆಗೆ ಹರಿಯುವದು ಸಹಜವೆ ಆಗಿದೆ. ದೇಹನಿಷ್ಠ ಆತ್ಮ ಆ ಮಾಯೆಯಿಂದ ತನ್ನ ಇರವನ್ನು ಮರೆತಿದ್ದರೆ ಈ ಮಾಯೆ (ಕವಿಯ)ಆತ್ಮದರ್ಶನಕ್ಕೆ ಸಾಧನೆ. ರಾಜಾನಕ ಆನಂದ ವರ್ಧನಾಚಾರ್ಯರು ಸಹೃದಯನಿಗೆ ಯೋಗ್ಯತೆ ಹೇಳುವಾಗ ಅವನ ಹಾಗು ಕವಿಯ ಸಂಬಂಧವನ್ನು ಕುರಿತು ಮಾರ್ಮಿಕವಾಗಿ ವಿಚಾರಿಸಿದ್ದಾರೆ. ಕವಿಯ ಚಮತ್ಕಾರದ ತನ್ಮಯೀಭವನದ ಯೋಗ್ಯತೆಯುಳ್ಳವನೆಂದು ಸಹೃದಯನಿಗೆ ಅರ್ಹತೆ. ಸತ್ಯಸೃಷ್ಟಿಗೆ ಸಹಾಯಕವಾದ ಮಾಯೆಯ ದೃಷ್ಟಿಯೆ ಇಲ್ಲಿ ಚಮತ್ಕಾರವು. ಮಾಯೆಯ ತನ್ಮಯತೆಯಿಂದ ಬ್ರಹ್ಮ ಸಾಮರಸ್ಯದ ಅರಿವು. ಅಂತೆಯೆ

ಕಾವ್ಯ ಓದಿ ಕಣ್ಣೀರು ಕರೆಯಲಿ, ಕೃಪಾಣ ಪಾಣಿಯಾಗಿ ಕಾಳಗಕ್ಕಿಳಿಯಲಿ. ಸತ್ತೆನೆಂದು ನೊಂದವರಿಲ್ಲ. ಕೊಂದೆನೆಂದು ಬೆಂದವರಿಲ್ಲ. ಅಲ್ಲಿ ಒಂದೇ ಒಂದು ವೇದನೆ. ವೇದ್ಯಾಂತರವಿಗಲಿತ ಅನುಭವ. ಅದೇ ಕಾವ್ಯದ ಸಿದ್ಧಿ. ಆನಂದ ರಸ.

ದಯೆ ತೊರೆದ ವಿಮರ್ಶಕ ವೈದ್ಯನ ಶಸ್ತ್ರಕ್ರಿಯೆಗೆ ಸಿಕ್ಕು ಸುರಕ್ಷಿತವಾಗಿ ಉಳಿಯುವ ಕಾವ್ಯ ತೀರ ಲಘು. ಅವನು ಕಾವ್ಯದ ಜೀವನಾಡಿಯನ್ನು ನಿದಾನಿಸಿದಾಗ ಕವಿಯ ಜೀವನ ಸಹಜ ಸ್ವರೂಪದೊಡನೆ ಅದನ್ನು ಬಗೆದು ನೋಡುತ್ತಾನೆ. ಇಲ್ಲದ ಹಂಬಲದ ಬೆನ್ನೇರಿ ಬಂದು ಹಂದರ ಕಟ್ಟಿಕೊಂಡು ನಿಂತ ಕಲ್ಪನೆಗಳನ್ನೂ ಹುಚ್ಚು ಕನಸುಗಳೆಂದು ನಿವಾರಿಸಬೇಕಾಗುವದು.

ಊಹಾವಿಲಾಸ ಮಾತ್ರವೆ ಕವಿಯ ಚರಮ ಸಿದ್ಧಿಯಲ್ಲ. ಅದು ಭಾವಲೋಕದಲ್ಲಿ ಬೆರೆತ ಬುದ್ಧಿಯ ಚಮತ್ಕಾರ ಮಾತ್ರ. ಆದರೆ ಇದು ಬುದ್ಧಿಗೂ ಮೀರಿದ ಪುರುಷ ದರ್ಶನದ ಅಪೇಕ್ಷೆಯುಳ್ಳದು. ಹೃದಯಂಗಮವಾದ ಕಾವ್ಯವು ಬುದ್ಧಿಯ ಒರೆಗೆ ಸಿಲ್ಲುತ್ತದೆಯೋ ಭಾವನೆಯೊಡನಿಳಿದು ಆತ್ಮದರ್ಶನಕ್ಕೆ ಅನುಕೂಲವಾಗುತ್ತಿದೆಯೋ ಸಹೃದಯನೆ ನಿರ್ಣಯಿಸಿಕೊಳ್ಳಬೇಕು. ಕವಿ ರಸ ಋಷಿಯಾಗಬೇಕಾದರೆ, ಅವನ ದೃಷ್ಟಿಯಲ್ಲಿ ವಾಸ್ತವತೆಬೇಕು, ಅವನ ಜೀವನದಲ್ಲಿ ಆತ್ಮ ತುಷ್ಟಿಯಿರಬೇಕು. ಇದಕ್ಕೆ ಜತೆಯಾಗಿ ಭಾವಸಂಕಲ್ಪ ಜೀವನ ಸೌಂದರ್ಯಗಳ ನಿತ್ಯ ಪುಷ್ಟಿಯು ಅವಶ್ಯ. ತನ್ನ ಜೀವನವನ್ನು ತಾನು ತಣಿಸಿಕೊಂಡಾಗಲೆ ಅವನಿಗೆ ಆತ್ಮಸಾಕ್ಷಿಯಾಗಿ ಅರಿವಾಗುತ್ತಿದೆ. “ನಾನು ನೆರೆಯವರ ನೋವು ಕಳೆಯಲು ಹಾಡಬೇಕು.” ಆದರೆ ಕವಿಗಿದು ಜಂಭದಿಂದ ಬರುವ ಮಾತಲ್ಲ. ಅವನ ಅನುಭವಗಳ ಒತ್ತಡ ಹಾಗೆ ಗೈಸುತ್ತಿವೆ. ಇದುವೆ ಕವಿಯ ವ್ಯಕ್ತಿತ್ವ. ಕಾವ್ಯ ಓದಿದಾಗ ಸಹೃದಯನು ಇಂತಹ ಅಭಿನಿವೇಶ ಕಂಡರೆ ಕವಿಯ ರಸ ಸಮಾರಾಧನೆಗೆ ಸಾರ್ಥಕ್ಯ.

ರಸ ಕಾವ್ಯವು ನಿಜವಾಗಿ ಇನ್ನೂ ಲಾಕ್ಷಣಿಕರ ತಕ್ಕೆಯಲ್ಲಿ ಸಿಕ್ಕಿಲ್ಲ. ಇಷ್ಟೇ ಏಕೆ? ಅನುಭವವು ಕೂಡ ನೈಜ ಕಾವ್ಯವನ್ನು ಕಂಡಿಲ್ಲವೆಂದೇ ಹೇಳಬಹುದು. ಈಗ ಕಂಡದ್ದು ರಸದಂತಹ ಕಾವ್ಯ ಸರಸ ಸದಶೃಸ್ವಾದವತ್ತಾದ

ಕವಿತೆ. ಮಹಾಕವಿಗಳಿಂದ ಇಂದಿನ ಸಂಸ್ಕಾರವೇ ಬೇರೆಯಾಗಿದೆ. ಕವಿಗೆ ಇನ್ನೊಬ್ಬರ ನೋವು ತನ್ನದೆಂದು ತಿಳಿಯುವ ಬುದ್ಧಿ ಬೇಕು. ಅಂದರೆ ಮಾತ್ರ ಅಂತಹ ಕವಿಯ ಕಲ್ಪನೆಯಲ್ಲಿ ಆದರ್ಶ ಕಾವ್ಯ ಹುಟ್ಟುವದು.

ಭರತ ಮಹಾಶಯನು "ನಂ ರಸಾದೃತೆ ಕಶ್ಚಿದರ್ಥಂ ಪ್ರವರ್ತತೆ" ಎಂದಿದ್ದರೂ ಕಾವ್ಯ ಗಣನೆಯಲ್ಲಿ ನೀರಸ ಕಾವ್ಯಗಳೂ ಮಿತಿಮೀರಿವೆ. ಕಾವ್ಯವು ನೀರಸವಾಗುವದೆಂದರೇನು? ಕವಿಯು ತಾನು ಜಾಗ್ರತನಾಗಿ ಕೆಲಸ ಮಾಡುವದಿಲ್ಲವೆಂದೇ ಅರ್ಥ. ಅವನ ಆಲೋಚನೆ ಸತ್ಯಕಾಮಿಯಾಗಿ ನಡೆದಿಲ್ಲ. ಅವನ ಕುತೂಹಲ ಸೌಂದರ್ಯ ಕಾಮಿಯಾಗಿ ಸಾಗಿಲ್ಲ. ಆದರೆ ಅದು ಕೇವಲ ಒಂದು ಮಾನಸಿಕ ಲೋಭದಿಂದಲೊ ಇಲ್ಲವೆ ಹಂಬಲ ದಿಂದಲೋ, ಬಂದಿರಬೇಕು.

ಕವಿ ತನ್ನ ಪ್ರಪಂಚವನ್ನು ತಾನೇ ನಿರ್ಮಿಸಿಕೊಳ್ಳುವ ಎಂದರೆ ರುದ್ರ ರಮಣೀಯತೆಯಲ್ಲಿ ತಾನು ಆಲೋಚನೆಯ ಅಶ್ವಾರೋಹಿಯಾಗಿ ಸಾಗು ವನು. ಅವನು ಬುದ್ಧಿ ಲೋಕದಲ್ಲಿಯೂ ತಿರುಗುತ್ತಾನೆ. ಬದ್ಧ ಲೋಕ ದಲ್ಲಿಯೂ ಆಡುತ್ತಾನೆ. ಕಾವ್ಯ ಯಾವ ಲೋಕದಲ್ಲಿರುವನೋ ಅವನ ಆ ಅನುಭವ ಸೌಂದರ್ಯಗಳ ವಿಲಕ್ಷಣ ಪಾಕದಿಂದ ಹುಟ್ಟಿದೆ.

ಕವಿ ತನ್ನ ಪ್ರಪಂಚದಲ್ಲಿ ತಾನಿರುವಾಗ ಕಾವ್ಯಕ್ಕೆ ಬೇಕಾಗುವದೆಂದರೆ ಹೊರಗಿನ ಸೃಷ್ಟಿಯ ನೆರವು ಮಾತ್ರ. ಅವನ ಭಾವ ದೃಷ್ಟಿಯಲ್ಲಿ ಮೂಡಿದ ಸಂಕಲ್ಪ ಸೃಷ್ಟಿಯು ಓದುಗನ ಅರಿವುಗಾಣಬೇಕು. ರಸವು ಕವಿಯ ಆನಂದವು. ಅದು ಅವನ ಶಬ್ದಾರ್ಥಗಳಾಚೆಗೆ ಭಾವ, ಕಲ್ಪನೆ, ಆಲೋ ಚನೆಗಳ ತುದಿಯಲ್ಲಿ ಆರಂಭವಾಗುತ್ತದೆ. ಭಾವವಾಗಲಿ ಕಲ್ಪನೆಯಾಗಲಿ ಕಾವ್ಯದ ರೂಪು ತೋರಬಹುದು. ರಸವು ಮಾತ್ರ ಅದರ ಹುರುಳು. "ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ" ಎಂದು ಸಹೃದಯನಿಗೆ ನಿಶ್ಚಯವಾಗುತ್ತದೆಯೊ ಅದೆ ಅತ್ಯಂತಿಕ ಸತ್ಯವು. ಇದೆ ರಸ ಕಾವ್ಯ ಇದರ ಸಿದ್ಧಿಯೆ ಕವಿಯ ಯೋಗ್ಯತೆಯ ಮಾನದಂಡ.

ಶ್ರೀಮಾನ್ ಬೇಂದ್ರೆಯವರನ್ನು ಕುರಿತು ಈ ರಸ ಸಿದ್ಧಿಯನ್ನು ಬರೆ ಯುವದರಲ್ಲಿ ಒಂದು ಉದ್ದೇಶವಿದೆ. ರಸದ ಕಲ್ಪನೆಯಿಲ್ಲದವರು ಹೊಸ ಗನ್ನಡ ಬರಹಗಾರ ವರ್ಗದವರಲ್ಲಿ ಅಪರೂಪವಲ್ಲ. ಆದರೆ ಬೇಂದ್ರೆಯವ

ರಲ್ಲಿ ಮಾತ್ರ ಈ ರಸ ಜಿಜ್ಞಾಸೆಯು ತೀವ್ರತರವಾಗಿದೆ. ಆಚಾರ್ಯ ಅಭಿನವ-ಗುಪ್ತಪಾದರನ್ನು ಅವರು ಗುರುಸ್ಥಾನದಲ್ಲಿ ಹೇಳಿಕೊಳ್ಳುವದನ್ನು ನಾನೆಷ್ಟೋ ಸಲ ಕೇಳಿದ್ದೇನೆ. ಈ ಮಾತೆ ಬೇಂದ್ರೆಯವರ ರಸ ವಿಚಾರ ವಿಮರ್ಶೆಯ ಬಗ್ಗೆ ಸಾಕಾಗಿದೆ. ಕಾವ್ಯದ ವಿಚಾರ ಬೇರೆಯಾದಂತೆ ಲಕ್ಷಣ ಶಾಸ್ತ್ರದ ಕೊಡೆಯು ಆಚೆಗೆ ಹೊರಳುತ್ತಿದೆ. ಮಹಾಕಾವ್ಯಗಳ ಗಂಭೀರ ಪ್ರಣಾಲಿ ಇಂದಿನ ಅನಾವೃಷ್ಟಿ ಕಾಲದಲ್ಲಿ ಕಾಣಬರುವದಿಲ್ಲ. ಭಾವಗೀತೆಗಳ ಮಿಂಚುಬಳ್ಳಿಯ ಬೆಳಕು ರಸ ದರ್ಶನಕ್ಕೆ ದೀವಿಗೆಯಾಗಿದೆ. ಅಂದಿನ ಆ ಪ್ರಣಾಲಿಗಳಲ್ಲಿ ಹನ್ನೆರಡು ವರುಷಕ್ಕೊಮ್ಮೆ ರಸಗಂಗ ಬರುತ್ತಿದ್ದರೆ, ಇಂದಿನ ಇದ್ದುದೆಲ್ಲದರಲ್ಲಿಯೂ ಗಂಗಾವತರಣವೇ ಆಗಿದೆ. ಆದರೆ ಈ ಮಾತು ದಿನ ಪತ್ರಿಕೆಯ ಕವಿಗಳಿಗೂ ಅನ್ವಯಿಸುವದೆಂದು ಮಾತ್ರ ಭಾವಿಸಬೇಡಿ. ಬೇಂದ್ರೆಯವರ ವಿಷಯಕ್ಕೆ ಹಾಗೆ ನುಡಿದದ್ದು.

ಕವಿಯ ಸೌಂದರ್ಯ ನಿರೀಕ್ಷಣೆಯಿಂದ ಕಾವ್ಯದಲ್ಲಿ ಕಲ್ಪನಾಶಕ್ತಿಯೂ, ಅರ್ಥಗೌರವವೂ ಜತೆಯಾಗಿ ತೋರಿಕೊಳ್ಳಬಹುದು. ಆದರೆ ಅರ್ಥಗೌರವವು ಕೇವಲ ಗಂಭೀರ ಕಾವ್ಯದ ಸೊತ್ತು. ಅದು ಸಹೃದಯ ಸಾರ್ವಜನಿಕವಾಗಲಾರದು. ಅದಕ್ಕಾಗಿ ರನ್ನನು "ಅರ್ಥಕ್ಕೆ ಕುದಿದು ನೋಯಿಸುವವನು ಪಾತಕಿ-ಸರಸ್ವತೀದ್ರೋಹಿಯವನಾರ್ ಮುಟ್ಟುವರ್?"ಎಂದು ಅರ್ಥಗೌರವಕ್ಕೆ ಲಾಘವ ಹೇಳಿದ್ದಾನೆ. ಆದರೆ ಈ ಅರ್ಥಗೌರವ ಬರುವದು. ಕವಿಯ ಅಭ್ಯಾಸ ಶಕ್ತಿ ಮತ್ತು ವಸ್ತುವಿನ ಆಯ್ಕೆಗಳ ಮೇಲಿಂದಲೆ. ಕವಿಯು ದೇನೋ ರಸದರ್ಶನದ ದೃಷ್ಟಿಯೇ ಇರಬಹುದು. ಆದರೂ ಈ ಅರ್ಥಗೌರವವು ಅದನ್ನು ಮುಸಳಿಸುತ್ತಿದೆ. ಅಲ್ಲಿ ಅರ್ಥವ್ಯಕ್ತಿ ಇರಬೇಕೇ ಹೊರತು ಅರ್ಥಗೌರವವಾದರೆ ಕಾವ್ಯಕ್ಕೆ ಸಹೃದಯರ "ಮಾರ್ಕೆಟ್ಟಿ"ನಲ್ಲಿ ಬೇಡಿಕೆ ಕಡಿಮೆ. ಇದೇ ಕಾರಣಕ್ಕಾಗಿಯೇ ಶ್ರೀ ಹರ್ಷನಿಗೆ ಗಿರಾಕಿಗಳು ಕಡಿಮೆ; ಕಾಲಿದಾಸನಿಗೆ ಹೆಚ್ಚು.

ಕವಿ ಭಾವ ಚಿಂತನೆಯಲ್ಲಿರುವಾಗ ಅಂತರಂಗವೆ ಆಲಂಬನ ವಿಭಾವ. ಬಾಹ್ಯದಿಂದ ಉಕ್ಕಿಬರುತ್ತಿವ ಪ್ರೇರಣೆ ಸೌಂದರ್ಯಾನುಭೂತಿಯೆ ಅವನಿಗೆ ಉದ್ದೀಪನ. ಕವಿ ತನ್ನ ಚಿಂತನೆಯಲ್ಲಿರುವಾಗ ದೇಹಭಾನ ಮರೆತು ಕೇವಲ ರಸ ಸೃಷ್ಟಿಯಲ್ಲಿ ವಿಹರಿಸಬಹುದು. ಇಲ್ಲವೆ ತನ್ನ ಕಾವ್ಯದ ರಸಾಸ್ವಾದನೆ

ಯಲ್ಲಿ ತನ್ನನ್ನು ತಾನು ಮರೆತರೂ ತನ್ನನ್ನು ತಾನೇ ಅರಿತಂತೆ. ಮರೆವಿನಿಂದ ಅರಿವಿನ ಅರಿವಾಗುವದು,ಕವಿಗೆ ರಸ ಸೃಷ್ಟಿಯಲ್ಲಿಯೆ. ಈ ಯೋಗ್ಯತೆ ಅಂಬಿಕಾತನಯರ ಕವಿತೆಗಳಲ್ಲಿ ಇದೆಎನ್ನುವದನ್ನು ಬೇರೆಹೇಳುವದು ಬೇಡ. ಅವರ "ಕೊಳಲ ನೂದಿದ" ಎನ್ನುವ ಕವಿತೆ ಓದಿದಾಗ ಇಲ್ಲವೆ ಅವರ ಮುಖ ದಿಂದಲೇ ಅದನ್ನು ಕೇಳಿದಾಗ ಸಹೃದಯ ತನ್ನ ಅನುಭವವನ್ನು ಮತ್ತೆ ಜ್ಞಾಪಿಸಿಕೊಳ್ಳಬೇಕು. ಅಲ್ಲಿಯ ರಸವು ಶೃಂಗಾರ ವೀರಾದಿಗಳ ಮುದ್ರೆಯನ್ನೊತ್ತಿದ. ರಸವಾಗದೆ ಇರಬಹುದು. ಸಹೃದಯನ ಮನಸ್ಸು ಕವಿಯ ಹುರುಳನ್ನು ಬೆನ್ನಟ್ಟಿಕೊಂಡು ಹೋಗಿ ತಣಿವುಂಡು ತಿರುಗಿದರಾಯಿತು ರಸ ತನ್ನ ಕಾರ್ಯಮಾಡಿದ ಹಾಗೆಯೆ. ರಸಾಭಿವ್ಯಕ್ತಿಯು ಅರ್ಥಾಭಿವ್ಯಕ್ತಿಯಲ್ಲ. ಆ ರೀತಿಯಾದರೆ ಪತ್ರಿಕೆಯ ಅಗ್ರಲೇಖಗಳನ್ನು ಕಾವ್ಯವೆಂದೇ ಕರೆಯಬೇಕು.

ಅರ್ಥಾಭಿವ್ಯಕ್ತಿಯು ರಸಾಭಿವ್ಯಕ್ತಿಗೆ ನಿಮಿತ್ತ ಮಾತ್ರ. ಬೇಂದ್ರೆಯವರಿಗೆ ಲಾಕ್ಷಣಿಕರ ರಸವಿಚಾರದಲ್ಲಿ ಆಸಕ್ತಿಯಿದೆಯಾದರೂ ರಸಗಳು ಎಂಟೇ, ಒಂಬತ್ತೇ ಎನ್ನುವಲ್ಲಿ ಭರತಾನುಯಾಯಿಗಳ ಕುರುಡುತನ ಅವರಿಗಿಲ್ಲ. ರಸ ವಿಚಾರ ನಿಂತಿದೆ; ಸ್ಥಗಿತವಾಗಿದೆ; ಅದು ಮುಂದಕ್ಕೆ ಸಾಗಬೇಕು. ಆಗ ಹೊಸ ಹೊಸ ರಸಗಳ ಸಾಕ್ಷಾತ್ಕಾರವು ಆಗುವದು. ಕಾವ್ಯ ಪರೀಕ್ಷಣೆಯಲ್ಲಿ ರಸ ದೃಷ್ಟಿಯಿಂದ ವಿಮರ್ಶಿಸುವ ರೀತಿ ಬೇಂದ್ರೆಯವರಲ್ಲಿ ದೊಡ್ಡದೆನ್ನಬಹುದು. ಕವಿಯ ವಿಮರ್ಶಕ ವಿಚಾರಗಳನ್ನೊಂದು ಕ್ಷಣ ಬದಿಗಿರಿಸಿದರೂ ಅವರ ಕವಿತೆಯ ಮೇಲಿಂದ ಅವರ ರಸ ಪರಿಣತಾವಸ್ಥೆ ತೋರುವುದು. "ಕೊಳಲ ನೂದಿದ'' ಎನ್ನುವ ಕವಿತೆಯಲ್ಲಿಯೆ ಕಾಣಬಹುದು. ಮೂರು ತೆರನಾರ ಭಾವನೆಗಳಲ್ಲಿಯೂ ಒಂದು ರಸ ಸಂದೇಶ ಸಾರಿ ಬರುವುದು.

ಮೊದಲಿನ ಗೀತೆಯಲ್ಲಿ ಗೋಪಿಯ ಸಖಿಗೆ ಕೃಷ್ಣನ ಕೊಳಲುಲಿ, ಅದರ ಅನುಭವಕ್ಕೆ ತನ್ನ ಸಖಿಯ ಗಲ್ಲದಲ್ಲಿಯ ರೋಮಾಂಚ, ಹಸುಕಿವಿ ನಿಮಿರಿಸಿ ನಿಲ್ಲುವಿಕೆ, ಅವಳ ಕಣ್ಣೀರುಗಳು ಸಾಕ್ಷಿಗಳಾದರೆ ಸ್ವತಃ ಗೋಪಿಗೆ ಅಂತರ್ಯದಲ್ಲಾದ ಅನುಭವವೆ ಗಮಕ. ಅವಳಿಗಾದರೂ

"ಮೂಲಹಿಡಿದು ಅಲ್ಲಾಡಿಸಿದ
ಬಳ್ಳಿಯಂತೆ ಬಳುಕಿತು ಜೀವ"
.. ....ಎನಿಸಿತು

ಮೊದಲಿನವಳಲ್ಲಿ ರತಿ ವಿದಗ್ಧವಾಗಿದ್ದರೆ ಎರಡನೆಯುಳಲ್ಲಿ ಅದು ಮುಗ್ಧ ರೂಪತಾಳಿದೆ. ಇಲ್ಲಿಯ ಶೃಂಗಾರವು ದೇವ ಶೃಂಗಾರ. ಅಲ್ಲಿ ಅಂತರ್ಯ ದಲ್ಲಿ ವಾತ್ಸಲ್ಯದ್ಹೊಂದು ಧ್ವನಿಯಿದೆ. ಮೂರನೆಯ ನೆಲೆಯಲ್ಲಿ ಗೆಳೆಯ ಹೊರಗಿನ ಚಲುವನ್ನು ನೋಡಿಯೆ ಊಹಿಸುತ್ತಾನಾದರು ಅವನ ಹೃದಯ ದಲ್ಲಿ ಸಖ್ಯಭಾವ ಜಾಗ್ರತವಾಗಿದೆ. ಆಗ ಅವನು ಸ್ನೇಹ ಮೋಹಿ. ತನ್ನ ಗೆಳೆಯನಲ್ಲಿಯ ಅವನ ಅನಂತವಾದ ಪ್ರೇಮ ಹಾಡಿಗೆ ಮೊದಲುಮಾಡುತ್ತದೆ. ಇದಂತೂ ಸಖ್ಯಭಾವವು ರಸಸ್ಥಿತಿಗಳಿಯಲು ಹವಣಿಸಿ ನಿಂತಗುರುತು.

ಕವಿಯಿಂದ ಬಯಸುವದು ನಮ್ಮ ರಾಗದ್ವೇಷಾದಿಗಳಿಗೆ ಪ್ರಚೋದನೆ ಯನ್ನಲ್ಲ. ರಾಗ ದ್ವೇಷಗಳು ಕ್ಷಣಿಕವಾದ ಆನಂದಕ್ಕೆ ಮಾನಸವನ್ನು ಈಡು ಮಾಡುತ್ತಿದೆ. ಜೀವನದಲ್ಲಿದ್ದ ಕಲಹಕೋಲಾಹಲವೆಲ್ಲ ಸಾಹಿತ್ಯದಿಂದ ಪ್ರತೀತ ವಾಗಬೇಕೆಂಬ ವಾದ ಪ್ರಗತಿ ಪರವಲ್ಲ. ಕವಿಯ ದೃಷ್ಟಿ ಬೇರೆಯೇ ಇರ ಬೇಕು. ಕವಿ ಈ ರಾಗದ್ವೇಷಗಳನ್ನೆಲ್ಲ ಅನುಭವಿಸಿ ಸ್ವಪ್ರಕಾಶಾನಂದ ರೂಪ ವಾದ ಒಂದು ಸೃಷ್ಟಿಯನ್ನು ಸಹೃದಯನೆದುರು ಇಡುತ್ತಾನೆ. ಅದೇ ಅವನ ಋಷಿತ್ವ. ಆನಂದ ಬೋಧೆ. ನಾಗಚಂದ್ರನು ಹೇಳುವ "ರಾಗದ್ವೇಷ ನಿಬಂಧ ಮಪ್ಪ ಕೃತಿಯುಂ ನಿರ್ಬಂಧದಿಂ ಬಂಧ ಮಿಂ| ಭಾಗರ್ಥಂ ಪೊಸತಾಗೆ ಪೇಳ್ವಖಿಲಮುಂ ರಾಗಾವಿಲಂ ಮಾಳ್ಪವಿ|| ದ್ಯಾಗರ್ವಗ್ರಹ ಪೀಡಿತರ್ ಸ್ವರಪ ಬಾಧಾ ಹೇತುವಂ ದುಸ್ತರೋ| ದ್ಯೋಗ ಕ್ಲೇಶಿತರಾಗಿ ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮುಂ||" ಈ ಮಾತು ಮನನೀಯ ಕವಿಯ ರಸಸೃಷ್ಟಿಗೆ ನಿತ್ಯ ಸೌಹಾರ್ದ್ರ ದೃಷ್ಟಿಯೊಂದೇ ಬೇಕೆನ್ನುವ ಮಾತು ಲಾಕ್ಷಣಿಕರ ಕವಿಗಳ ಸಂದೇಶವೇ ಆಗಿದೆ. ಪ್ರಾಯಶಃ ಶೃಂಗಾರ ಹಾಸ್ಯಾದಿಗಳು ರಾಗಾನು ಬಂಧಿಗಳು. ವೀರ ರೌದ್ರಾದಿಗಳು ದ್ವೇಷಾನುಬಂಧಿಗಳೆಂದು ತೋರ ಬಹುದು. ಆದರೆ ಅಲ್ಲಿಯ ಕೃತಿ ರಸದಲ್ಲಿ ನಾಂದಿದ್ದರೆ, ಆ ರಾಗದ್ವೇಷಾದಿ ಗಳು ರಾಗದ್ವೇಷ ಜನಕಗಳಾಗುವದಿಲ್ಲ; ಆನಂದ ಜನಕಗಳಾಗುತ್ತವೆ. ಇದುವೇ ಕಾವ್ಯಲೋಕದಲ್ಲಿಯ ಲೋಕೋತ್ತರತೆ.

"ನೀ ಹೀಂಗ ನೋಡಬ್ಯಾಡ ನನ್ನ" ಎಂಬ ಕವಿತೆಯನ್ನು ಕೇಳಿದಾಗ ಸಹೃದಯನಿಗೆ ಉದ್ದೀಪ್ತವಾದ ಶೋಕವೆ ಹೃದಯ ವ್ಯಾಪ್ತವಾಗುವದಿಲ್ಲ. ಈ ಶೋಕದಾಚೆಗಿನ ಆನಂದ ತತ್ವವನ್ನೂ ಹೃದಯ ಹುಡುಕಿ, ಅನುಭವಿಸಿ ಅದರಲ್ಲಿ ಲೀನವಾಗುತ್ತದೆ. ಆದರೆ ಆ ಶೋಕದ ಕಾವು ಇನ್ನೊಂದು ಹೃದಯವನ್ನು ಹತ್ತಿದಾಗಲೆ ರಸಮೊಸರುವದು. ಅದು ಗಾಯದ ಮೇಲಿನ ಬರೆಯಲ್ಲ. ಗಾಯ ಮಾಯಲು ಬರೆ ಹರಿಶ್ಚಂದ್ರ ಚಿತ್ರವನ್ನು ನೋಡಿ ಬರಿ ಕಣ್ಣೀರನ್ನು ಕರೆದು ಗೋಳಿಡುವ ಹೆಂಗಳೆಯರಿದ್ದಾರೆ. ಅಂದರೆ ಅಲ್ಲಿ ರಸಾಸ್ವಾದನೆಗೆ ತಕ್ಕ ರಸವೆ ಇಲ್ಲವೆನ್ನಬಹುದೆ? ಸಹೃದಯನಲ್ಲಿ ಇನ್ನೊಂದು ಗುಣವು ಅವಸಿಗರಿಯದಂತೆ ಕಾರ್ಯ ಮಾಡುತ್ತಿರುತ್ತದೆ. ಕವಿಯ ಹುರುಳನ್ನು ಹುಡುಕುವದು ಮನದ ಆಶೆ. ಕವಿಯು ಹುರುಳನ್ನಿಟ್ಟಿರಬೇಕು ಸಹೃದಯನ ಆಶೆ ಅದನ್ನು ಬೆನ್ನಟ್ಟಿ ಬರಬೇಕು. ಇಂತಹ ಪಣತೊಟ್ಟ ಕಾವ್ಯವೆ ಕಾವ್ಯ ರಸಾಯನ. ಸಖೀ ಗೀತದಲ್ಲಿ ಕೇವಲ ಸಾಂಪ್ರದಾಯಿಕ ಶೃಂಗಾರ ಕರುಣೆಗಳ ಬಿರುಗಾಳಿ ಇಲ್ಲ. ಅದನ್ನು ಮೀರಿ ಸ್ನೇಹ ಸ್ಥಾಯೀ ಭಾವದ ಯಾವುದೋ ಒಂದು ರಸಧ್ವನಿ ಆ ಕಾವ್ಯದಲ್ಲಿದೆ. ರಾಜಾನಕ ಆನಂದ ವರ್ಧನಾಚಾರ್ಯರು ಹೇಳುವ ಆನಂದ ಪರಮೇಷ್ಠಿಯೇ ಇದು. ಅಲ್ಲಿಯ ಒಂದೊಂದು ಮಾತಿನಲ್ಲಿ ಕವಿಯು ಎಂತಹ ಸ್ವಾರಸ್ಯಮುಯವಾದ ಚಿತ್ರ ಹುರುಳುಗೊಂಡು ನಿಂತಿದೆ.

"ಏನಿಕೆ! ಎಂದೊಮ್ಮೆ ಸಲುಗೆಯಲಾಡಿದ
ಸಲ್ಲಾಪ ಸರಸಗಳೆಲ್ಲಿ ಇವೆ?"
'ಯಾವುದೊ ಜನುಪದ ಕಥೆ ನೀವು ಹೇಳುವಿರಿ
ಸತ್ಯಯುಗವು ಹೋಗಿ 'ಕಲಿ' ಬಂದಿದೆ
ನಿಮ್ಮೆದೆ ಎತ್ತರಕೆ ನಾವೇನು ಬಂದೇವು?
ಕಲಿತವರ ಬೆಡಗಿಲ್ಲ ನಮ್ಮ ಕಡೆ,
ನಿಮ್ಮ ಕಣ್ಣುಂದೆಯೆ ಕಣ್ಮುಚ್ಚಿದರೆ ಸಾಕು
ಗೆದ್ದೆವು' ಎಂದೆ ನೀ ಕಣ್ಮುಚ್ಚಿಯೆ."

ಇಲ್ಲಿಯ ರಸಾಭಿವ್ಯಂಜನೆಯೆಬೇರೆ. ಇದು ಕರುಣಕ್ಕಾಗಲಿ ವಿಪ್ರಲಂಭಕ್ಕಾಗಲಿ ಮುನ್ನುಡಿಯಾಗಿ ತೋರಬಹುದು. ಆದರೆ ಸಖೀ ಹೃದಯದ

ಮಿಡಿತ ಆ ಬೇರೆ ಹೊಸ ರಸದ ತರಂಗಗಳನ್ನೆಚ್ಚರಿಸಿದೆ. ದಾಂಪತ್ಯ ದಲ್ಲಿಯೂ ಇಂತಹದೊಂದು ಸುಸ್ನೇಹ ರಸಾಸ್ವಾದವು, ನಿಜ ಶೃಂಗಾರ ಪರಿ ಣತಿಯ ಚಿಹ್ನೆ. ಮೇಲಿನ ಮಾತುಗಳಲ್ಲಿಯು ಒಂದು ಸೂಚನೆ ಆ ರಸಕ್ಕೆ ಆಹ್ವಾನವೀಯುತ್ತದೆ. ಮುಂದೆ ಸಖಿ ಹೇಳುವ ಮಾತಿನಲ್ಲಿ ಕೇವಲ ಕರುಣ ನಿರೂಪಣೆಯಿಲ್ಲ. ಸಖನಲ್ಲಿ ಆತ್ಮನಿರೂಪಣ ಬುದ್ಧಿಯಿದೆ. ಕಾಮ ದೀಪ್ತಿಯಲ್ಲಿ ಪ್ರೇಮ ಪರಮಾತ್ಮನನ್ನು ಕಾಣುವ ಶೃಂಗಾರ ಪರಮ ದೃಷ್ಟಿ ಯಿದೆ ಸಖೀ ಗೀತದಲ್ಲಿಯು ನಾಯಕ ನಾಯಕಿಯರಲ್ಲಿ ಸಖ್ಯವೇ ಸ್ಥಾಯೀ ಭಾವ. ಜೀವನವೇ ಆಲಂಬನೋದ್ದೀಪನವಾಗಿದೆ. ಹುಟ್ಟುವ ರಸವು ಸಂಸ್ಕೃತ ಕಾವ್ಯದಲ್ಲಿಯು ಶೃಂಗಾರವಾಗಲಾರದು. ಸಂಸ್ಕೃತ ಲಾಕ್ಷಣಿಕರ ಶೃಂಗಾರವು ಕಾಮ ಪ್ರವೃತ್ತಿಯ ಪ್ರಭಂಜನ. ಇಲ್ಲಿಯ ಕಾಮವು ಜೀವನಕ್ಕೆ ಹಿತಮಿತವಾಗಿ ಬೀಸುವ ನಲುಗಾಳಿ. ಬೇಂದ್ರೆಯವರ ಕಲ್ಪನೆಯು ಮೊದಲಿ ನಂತಲ್ಲ ಸಾಂಪ್ರದಾಯ ಶೃಂಗಾರವು ಪ್ರವೃತ್ತಿಯನ್ನು ಪ್ರಚೋದಿಸೀತು. ಆದರೆ ಸಖೀ ಗೀತದಲ್ಲಿಯ ಸ್ನೇಹ ಧ್ವನಿಯು ಜೀವನದಲ್ಲಿ ಪ್ರಸುಪ್ತವಾದ ಅಮರತೆಯನ್ನು ಜಾಗ್ರತಗೊಳಿಸುತ್ತಿದೆ. ಆತ್ಮ ತತ್ವದ ಅರಿವಿಗೆ ನೆರವಾಗು ತ್ತಿದೆ. ರಸಾನುಭವವು ವಿಗಲಿತ ವೇದ್ಯಾಂತರವುಇಲ್ಲಿ ಕವಿ ರಸ ಧಾರ್ಮಿಕನು.

ಬೇಂದ್ರೆಯವರ ಮುನ್ನಿನ ಶೃಂಗಾರ ಕವನಗಳಲ್ಲಿಯೂ ಒಂದು ಪಾಕ ದೃಷ್ಟಿ ತೋರಿಬರುತ್ತಿದೆ. ಶೃಂಗಾರವನ್ನು ಹೀಗೆ ಶಾಂತಿಯ ಕಡೆಗೆ ಒಯ್ಯುವದು ದ್ರಷ್ಟಾರನಾದ ಕವಿಯ ಕುಶಲ ಕರ್ಮ. ಮೂರ್ತಿ, ಕಾಮ ಕಸ್ತೂರಿಗಳಲ್ಲಿ ಬರುವ ಪ್ರಣಯ ಲಹರಿಯಲ್ಲಿಯೂ ಸಖ್ಯ ಜೀವನದ ಒಂದು ಆದೇಶ ಕೇಳುತ್ತಲೆ ಇದೆ. ಅದೆ ಮಾತನ್ನೆ ಸಖೀ ಗೀತದ—

"ಎಂದಿನಿಂದಲೊ ಏನೋ ಒಳಗೊಂದು ಸಖಜೀವ
ಸಖಿ ಬಾರೆ ಬಾಯೆಂದು ಕೂಗುತಿದೆ"

ಸಖನ ಮಾತಿನಲ್ಲಿ ಮೂಡಿ ನಿಂತಿದೆ. ಹೀಗೆ ಶೃಂಗಾರವನ್ನು ಜೀವ ನದ ಶಾಂತಿಗಾಗಿ ಒಲಿಸಿಕೊಂಡ ಕವಿಗಳು ಸಾಹಿತ್ಯ ಪ್ರಪಂಚದಲ್ಲಿ ಅಪ ರೂಪ. ಕಾಲಿದಾಸನೊಬ್ಬನಿಗೆ ಈ ಕಲೆ ಸಾಧಿಸಿತ್ತೊ ಏನೋ. ಬೇಂದ್ರೆ ಯವರ ಸಾಧನೆ ಆಶ್ರಮದಲ್ಲಿ ಸಿದ್ಧಿಯನ್ನು ಸಮೀಪಿಸಿದೆ.

ಕಾವ್ಯಗಳಲ್ಲಿ ಸಾಮಾನ್ಯವಾಗಿ ಇತ್ತೀಚೆಗೆ ರಸ ವಿಚಾರ ನಿಂತು ಹೋಗಿದೆ ಎಂಬ ಮಾತು ಈಗಾಗಲೆ ಬಂದಿದೆ. ಆದರೂ ಆಧುನಿಕ ರೀತಿಯ "ಲಿರಿಕ್‌ಸಾಂಗ್" ಭಾವಗೀತವೆನ್ನುವ ಸಾಹಿತ್ಯದ ಪ್ರಾಬಲ್ಯ ಇಂದು ವಿಶೇಷವಾಗಿ ಕಂಡುಬರುತ್ತದೆ. ಆದರೆ ಈ ಭಾವಕ್ಕೆ ಹಿನ್ನೆಲೆಯಾಗಿ, ಯಾವುದೊಂದು ಸ್ಥಾಯಿ ಸಂಚಾರಿಗಳಿಲ್ಲದಿದ್ದರೆ ಆ ಗೀತೆ 'ಬಯಲಿಗೆ ಬಯಲು.' ಬೇಂದ್ರೆಯವರ ಭಾವಗೀತಗಳಲ್ಲಿಯೂ ರಸದ ಪ್ರತೀತಿಯಿದೆ. ಭರತ ವಾಕ್ಯವೇ ಹೇಳುತ್ತಿದೆ. "ನ ಭಾವ ಹೀನೋಽಸ್ತಿ ರಸಃ ನ ರಸೋಭಾವ ವರ್ಜಿತಃ" ಎಂದ ಬಳಿಕ ಎಲ್ಲಿ ಭಾವಾನುಸಂಧಾನವಿದೆಯೋ ಅಲ್ಲಿ ರಸಾವಿಷ್ಕರಣಕ್ಕೆ ಸಂಧಿಯಿದೆ. ಉನ್ಮಾದಿನಿ ವೇಶ್ಯೆಯೊಬ್ಬಳು ತನ್ನ ಪ್ರೀತಿಯ ಎದೆಯನ್ನನಿಗೆ ಕಾತರಿಸುವ ಕವನ "ಹುಬ್ಬಳ್ಳಿಯಾಂವಾ" ವಿಪ್ರಲಂಭವು ಕನ್ನಡ ಕವಿತೆಗೆ ಬಹಳ ದಿನಗಳಿಂದ ಮರೆಯಾಗಿತ್ತು. ಇಂದಿನ ಸಾಮಾಜಿಕ ಜೀವನದಿಂದ ಸನ್ನಿವೇಶವನ್ನೆತ್ತಿಕೊಂಡು ತೀವ್ರ ಪರಿಣಾಮಕಾರಿಯಾಗುವ ವಿಪ್ರಲಂಭ ವರ್ಣನೆಯನ್ನು ಕವಿ ಸಹೃದಯ ಜಗತ್ತಿಗೆ ನೀಡಿದ್ದಾರೆ. ಕಾಲಿದಾಸನ ಇಲ್ಲವೆ ಮತ್ತಿತರರ ಪಾತ್ರಗಳಲ್ಲಿ ಬರುವ ವಿಪ್ರಲಂಭದ ಅಂತರ್ಯವನ್ನು ಸಹೃದಯ ಸೌಹಾರ್ದ ಭಾವನೆಯಿಂದ ಆಲೋಚಿಸಬೇಕು. ಆಗ ವಿಪ್ರಲಂಭದ ತೀವ್ರ ಕರುಣವೇಗ ಗೊತ್ತಾಗುವದು. ಅದೇ ಭಾವನೆಯನ್ನೇ "ಹುಬ್ಬಳ್ಳಿಯಾಂವಾ" ಹುಟ್ಟಿಸುವದು. ಅಲ್ಲಿಯ ಸಾದೃಶ್ಯಗಳು ಆ ವೇಶ್ಯೆಯ ಮನೋಭಾವದ ಅಭಿವ್ಯಂಜಕಗಳು.

"ಕಣ್ಣಿನ್ಯಾಗಿನ ಗೊಂಬಿ ಹಾಂಗ ಎದ್ಯಾಗ ನಟ್ಟಾವ"
ಜನ್ಮ ಜನ್ಮಕ ಗೆಣ್ಯಾ ಆಗಿ ಬರತೇನಂದಾವಾ
ಎದೀ ಮ್ಯಾಗಿನ ಗೆಣತಿನ ಮಾಡಿ ಇಟ್ಟುಕೊಂಡಾವಾ"

ಇಲ್ಲೆಲ್ಲ ಹೃದಯದ ಬಾಗಿಲು ತೆರೆದಿಟ್ಟಿದೆ. ಸಹೃದಯನು ಅಲ್ಲಿ ಎಲ್ಲಿ ಬೇಕಾದಲ್ಲಿ ಪ್ರವೇಶಗೈಯಬಹುದು.

ಕವಿ ಯಾವ ಭಾಷೆಯಲ್ಲಿ ಹಾಡಿದರೇನು ?

ತನ್ನ ಕಾವ್ಯ ರಸಾಯನವನ್ನು ಜಾನಪದೀಯ ಭಾಷಾ ಭಾಮಿನಿಯಿಂದ ಹೇಳಬಹುದು ಇಲ್ಲವೆ ವ್ಯಾಕರಣ ಸೂತ್ರದಿಂದ "ನಾಗರಿಕತೆಯನ್ನು"

ಪಡೆದ ನುಡಿಯಲ್ಲಿ ನುಡಿಸಬಹುದು. ಕವಿಗೆ ಹೇಳಬೇಕಾದುದು ಆ ರಸ ಮಾಧುರ್ಯ. ಭರತ ಮಹಾಶಯನು ಹೇಳಿದ ಮಾತನ್ನು ಇಂದಿನವರು ಬಹುವಾಗಿ ಕೆಳಗಿನ ಸಂದರ್ಭದಲ್ಲಿ ಒಪ್ಪಲಿಕ್ಕಿಲ್ಲ. "ಶೃಂಗಾರಾತ್ ಭವೇತ್ ಹಾಸ್ಯಃ" ಆದರೆ ಶೃಂಗಾರದ ಉನ್ನತ ದೃಷ್ಟಿಯನ್ನು ಅನುಲಕ್ಷಿಸಿದರೆ ಅದರಿಂದ ಹಾಸ್ಯ ಹುಟ್ಟುವದು ಎಂತಹ ಮಾತೊ? ಬೆಂಕಿಯ ಹೊಟ್ಟೆಯಲ್ಲಿ ಬೂದಿ.... ಶೃಂಗಾರವು ಅಪಭ್ರಂಶವಾದರೆ, ಏನೊ....?

ಹಾಸ್ಯ ಪ್ರವೃತ್ತಿಯು ಪ್ರಾಚೀನ ಕವಿಗಳಲ್ಲಿ ಇರಲಿಲ್ಲವೆಂತಲ್ಲ. ಆದರೆ ಹಾಸ್ಯವು ರಸವಾಗಿ ವಿಶಿಷ್ಟ ಸ್ಥಾನವನ್ನು ಪಡೆದುದು ಇತ್ತೀಚಿಗೆ. ಬೇಂದ್ರೆಯವರ ಕವನ ವಾಙ್ಮಯದಲ್ಲಿ ಹಾಸ್ಯವು ಹೆಡಯೆತ್ತಿ ವಿಜೃಂಭಿಸದಿದ್ದರೂ, ಅವರ ಗದ್ಯ ವಾಙ್ಮಯದಲ್ಲಿ ಹಾಸ್ಯವು ಓತಪ್ರೋತವಾಗಿ ಬಂದಿದೆ. ಕವನಕ್ಕೆ ಹಾಸ್ಯ ರಸವು ಒಂದು ದೃಷ್ಟಿಯಿಂದ ಅಪಥ್ಯವೆಂದೇ ಹೇಳಬಹುದು. ಕಾವ್ಯವು ಜೀವನದ ಗಾಂಭೀರ್ಯದಿಂದ ಉದ್ಗಮವಾಗಿದೆ. ಹಾಸ್ಯವು ಜೀವನದ ವೈವಿಧ್ಯದಿಂದ ರೂಪುಗೊಂಡುದು. ಬೇಂದ್ರೆಯವರ ಪ್ರವೃತ್ತಿಯೆ ಹಾಸ್ಯದ್ದು. ಅವರು ಮಾತನ್ನು ಹಾಸ್ಯ ಪ್ರವಾಹದಲ್ಲಿಯೇ ಹರಿದುಬಿಡುವರು. ಸಾಹಿತ್ಯ ಹಾಸ್ಯ ರಸ ಭೂಯಿಷ್ಠವಾಗಬೇಕಾದರೆ ಕವಿ, ಜೀವನದಲ್ಲಿಯ ಕೊರತೆ, ಕುಂದು, ಲೋಪಗಳನ್ನು ಅರಿಯಬೇಕು, ಅನುಭವಿಸಬೇಕು. ಅದರಿಂದ ಸಮಗ್ರ ಜೀವನ ಕುರಿತು ಅವನು ತನ್ನ ಈ ಹಾಸ್ಯ ರಸವಾಣಿಯಿಂದ ಕಾವ್ಯ ಬರೆಯುತ್ತಾನೆ. ಬೇಂದ್ರೆಯವರ "ಜಾತ್ರೆ"ಯೊಂದು ನಗುವಿನ ಸಂತೆ. "ಸಾಯೋ ಆಟ" ನೋಡಿದ ಯಾರೂ ನಕ್ಕೇ ಸತ್ತಾರು. 'ತಿರುಕರ ಪಿಡುಗು' ಹಾಸ್ಯದ ಬೆಡಗು ಬೆಡಗಿನ ಚಿತ್ರ. 'ತಗಣೀ ವರದ' 'ಬೆಕ್ಕು ಹಾರುತಿದೆ ನೋಡಿದರ,' 'ಪೊರಕೆಗಳು' ನಮ್ಮನ್ನು ಎದೆಯಾರೆ ನಗಿಸುವವು. ಬೇಂದ್ರೆಯವರ ಹಾಸ್ಯದಲ್ಲಿ ಒಂದು ಬಗೆಯ ನವೀನತೆ ಇಲ್ಲವೆ ಅನನ್ಯ ಪ್ರಕಾರತೆ ತೋರುತ್ತಿದೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಹೆಸರಾದ ಹಾಸ್ಯಗಾರರಲ್ಲಿ ಬೇಂದ್ರೆಯವರೂ ಒಬ್ಬರು. ಇಂದಿನ ಸಾಹಿತ್ಯದ ರೀತಿಯಲ್ಲಿ ಹಾಸ್ಯಕ್ಕೆ ವಿಶೇಷವಾದ ಮನ್ನಣೆಯಿದೆ. ಬೇಂದ್ರೆಯವರು ಈ ರಸದಲ್ಲಿ ಕನ್ನಡದ ಜನತೆಗೆ ಒಳ್ಳೇ ಪಕ್ವಾನ್ನವನ್ನು ಒದವಿಸಿದ್ದಾರೆ. ಬೇಂದ್ರೆಯವರ ಹಾಸ್ಯ ಅತಿ ವಾಸ್ತವತೆಗೆ ಇಳಿದು ನೀರಸವಾದೀತೆಂಬ ಭಯವಿಲ್ಲ. ಇಂದಿನ ಸಾಮಾಜಿಕ ರೋಗ ರುಜೆಗೆ

ಅವರ ಹಾಸ್ಯ ರಾಮಬಾಣ, ಈ ಪರಿಣತಿಯನ್ನು 'ದೆವ್ವಿನ ಮನೆ'ಯಲ್ಲಿಯೂ, 'ಹಳಿಗೆಣೆ'ಯದಲ್ಲಿಯೂ, ಕಾಣಬಹುದು. ಒಟ್ಟಿನಲ್ಲಿ ಅವರ 'ಹುಚ್ಚಾಟಗಳು' ಹಾಸ್ಯ ರಸದ ವಿಜಯ ಸಂಕೇತಗಳು.

'ನೀ ಹೀಂಗ ನೋಡಬ್ಯಾಡ' "ಪುಟ್ಟ ವಿಧವೆ" "ಪಾಡು"ಗಳು ಕರುಣದ ಪರಾಕಾಷ್ಠೆಯಾದರೆ ''ನರಬಲಿ"ಯಲ್ಲಿ ರೌದ್ರವು ತಲೆಯೆತ್ತಿದೆ.(ಔಪಚಾರಿಕ) ಆದರೆ ಬೇಂದ್ರೆಯವರ ರಸವಿಚಾರವನ್ನು ಮಾಡುವಾಗ ಈ ರೀತಿಯ ವಿವರಣೆಯು ಸಾಂಪ್ರದಾಯಕವಾಗಿಯೆ ಆಗುವದು. ಆದರೆ ಅವರ ಇತ್ತೀಚಿನ ಕಾವ್ಯದಲ್ಲಿ ''ಕಲ್ಪವೃಕ್ಷ ವೃಂದಾವನಂಗಳಲಿ ಹೇಗೊ ಹೊಕ್ಕು ಬಂದೆ"ಎನ್ನುವಲ್ಲಿ ಜಗನ್ನಾಥನು ಹೇಳುವ ಭಾವಧ್ವನಿಗೆ ಅವಕಾಶವಿದ್ದರೂ ರಸಾವಿರ್ಭಾವವು ಆಗುವದೆಂಬುದಕ್ಕೆ ಮೇಲೆ ಕಾಣಿಸಿದ ಭರತ ವಾಕ್ಯವೇ ಸಾಕ್ಷಿ.

ಬೇಂದ್ರೆಯವರು ಇದೀಗ ಸಿದ್ಧ ಕವಿಗಳು. ಅವರ ರಸವು ಪುರುಷ ದರ್ಶನದ ಹಾದಿಯದು. ಕಾವ್ಯಾನಂದವು ಬ್ರಹ್ಮಾನಂದ ಸಹೋದರವೋ ಬ್ರಹ್ಮಾನಂದವೋ ಆಗುವದು ಸಿದ್ಧ ಕವಿಯ ಸಮಾರಾಧನೆಯಿಂದ. 'ಶಾಂತಮೆ ರಸಂ' ಉಳಿದವೆಲ್ಲ ಚಿತ್ತವೃತ್ತಿಯ ಪರಿಣಾಮಗಳು ಎನ್ನುವ ಮಾತು, ಕವಿ ಸತ್ಯ ಸಾಧನೆಯ ಆತುರತೆಯನ್ನು ಹೇಳುವುದು. ಸೌಂದರ್ಯ ಶೋಧನೆಯು ಅಲ್ಲಿ ಗುಣೀಭವನ ಹೊಂದುತ್ತದೆ. ಆದರೆ ಇಂತಹ ರಸ ನೀರಸವಲ್ಲ. ಚಾರ್ವಾಕವಾದದ ತತ್ವಗಳನ್ನು ಳವಡಿಸಿಕೊಂಡ ತಂತನ ಪರಿಯಪ ಸಾಹಿತ್ಯ ಶಿಶುಗಳಿಗೆ ಇದು ತಲೆಬೇಸರವಾಗಬಹುದು. ಜೀವನದಲ್ಲಿ ದಿವ್ಯತೆ ಕಾಣುವದು ಇಲ್ಲಿಯೆ. ಯೋಗದಲ್ಲಿ ಕಾಣುವದು ಕಾವ್ಯದಿಂದ ಭೋಗದಲ್ಲಿಳಿದರೆ, ಅಮರ ಕಾವ್ಯದ ಅವತಾರವೆನ್ನಬೇಕು. ಆ ಕಾವ್ಯದ ರಸವು ಒಂದೇ ಏಕರಸ ವಿಚಾರವು ಭರತಾಗಮ ವಿರೋಧಿ ಎನಿಸಿದರು ಆ ಭಾಸ ಮಾತ್ರ. ಇಂದಿನ ಕಾವ್ಯ ಮೀಮಾಂಸೆಯ ಕಲ್ಪನೆ ಭರತನಿಗಿದ್ದರೆ ಅವನೂ ಇದೇ ಮಾತು ಹೇಳುತ್ತಿದ್ದನೆನ್ನಬೇಕು. ನನ್ನ 'ಭರತ ವಾಕ್ಯ'ವೆಂಬ ಪ್ರಬಂಧದಲ್ಲಿ ಇದರಸಮರ್ಥನೆ ಇದೆ. ಇಲ್ಲಿ ರಸ ಸಂಖ್ಯೆಯ ಬಗ್ಗೆ ಕಡಿದಾಟವೇ ಏಳದು. ಕವಿಗೆ ಎಲ್ಲೆಲ್ಲೂ ತೋರುವದೊಂದೇ ರಸ. ಅದೇ ಅಥ, ಪತಿತವಾದ ಇರುವನ್ನೆತ್ತಿ ಅರಿವು ಮೂಡಿಸಿ ಆತ್ಮ ಸಾಕ್ಷಿಯಾಗಿ ನಿಲ್ಲುತ್ತದೆ. ಕವಿ ಎಂದು ತನ್ನ ಕಾವ್ಯದಲ್ಲಿ ಒಂದೇ

ಒಂದು ರಸದ ಅಮಂದ ಮಂದಾಕಿನಿಯನ್ನು ಅವತರಿಸುತ್ತಾನೊ ಅಂದು ಅವನು ಸಿದ್ಧ. ಕಾವ್ಯ ಓದಿದ ಕೂಡಲೆ ಜೀವನದಲ್ಲಿರುವ ತೊಡಕುಗಳೆಲ್ಲ ಅರಿವನ್ನು ಬಿಗಿಮುದಾದರೆ ಅದು ಮರುಳಸಿದ್ಧರ ಕೃತಿಯೆನ್ನಬಹುದು. ಬೇಂದ್ರೆಯವರ ಸಿದ್ಧಿ ದರ್ಶನವು ಅವರ ಹೃದಯ ಸಮುದ್ರದ ಕೆಲ ಸಾಲು ಗಳಲ್ಲಿ ಕಾಣಿಸಿಕೊಂಡಿದೆ.

"ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರಾ
ಅದು ನಮ್ಮ ಊರು ಅದು ನಿಮ್ಮ ಊರು ತಂತಮ್ಮ
ಊರೋ ಧೀರಾ
ಇದು ಸಮಯವಣ್ಣ ಇದು ಸಮಯ ತಮ್ಮ ನವ್
ನಿಮ್ಮ ಆತ್ಮಗಳಿಗೆ
ಅಂಬಿಗನು ಬಂದ ನಂಬಿಗನು ಬಂದ ಬಂದ್ಬದ ದಿವ್ಯಗಳಿಗೆ"

ಎಂತಹ ಭಾವನೆ! ಕವಿ ತನ್ನ ಭಾವ ಮೂರ್ತಿಯನ್ನು ಅನುಭಾವ ದಿಂದ ಗುರುತಿಸಿ ಮೈಮರೆತು ಹಾಡುತ್ತಾನೆ. ಜೀವನದ ಕಠೋರ ದುಃಖ ಮಯ ಸ್ಥಿತಿಯನ್ನೆಲ್ಲ ಮರೆಯಿಸಿ ಆನಂದೈಕ ಕಾಮಿಯಾಗಿ ಚಿತ್ತ ಚಿಂತನೆ ಯಲ್ಲಿ ತೊಡಗಿದಾಗ ಇಂತಹ ಕಾವ್ಯ ಉದ್ಭವಿಸುವದು. ಇಲ್ಲಿ ದಿವ್ಯ ತೆಯೆ ವಿಭಾವವಾಗಿಯೊ ಅದನ್ನು ಮೈಗೂಡಿಸಿಕೊಂಡ ಮಂತ್ರವೊ, ವ್ಯಕ್ತಿಯೋ ಅಲಂಬನೋದ್ದೀಪನಗಳಾಗಿ ಒಂದು ಅಮರ ರಸ ನಿರ್ಮಿಸಿವೆ. (ಪ್ರತೀತಿಗೊಳಿಸಿವೆ). ಇಂತಹ ರಸವನ್ನೆ ಕಾವ್ಯ ಲೋಕದಲ್ಲಿ ಅಂತಿಮ ಸಿದ್ಧಿಯೆಂದು ಕರೆಯುವದು. ಕವಿಗೆ ಆಗ ಕಲ್ಪನೆ ಬಂದು ಸ್ಮರಣೆಯಾಗು ವದು. 'ಯಂ ಪ್ರಾಪ್ಯನನಿವರ್ತಂತೆ ತದ್ಧಾಮ ಪರಮಾ ಮಮ' ಇಲ್ಲಿ ತಲುಪಿದ ಕವಿ ಜನರ ಹೃದಯದಲ್ಲಿ ಎಂದಿಗು ರಾಗದ್ವೇಷ ವಿಚಾರಗಳನ್ನು ಉದ್ರೇಕಿಸಲಾರನು. ಇಲ್ಲಿ ಅವನ ರಸವಾಣಿ ಜೀವನ ಚೈತನ್ಯವಾಗುವದೆ ಹೊರತು ಜೀವನದ ಪಡಿನೆಳಲು ಮಾತ್ರವಲ್ಲ. ಯಾವ ಕವಿ ಕಾವ್ಯಲೋಕ ದಲ್ಲೆಲ್ಲ ಇಂತಹ ಒಂದೇ ಒಂದು ದಿವ್ಯ ರಸದ ಜೇನನಿರಿಸಿರುವನೊ ಅವನೆ ಅಮರ ಕವಿ. ಶ್ರೀ ಬೇಂದ್ರೆಯವರ ಗಾಯತ್ರಿ ಸೂಕ್ತವು ಇದೇ ಬಗೆಯ ಕಾವ್ಯ. ಅಲ್ಲಿಯ ಕವಿಗಿರುವ ಭಾವನೆ ಸಹೃದಯನ ಅಂತಃಕರಣವನ್ನು ಮುಟ್ಟಿ ದಾಟಿ ಒಂದು ಮಧುರ ಭಕ್ತಿಗೆ ಹೃದಯವನ್ನು ಕುಣಿಸುತ್ತದೆ.

ಅದನ್ನು ಭಾವಿಸಿ ನೆನೆದು ಸಹೃದಯ ಹಿಗ್ಗಿದಾಗ ಆಗುವ ಆನಂದ ಹೆಚ್ಚಿನದು. ಉಪನಿಷತ್ತಿನಲ್ಲಿ ಬರುವ ಆನಂದ ಮೀಮಾಂಸೆಯಂತೆ ಕಾವ್ಯ ಲೋಕದಲ್ಲಿಯೂ ಆನಂದಕ್ಕೆ ನೆಲೆಗಳಿವೆ.

ರೌದ್ರವೆ ಆ ಆನಂದದ ಆದಿ. ಶಾಂತವ್ವೋ, ಅದರಾಚೆಗಿನದೋ ಕೊನೆ. ರಸವು ಒಂದೆಯಾದಾಗ ರಸಿಕರಲ್ಲೆ ಜಾತಿವಾದವು. ವೀರ, ರೌದ್ರ, ಬೀಭತ್ಸಗಳು 'ಆನಂದ ಸ್ವಭಾವಗಳಲ್ಲ' ಅವು ಚಿತ್ತವೃತ್ತಿಯ ಸಂಸ್ಕಾರದ ಫಲ. 'ಗೀತ ಗೋವಿಂದ'ವನ್ನು ಓದಿ ಭಕ್ತಿ ರಸವೆಂದು ತಣಿದವರೂ ಇದ್ದಾರೆ. ಶೃಂಗಾರ ಪರಿಪಾಕ ಎಂದು ಕುಣಿದವರೂ ಉಂಟು. ಆದರೆ ಕವಿಗೆ ಎಲ್ಲಿ ಸಹೃದಯನು, ಎಲ್ಲಿ ಹ್ಲಾದೈಕಮಯವಾದ ವಿಗಲಿತ ವೇದ್ಯಾಂತರವಾದ ಆನಂದವನ್ನು ಅನುಭವಿಸುವನೋ 'ಸ ಏಷ ರಸ ಋಷೇರಾನಂದಃ''

''ಚಿತ್ತದಲ್ಲಿ ನಿಷ್ಕಾಮ ರತಿಯ ರಸ ಪಾಕವಾಗಿ ನಿಂತು
ಧಾರೆಗೆಡದೆ ಭಗವಂತನಲ್ಲಿ ಚಿರ ಭಕ್ತಿಯಾಗಿ ಬಂತು''

ಅಂತೆಯೆ ಮಧುರವೆನ್ನುವದು ನವ ವಿಧ ಭಕ್ತಿಯಲ್ಲಿ ಒಂದು ವಿಧ. 'ಗಾಯತ್ರಿ ಸೂಕ್ತ' 'ಗಂಗಾವತರಣ'ಗಳಲ್ಲಿ ಇದೇ ಧ್ವನಿಗೆ ಅವಕಾಶವಿದೆ. ಅಂತು ಬೇಂದ್ರೆಯವರ ಕಾವ್ಯದಲ್ಲಿ 'ರಸವತ್ತಾದ' ರಸವು, ರಸವನ್ನು ಸಮೀಪಿಸಿಯೆ ಸಹೃದಯರ ಅನುಭವ ಸಾಕ್ಷಿಯಾಗುತ್ತಿದೆ. ಇದಲ್ಲದೆ ಬೇರೆ ರಸ ಸಿದ್ಧಿಯುಂಟೆ?

''ರಸೋ ವೈ ಸಃ'' ಎನ್ನುವದು ಪ್ರಬುದ್ಧ ಸಹೃದಯನ ಮಾತಾಗಲಿ! 'ರಸೋಹಂ' ಎನ್ನುವದು ಸಿದ್ಧ ಕವಿಯ ಧ್ಯಾನ ಮಂತ್ರವಾಗಲಿ!!

# ಅನ್ನದೇವರು

**ಲೇ:— ಎಸ್. ಎಮ್. ಸೋಲಾಪುರ**

ವರ್ಣದ್ವೇಷದ ಬಿರುಗಾಳಿ, ಅರ್ಥದ್ವೇಷದ ರಣಗಾಳಿಗಳೆಲ್ಲೆಲ್ಲ ಅನ್ನದೇವನ ಉಸಿರಾಟ, ಯುದ್ಧ ಹೊಡೆದಾಟಗಳು ಅನ್ನಕ್ಕಾಗಿ. ಕುದಿಯು ಹೊರಗಿನ ಪರಿಣಾಮ! ಆದರೆ ದೇವರೆಂಬ ಶಕ್ತಿಯನ್ನು ನಮ್ಮ ಹಿರಿಯರು ಒಪ್ಪಿದ್ದಾರೆ. ಅವನು ಎಲ್ಲರ ತಂದೆ. ನಾವೆಲ್ಲ ಅವನ ಮನೆಯ ಮಕ್ಕಳು. ಅಲ್ಲಿ ಭೇದಭಾವಕ್ಕೆ ಇಂಬಿಲ್ಲ. ಆದರೆ ಇಂದಿನ ಜಗತ್ತಿನ ಆರ್ಥಿಕ ವ್ಯವಸ್ಥೆಯನ್ನು ನೋಡುವಾಗಂತೂ ದೇವನ ಮನೆಯ ನ್ಯಾಯ ತಪ್ಪಿದೆ ಎನ್ನಿಸುತ್ತಿದೆ. ಈ ಆರ್ಥಿಕ ವಿಷಮತೆಯೇ ಇಂದು ಜಗತ್ತಿನಲ್ಲಿ 'ಆಟಂ' ಬಾಂಬಿನಂತಹ ಉನ್ಮತ್ತ ಪ್ರಲಯಕಾರಕ ವ್ಯಕ್ತಿಗೆ ಕಾರಣವಾಗಿದೆ. ಜೀವನದಲ್ಲಿ ಈ ವೈಷಮ್ಯವು ಬೇರು ಸಹಿತ ಕಿತ್ತುಹೋಗಬೇಕು. ಎಂದಾಗಲೆ ನೆತ್ತಿ ಮೇಲೆ ಕಣ್ಣು ಬಂದ ಶ್ರೀಮಂತರ ರಕ್ತ ಪಿಪಾಸೆಯು ನಿಂತೀತು. ಅದು ರಾಜಕೀಯವಾಗಿರುವಷ್ಟೇ ಮಾನವೀಯವೂ ಆಗಿದೆ. ಅಂತೆಯೇ ಕವಿಗೆ ಅರ್ಥ ಪ್ರಪಂಚದ ಅನರ್ಥ ಪರಂಪರೆಯನ್ನು ಕಂಡು ಸುಮ್ಮನಿರಲಾದೀತೇ? ದಳ್ಳುರಿಯಂತೆ ಚಿಮ್ಮಿ ಅನ್ಯಾಯವನ್ನು ತನ್ನ ಜ್ವಾಲಾ ಜಿಹ್ವೆಯಿಂದ ಸವರುತ್ತಾನೆ.

ಕರ್ನಾಟಕವಂತೂ ಸುದಾಮರ ನಾಡು. ಒಂದು ಕಡೆಗೆ ಬೆಳೆಯಿಲ್ಲೆಂದು ಅತ್ತರೆ ಇನ್ನೊಂದೆಡೆಗೆ ಬೆಳೆದದ್ದಕ್ಕೆ ಅಳುವು. ಹೀಗಾಗಿ ಕರ್ನಾಟಕಕ್ಕೆ ಮಾತ್ರ ಶೋಕಾವರ್ತವು ತಪ್ಪಿಕೊಂಡಿಲ್ಲ. ಒಕ್ಕಲಿಗನು ಬೆಳಗಿನಿಂದ ಬೈಗಿನವರೆಗೂ ಬಿಸಿಲಲ್ಲಿ ಬೆವರು ಸುರಿಸಿ ರಕ್ತ ಅಂಟಿಸಿಕೊಂಡು ದುಡಿಯಬೇಕು. ಮನೆಗೆ ಬಂದರೆ ತನ್ನ ಮಹಾ ಜಗತ್ತನ್ನು ನೋಡಿ ತಾನೆ ಉಸಿರು ಹಾಕಬೇಕು. ಅಂಬಿಕಾತನಯರು ಒಕ್ಕಲು ಮಕ್ಕಳ ಕಷ್ಟವನ್ನು ಕಂಡು ರೋಸಿ ಹೋಗಿದ್ದಾರೆ "ಭೂಮಿ ತಾಯಿಯ ಚೊಚ್ಚಿಲಮಗ" ಎಂಬ ಪದ್ಯ

ಗಳಲ್ಲಿ ಅವನ ಅವಸ್ಥೆಯನ್ನು ವರ್ಣಿಸಿದ್ದಾರೆ. ದುಡಿಯುವವನಿಗೆ ಇಂದಿನ ಜಗತ್ತಿನಲ್ಲಿ.

> "ದಿನವೂ ಸಂಜೆಗೆ ಬೆವರಿನ ಜಳಕ
> ಉಸಿರಿನ ಕೂಳಿಗೆ ಕಂಬನಿ ನೀರು."

ಹೀಗಾಗಿ ಪಾಪ ಆತನ 'ಹೊಟ್ಟೆಯು ಹತ್ತಿದೆ ಬೆನ್ನಿನ ಬೆನ್ನು' ಸಿರಿವಂತರೂ ಬಡವರ ಹೊಟ್ಟೆಯಮೇಲೆ ಬಡಿದು ಉಪ್ಪರಿಗೆಯಲ್ಲಿ, ತಿಂದದ್ದು ಕರಗಲಾರದ್ದಕ್ಕೆ ಔಷಧಿ ಸೇವಿಸುತ್ತ ಬಿದ್ದಿರಬೇಕು. ಬಡವನೊ ಮಳೆ ಬಿಸಿಲು ಚಳಿಯನ್ನದೆ ದುಡಿದು ಆ ಮುದುಕ ಗುಡಿಸಲಿನಲ್ಲಿಯೇ ಕಾಲ ನೂಕಬೇಕು.

"ಇದಾವ ನ್ಯಾಯ! ಏನನ್ಯಾಯ!!" ಹೀಗೆ ಬಡವನ ದಾರಿದ್ರ್ಯ ಬೆಳೆದ ಹಾಗೆ ಸಿರಿವಂತರ ದೊಡ್ಡಸ್ತಿಕೆ ಬೆಳೆಯುತ್ತಿದೆ. ವಿಜ್ಞಾನವೂ ಬೆಳೆಯುವುದು ತತ್ವವೆಂದಲ್ಲ ಶ್ರೀಮಂತರ ದಾಸ್ಯವೃತ್ತಿಯನ್ನು ಕೈಕೊಳ್ಳಲು ಬಡವರ ಗೋಣು ಮುರಿಯಲು ಜನುಮವೆನ್ನುವ ಕತ್ತಲೆಯಲ್ಲಿ ನರಳುವ ಜಂತು. ಜಗತ್ತಿನಲ್ಲಿ ಸಮತಾವಾದದ ಕೂಗು ಹರಿಸಿದವರ ಬೊಬ್ಬೆ ಮಾತ್ರ. ಎಂದಿನವರೆಗೆ ಜಗತ್ತಿನ ಜೀವನದಲ್ಲಿ ನನ್ನ ಹಸಿವೆಗಾಗಿ ಮಿಕ್ಕಿದ ಅನ್ನ ಇನ್ನೊಬ್ಬನ ಊಟಕ್ಕಾಗಿ ಎನ್ನುವ ಭಾವನೆ ಉದಯಿಸುವದಿಲ್ಲವೋ ಅಲ್ಲಿಯವರೆಗೆ ಈ ವೈಷಮ್ಯ ಸತ್ರವು ನಡೆದುದೆ. ಅನ್ನಕ್ಕಾಗಿಯೇ ಪಾಂಡವರು ಕಾದಿದರು. ಅನ್ನಕ್ಕಾಗಿಯೆ ವಿಜಯನಗರದ ರಾಯರಳಿದರು. ಅನ್ನಕ್ಕಾಗಿಯೆ ಹಿಟ್ಲರನು ಸತ್ತನು. 'ಆಟಂ ಬಾಂಬು' ತಯಾರಾದದ್ದು ಅನ್ನಕ್ಕಾಗಿಯೆ ಆದರೂ 'ಅನ್ನ!' 'ಅನ್ನ!' ಎನ್ನುವ ಖಿನ್ನ ಎಲ್ಲರಿಗೂ ತಪ್ಪಿಲ್ಲ. ಈ ವಿಷಯದಲ್ಲಿಯೆ ಬೇಂದ್ರೆಯವರ 'ಅನ್ನಾವತಾರ' ಎಂಬ ಕವಿತೆ ತುಂಬ ಅರ್ಥ ಉಳ್ಳದ್ದು. ಅದರ ಹಿನ್ನೆಲೆ, ಅಲ್ಲಿಯ ಪಾತ್ರಗಳು, ಎಲ್ಲವನ್ನು ವಿಚಾರಿಸಿದಾಗ ಒಂದು ಘೋರ ಸತ್ಯದ ಅನುಭವ ಹೃದಯಕ್ಕೆ ಅಪ್ಪಳಿಸಿ ಹೋಗುವದು. ಅನ್ನಾವತಾರದ ದೃಶ್ಯ....ಆ ಕಡೆಗೆ ರತ್ನಾಕರ, ಈ ಕಡೆಗೆ ವಸುಂಧರೆ' ನಡುವೆ ಪ್ರಾಣದೇವ ನಿತ್ರಾಣನಾಗಿ ಬಿದ್ದಿದ್ದಾನೆ. ವಸುಂಧರೆಗೆ—ತಾನು 'ವಸುಂಧರೆ' ತನ್ನ ಮಗುವು ನಿರಾಧಾರ ನಿರ್ಗತಿಕವಾಗಿದೆ ಎಂಬ ನೋವು. ರತ್ನಾಕರನಿಗೆ ತನಗೆ ಕಣ್ಣೀರು ಕುಡಿಯುವುದು ತಪ್ಪಲೊಲ್ಲದು ಎಂಬ ಮಿಡಿತ ಇಬ್ಬರ ಯೋಜನೆಯೂ ಒಂದೇ.

ರತ್ನಾಕರ— “ ದುಡುಕು ದೇವನು ಬಂದ
ಮಿಡುಕು ದೇವನು ಬಂದ
ಬಡವರ ಹೊಟ್ಟೆ ತಣ್ಣಗಿರಲಿಲ್ಲಾ ತಣ್ಣಗಿರಲಿಲ್ಲಾ.

ವಸುಂಧರಾ— ಯುದ್ಧ ದೇವನು ಬಂದಾ
ಬುದ್ಧ ದೇವನು ಬಂದಾ
ಇದ್ದವರ ಇರು ಚಿಂತೆ ಬಗೆಹರಿಯಲಿಲ್ಲಾ
ಬಗೆಹರಿಯಲಿಲ್ಲಾ ”

ತಣ್ಣಗಿರಲಿಲ್ಲಾ ಎಂದು ರತ್ನಾಕರ ಒರಲಿದರೆ ಬಗೆಹರಿಯಲಿಲ್ಲಾ ಎಂದು ವಸುಂಧರೆ ಒದರಿದ್ದಾಳೆ.

“ ಪ್ರಾಣದೇವನು ನಿತ್ರಾಣನಾಗುತ ಅಂದ
ಅನ್ನದೇವರು ಮಾತ್ರ ಇನ್ನು ಬರಲಿಲ್ಲೋ
ಇನ್ನು ಬರಲಿಲ್ಲಾ ”

ಇಂತಹ ಕರುಣಾಮಯ ದೃಶ್ಯ. ಅನ್ನಕ್ಕಿಂತ ಪ್ರಾಣ ತಾನು ಹೆಚ್ಚೆಂದು ಜಂಭಕೊಚ್ಚುತ್ತಿದ್ದರೂ ಅನ್ನವಿಲ್ಲದೆ ಉಸಿರು ನುಂಗಿ ಸಾಯಬೇಕಾಗುತ್ತದೆ. ಇದೆ ಸಮಸ್ಯೆಯೆ ನಾಡಿನ ತುಂಬೆಲ್ಲ ಹಬ್ಬಿದೆ. ಜಗತ್ತಿನಲ್ಲಿ ಅನ್ನವಿದೆ. ಆದರೆ ಅದರ ವಿತರಣೆ (Distribution) ಸರಿಯಾಗಿಲ್ಲ. ಅದು ಒಂದೆ ಡೆಗೆ ಮಲೆತು ನಿಂತಿದೆಯೆಂದೇ ಈ ಹೊಲಸು ದೇಶದಲ್ಲೆಲ್ಲ ಇಡುಗಿದೆ. ದೇವರು ಕೊಟ್ಟಿದ್ದನೆಲ್ಲ ತಾನೇ ಸಂಗ್ರಹಿಸುವುದು ಆಸುರೀ ವೃತ್ತಿಯ ನಿದ ರ್ಶನವಾಗಿದೆ. ತನಗೆ ದೊರಕಿದ್ದು ತನ್ನವರಿಗಾಗಿ ಎಂಬ ಭಾವನೆಬೇಕು. ಸಿರಿವಂತರ ಬೊಕ್ಕಸ ಹೀಗೆ ಬೆಳೆಯುತ್ತ ಹೋದಂತೆ ಬಡವನ ಮಾನ ಮುಚ್ಚಲು ಬಟ್ಟೆಯೂ ಕೂಡ ದೊರಕದಂತಾಗಿದೆ. ಇದೆಲ್ಲ ಸುದ್ದಿನ ಅನರ್ಥ ಕಾರಿಯಾದ ಆಧಿಪತ್ಯ. ಶ್ರೀ ಬೇಂದ್ರೆಯವರು “ಕುರುಡು ಕಾಂಚಣ”ದಲ್ಲಿ ದುಡ್ಡಿನ ಈ ಭೀಕರ ಚಿತ್ರವೊಂದನ್ನು ತೋರಿಸಿದ್ದಾರೆ. ಇಲ್ಲಿ ಕಾಂಚಣ ವೊಂದು ದೆವ್ವಿನ ಕುಣಿವ ಭಂಗಿಯಲ್ಲಿ ಹೊರಟಿದೆ. ಕಾಲಿಗೆ ಬಿದ್ದವರನ್ನೆಲ್ಲ ಅಂಗಲಾಚಿ ಬೇಡಿಕೊಳ್ಳುವವರನ್ನೆಲ್ಲ ಮೆಟ್ಟಿ ನೆಲಕ್ಕೊತ್ತಿದೆ. ಬಾಣತಿಯರ ಎಲುಬಿನ ಗೆಜ್ಜೆಕಟ್ಟಿದೆ. ಒಕ್ಕಲು ಮಕ್ಕಳ ಕಣ್ಣಿನ ಕವಡಿಯ ಮಾಲೆಗಳನ್ನು

ಕೊರಳಿಗೆ ಧರಿಸಿದೆ. ಬಡವರ ಹೊಟ್ಟೆಯುರಿಯನ್ನೇ ಕೈಯಲ್ಲಿ ತೆಗೆದು ಕೊಂಡಿದೆ. ಕಂಬನಿಯನ್ನು ಕುಡಿಯಲು ಹುಂಬ ಬಾಯಿಂದ ಒದರುತ್ತಿದೆ. ಕೂಲಿಯವರ ತೊಗಲದೂಳಿಯನ್ನೆ ಹಣೆಗಿಟ್ಟಿದೆ. ಇಂತ ಭೀಮ ಭಯಾಸಕ ಕಾಂಚಣ ಗುಡಿಯಲ್ಲಿ, ಮಹಡಿಯಲ್ಲಿ, ಅಂಗಡಿಯಲ್ಲಿ ದನಿಗೊಡುತ್ತಿದೆ. ಇದು ಕವಿ ಹೊಟ್ಟೆಯೊಳಗೆ ಅಡಗಿದ ವೈಷಮ್ಯ ವಿರೋಧದ ಕಿಚ್ಚು. ದುಡ್ಡಿಗೆ ಯಾವಾಗಲೂ ಕಂಬನಿ ಕುಡಿಯುವದರಲ್ಲಿ ಪ್ರೀತಿ. ಬಡತನದ ಸಂಸಾರ ದಲ್ಲಿ ನಿತ್ಯವೂ ಹಸಿವಿನಿಂದ ಕಣ್ಣೀರು ಕರೆದ ಚಿತ್ರಗಳು ನಮ್ಮ ಪ್ರಾಂತದಲ್ಲಿ ಯಂತೂ ಅಗಣಿತವಾಗಿವೆ. ಇಂತಹ ಕವಿತೆಯಲ್ಲಿ ರಾಜ್ಯಕ್ರಾಂತಿಯ ಬೀಜ ಗಳು ಅಡಕವಾಗಿವೆ ಎನ್ನಲು ಯಾರಿಗೂ ಧೈರ್ಯ.

'ಕಂಬನಿ ಕುಡಿಯುವ ಹುಂಬ ಬಾಯಿ' ಎಂಬೊಂದೇ ಮಾತಿನಲ್ಲಿ ಜಗತ್ತಿನಲ್ಲಿ ದುಡ್ಡಿನ ಸಂಧಾನ ಹೇಳಿದೆ. ಹಿಮಾಲಯದಂತಹ ಮಾತು. ಜೀವನ ಜ್ವಾಲೆಯಲ್ಲಿ ಹುರಪಳಿಸಿ ಹೋದ ಜನಾಂಗವಾಗಿದೆ ನಮ್ಮ ನಾಡಿ ನದು. ದುಡಿಯುವದು ತಪ್ಪಿಲ್ಲ. ದುಡಿತ ಮಾತ್ರ ಕೈಗೆ ಹತ್ತಿಲ್ಲ. ಇದಕ್ಕೆ ಯಾವ ಸರಕಾರವೂ ಅಷ್ಟೇ. ಹೃದಯವೆ ಪರಿವರ್ತನೆಗೊಳ್ಳಬೇಕು. ಶ್ರೀ ಬೇಂದ್ರೆಯವರು 'ಮನುವಿನ ಮಕ್ಕಳು' ಎಂಬ ತಮ್ಮದೊಂದು ಕವನದಲ್ಲಿ ಈ ಪ್ರಪಂಚದ ಇಂತಹ ಪರಿಸ್ಥಿತಿಗೆ ಹೇಸಿದ್ದಾರೆ.

" ಶಿಬಿ ದಿಲೀಪ ಜೀಮೂತವಾಹನರು
ಮಣ್ಣನು ಮುಕ್ಕಿದರು.
ಸ್ವರ್ಗದೊಳಿದ್ದು ಸಂಶಯ ಬಂದೀತು
ಕಣ್ಣಳ ತಿಕ್ಕಿದರು " ಏಕೆ ಗೊತ್ತೆ ?
" ನಮ್ಮ ನಾಡಿನಲಿ ನಡೆದಿಹ ಲೀಲೆಯ
ನೋಡುತ ಬಿಕ್ಕಿದರು
ದುಡಿವರ ಉಸಿರಿಗೆ ದಣಿವಿಲ್ಲ
ಕೊನೆಗೂ ತಣಿವಿಲ್ಲ.
ಕೂಸುಗಳಾಟಕೆ ಕೆಳೆಯಿಲ್ಲ
ಭೂಮಿಗೂ ನೆಲೆಯಿಲ್ಲ.
ಹೆಣ್ಣಿನ ಕಂಬನಿ ತೊಡೆದಿಲ್ಲ
ಗಂಡಿಗೆ ಬಿಡುವಿಲ್ಲ.

ಹಸಿವೆಯ ಕೂಗಿನ ಕಹಳೆಯ ಕೇಳಿ
ಜೀವವು ನಡುಗುವದು
ಸಾವಿರ ಎದೆಗಳ ಭೇರಿಗೆ ಎತ್ತೊ
ಓಡಲು ತೊಡಗುವದು.
ಮನುವಿನ ಮಕ್ಕಳ ಬೇಟೆಯಕಂಡು
ತನ್ನೊಳಗಡಗುವದು.

ಕವಿಯ ಕರುಣಾಮಯ ಹೃದಯ ತನ್ನ ಅಂತರ್ಯವನ್ನೇ ಇಲ್ಲಿ ತೆರೆದು ತೋರಿದೆ. ಭೂಮಿ ಬೆಳೆಗೇಡಾಗಿದೆ. ಜನರು ಬಾಳೆಗೇಡಾಗಿದ್ದಾರೆ. ಅಂತು ಮನುಕಾಲದಲ್ಲಿ ಬೇಟೆ ನಡೆದಿದೆ. ಈ ಜೀವಕೊಂದು ಜೀವಿಸುವ ರಾಕ್ಷಸಭಾವವು ನಾಶವಾಗಬೇಕು ಎನ್ನುವದು ಕವಿಯು ಮುಂದೆ ಹೇಳುವ ಮಾತು. ಜಗತ್ತಿನ ಜೀವನದಲ್ಲಿ ಹೃದಯ ಸಾಮತಿಬೇಕು. ಅದಿಲ್ಲದಿದ್ದರೆ ಎಲ್ಲವೂ ವ್ಯರ್ಥ. ಜಗತ್ತಿಗೆ ಮರುಕ ಬೇಕು, ಅಂತಃಕರುಣಬೇಕು. "ಮನುಜನಾದರೆ ಏನು! ಮರುಕವಿಲ್ಲದ ಜಗವೆನರಕಾ, ಕಾಣೊ ನರಕಾ" ಈ ಮರುಕವೇ ಸಮತಾವಾದದ ಆದಿಶಕ್ತಿ. ಇಂದಿನ ವೈಷಮ್ಯ ಹೀಗೆ ಬೆಳೆಯುತ್ತ ಹೊದರೆ ಬಡವನ ಒಡಲ ಒಡವಾನಲವು ಹೊರಬಿದ್ದು ಜಗತ್ತನ್ನೇ ಭಸ್ಮಸಾತ್ ಮಾಡೀತು. ಅದರಲ್ಲಿ ಅಂತಹ ಶಕ್ತಿಯಿದೆ. ಬಡವನು ಎಲ್ಲವನ್ನೂ ಸಹಿಸುವನಾದರೂ ಎಲ್ಲವನ್ನೂ ನಾಶಮಾಡುವ ಶಕ್ತಿಯೂ ಅವನಲ್ಲಿದೆ "ತುತ್ತಿನ ಚೀಲ"ವೆಂಬ ಕವನವಂತೂ ಕ್ರಾಂತಿಯ ಕೂಗು. ಸಮತೆಗೆ ಆಹ್ವಾನವೀಯುತ್ತದೆ. ಕವಿಗೆ ಮೊದಲೇ ವೈಷಮ್ಯ ನೋಡಿ ತಲೆ ತಿರುಗಿದೆ. ಮೇಲೆ ಧನಿಕರ ಅನ್ಯಾಯಗಳ ಸಹನೆ ಮೀರಿ ಸುಳ್ಳೆ ಮಾತೂ ಮಾತು ಮಾತಿಗೆ ದೇವನೆಂಬ ಶಕ್ತಿಯನ್ನು ತೊಡಕು ಹಾಕಿಕೊಂಡು ಅತ್ತು ಗೋಳಿಡುವದು. ಅದಕ್ಕೆ 'ತುತ್ತಿನ ಚೀಲ'ದ ಪ್ರತಿಯೊಂದು ಮಾತು ಬಂಡವಲ ಶಾಹಿಗೆ ಬೀಳುವ ಕುಠಾರದ ಹೊಡೆತಗಳಾಗಿವೆ. ಮಾರ್ಕ್ಸವಾದದ ಒಂದು ಧ್ವನಿಯನ್ನು 'ತುತ್ತಿನ ಚೀಲ'ದಲ್ಲಿ ಕಾಣುತ್ತೇವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕನ್ನಡದಲ್ಲಿ ಅನ್ನದ ಸಮಸ್ಯೆಯನ್ನು ಕುರಿತು ಆಳವಾಗಿ ವಿಚಾರಿಸಿ ಅರ್ಥದ ಒಂದು ಹೃದಯದ ಮಾತು ಹೇಳಿದವರಲ್ಲಿ ಶ್ರೀ ಬೇಂದ್ರೆಯವರೇ ಮೊದಲಿಗರು. ಮತ್ತು ಮಹನೀಯರು.

ದೈವುಳ್ಳವರಿಗೆ ದಯವೇ ಇಲ್ಲ
ತಿತ್ತಿರಿ ತುಂಬಿದೆ ಕೂಳಿನ ಕೋಟೆ
ಬಿಡುಗಣ್ಣವರಿಗೆ ಕಾಣುವದಿಲ್ಲ
ಅಮೃತದ ತೇಗಿನ ಮರವಂತಹದು.
ಹಸಿದವ ಬಲ್ಲ ಹಸಿವೆಯ ಶೂಲಿ"

ತನ್ನ ಹೊಟ್ಟೆ ಬರಿದಾಗಿದೆ ಶ್ರೀಮಂತರ ಸಂಗ್ರಹದಲ್ಲಿ ಹಿಡಿಸಲಾರದ ಹೊನ್ನು ತುಂಬಿದೆ. ಇದು' ದೇವತೆಗಳಿಗೆ ಕಾಣಬಾರದೆ! ಕಂಡೀತೇಕೆ? ಅವರು ಮತ್ತರು! ಹಸಿವೆಯಾಗದಂತಹ ಔಷಧ (ಅಮೃತ) ಸೇವಿಸಿದ್ದಾರೆ. ಹಸಿದವರ ಗೋಳು ಅವರಿಗೆ ತಿಳಿಯದು. ಅವರು ಉನ್ಮತ್ತ ಶ್ರೀಮಂತ ಜನತೆಯ ಜಾತಿಗೆ ಸೇರಿದವರೆಂದು ಕವಿ ನಿಂದ್ಯವಾಗಿ ಕಟಕಿಯಾಡುತ್ತಾನೆ. ದೇವತೆಗಳು ಮಾನವ ಕುಲದ ಉದ್ಧಾರದ ಹೊಣೆಹೊತ್ತವರು. ಆದರೆ ತವಮ್ಮ ಅಮೃತ ಮದ ತಲೆಗೇರಿ ಕುಳಿತುಬಿಟ್ಟಿದ್ದಾರೆ. ಅವರಿಗೆ ಹಸಿವೆಯ ಭಯವಿಲ್ಲ. ಎಂದಮೇಲೆ ಇನ್ನೊಬ್ಬರಿಗೆ ಹಸಿವೆಯೇ ಇಲ್ಲವೆನ್ನುವ ಗುಂಗಿನಲ್ಲಿ ಸ್ವರ್ಗದಲ್ಲಿ ಚೈನಿಹೊಡೆಯುತ್ತಿದ್ದಾರೆ. ಆದರೆ ಪ್ರಪಂಚವು ನಿತ್ಯವೂ ಸ್ಮಶಾನ ಭೂಮಿ

'' ಶಿವಾ ಶಿವಾ ಹೇ ಶಿವಮಾದೇವ
ಅತ್ತಿತು ಕೂಗಿತು ಚೀರಿತು ಜೀವ
ಬಾಯಂಗಳದಲಿ ಹುಟ್ಟಿದ ಮಾತು
ಮುಗಿಲಿನ ಕಿವಿಯನು ಮುಟ್ಟಲೆ ಇಲ್ಲಾ
ಹಾಡುವ ಸಭೆಯಲಿ ನರಳುವದುಂಟೆ ''

ಜೀವಲೋಕದಲ್ಲಿ ನಿತ್ಯವೂ ಶಂಖವಾದ್ಯ ನಡೆದಿದೆ. ಆದರೆ ಅಪ್ಸರೆಯನ್ನು ಕುಣಿಸಿ ಮೋಜಿನಲ್ಲಿ ಹೊತ್ತುಗಳೆಯುವ ಮುಗಿಲಿನವರಿಗೆ ಎಂದಾದರೂ ಅಳುವ ಕೂಗು ಕೇಳುವದೆ? ನೆಲದಲ್ಲಿ ಜೀವ ಜಂತುಗಳು ವಿಲಿ ವಿಲಿ ಒದ್ದಾಡಿ ಸತ್ತರೂ ಅಷ್ಟೆ! ಇಂತಹ ದೇವರಿಂದ ಏನು ಪ್ರಯೋಜನ? ಜಗತ್ತಿಗೆ ಬೇಕಾದದ್ದು ಅನ್ನ.

ಕೂಳುಸಿಗದ ಹೊತ್ತಿನಲ್ಲಿ ಜಗದುದ್ಧಾರ ಆತ್ಮಸಾಕ್ಷಾತ್ಕಾರಗಳು ಹುಚ್ಚರ ಬಡಬಡಿಕೆಯಾಗುವದು ಸಹಜವೆ. ಮೊದಲು ಬದುಕು, ಬುದುಕಿಗೆ ಮೊದಲು ಅನ್ನ. ಎಲ್ಲಕ್ಕೂ ಮೊದಲು ಅನ್ನಬೇಕು.

“ ಬಾಳಿಗಿಂತಲೂ ಕೂಳೇ ಮೇಲೋ ?
ಬರಿದೋ ಬರಿದು ತೆರವೊ ತೆರವು
ಬಡವರ ಬಗ್ಗರ ತುತ್ತಿನ ಚೀಲ ”

ಇಂತಹ ಅಸಹ್ಯ ಅನುತಾಪವನ್ನು ಎಷ್ಟು ದಿವಸ ಸಹಿಸೀತು ? ಕೊನೆಗೆ ಆ ಜ್ವಾಲೆ ಭುಗಿಲ್ ಎಂದು ಜಗವನ್ನೆ ದಿಗಿಲುಗೊಳಿಸುವದು. ಆಗ ಬಡವನ ಒಡಲ ಕಿಚ್ಚು ಹೆಚ್ಚು ಉನ್ಮತ್ತವಾಗುವದು. ಆಗಲೆ—

“ ದೇವರದೊಂದು ಗೋರಿಯ ಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ
ಗಣಗಣ ಬಾರಿಸಿ ಪ್ರಾಣದ ಗಂಟೆಯ
ಸಾವಿನ ನೋವಿಗೆ ಕಲಮಲವೆದ್ದು
ನೆಲವನ್ನೆಲ್ಲಾ ತುತ್ತುವೆನೆಂದು
ಗದರುತ್ತಿಹುದು ಗರ್ಜಿಸುತಿಹುದು
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳ ದನಿಯೊಂದು” ಏಳುವುದು.

ಅದೇ ಕ್ರಾಂತಿ ಸೂಕ್ತವಾಗುವುದು. ಜಗತ್ತಿನ ಶ್ರೀಮಂತರ ಮುಖ ಭಂಗವಾಗುವುದು. ಅವರ ಮೂಗು ನೆಲಕ್ಕೆ ಹತ್ತುವುದು. ಆಮೇಲೆ ಶಾಂತಿ, ಸಮತೆಯ ಯುಗಬಂದೀತು. ಅಲ್ಲಿಯ ವರೆಗೂ ಜಗತ್ತಿನಲ್ಲಿ ಯುದ್ಧ, ದ್ವೇಷ, ಕಿಚ್ಚುಗಳು ಹೊತ್ತುತ್ತಲೇ ಇರುವವು. ಜೀವನದಲ್ಲಿ ಸ್ವಾಸ್ಥ್ಯವಿಲ್ಲ. ಮಾರ್ಕ್ಸವಾದವು ಅಂತೆಯೇ ದೇವರನ್ನು ಕಿತ್ತುಹಾಕಿದೆ. ಹುಚ್ಚು ಶ್ರದ್ಧೆಯನ್ನು ಹಾಳುಮಾಡಿದೆ. “ಅನ್ನವೆ ಧರ್ಮಕ್ಕೆ ಮೂಲ” ಎಂದು ‘ಬೈರಾಗಿಯ ಹಾಡಿ’ನಲ್ಲಿ ಹೇಳಿದೆ. ಸತ್ಯವಾದ ಮಾತಿದು. ಬೇಂದ್ರೆ ಯವರೇ ತಮ್ಮದೊಂದು ವಿಚಾರದಲ್ಲಿ ‘ಜನರ ಮೈಗಳನ್ನು ಆಳಿ ಅನ್ನವನ್ನು ಆಧೀನದಲ್ಲಿ ಇಟ್ಟುಕೊಳ್ಳಲು ಶಕ್ತಿಮದೋನ್ಮತ್ತರು ಹವಣಿಸುವದುಂಟು.

ಇವಿಷ್ಟೆ ಸ್ವತಂತ್ರವಾದರೆ ಸಾಲದು. ಮಾನವನ ಮೈಗಳೂ ಪರಾಧೀನವಾಗಿ ಉಳಿದಿರುವ ವರೆಗೆ ಅನ್ನದ ಇನ್ನೊಂದು ಕಗ್ಗಂಟು ಬಿಡಿಸಲಾಗದು.” ಎಂದು ಹೇಳಿದ್ದಾರೆ. ಅನ್ನವನ್ನು ಆಕ್ರಮಿಸಿ ಅಂಕಿತದಲ್ಲಿಟ್ಟುಕೊಳ್ಳುವವನು ಅದನ್ನು ಇನ್ನೊಬ್ಬನ ಕೈಯಿಂದ ಕಸಿದುಕೊಳ್ಳಬೇಕು. ಕಸಿಯುವಾಗ ಅವನು ಒಂದು ಕೈ ತೋರಿಸಿದರೆ ಇವನೂ ಒಂದು ಕೈ ನೋಡಬೇಕಾಗುವದು. ಹೀಗಾಗಿ ಜಗತ್ತೇ ಒಂದು ರಣರಂಗವಾಗುವದು. ಅನ್ನತಿಂದು ಬೆಳೆದ ಮೈಗೆ ಅನ್ನ ಬೇಕೇಬೇಕೆಂದು ಹೇಳಬೇಕಾಗಿಲ್ಲ. ಎಲ್ಲಿಯವರೆಗೆ ಅನ್ನಕ್ಕಾಗಿ ಜಗ್ಗಾಟ ನಡೆದಿದೆಯೋ ಅಲ್ಲಿಯ ವರೆಗೆ ವಿಷಮತೆ ಕಾದಿದೆ. ಅನ್ನ ಎಂದು ವಿತರಣ ಸಮತೆಯನ್ನು ಪಡೆಯುತ್ತದೆಯೋ ಅಂದು ಬಡವರ ಹೊಟ್ಟೆ ತಣ್ಣಗಾಗುತ್ತದೆ. ರಾಷ್ಟ್ರವು ನಗೆಯಿಂದ ನಲಿಯುತ್ತದೆ!!

“ ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ।<br>ಅನ್ನೇನ ಜಾತಾನಿ ಜೀವಂತಿ ”

# ನಾದಲೀಲೆ

## ಲೇ:— **ಶಾಂತ ಗಲಗಲಿ**

ಕಾವ್ಯವು ತೋರಿದ್ದು ಮಾತಿನ ಮಾಲೆಯಾಗಿ. ಮಾತಿಗೆ ಅದರ ಧ್ವನಿಯೆ ಪ್ರಾಣವಾಯು. ಅಂತೆಯೇ 'ಕಾವ್ಯಸ್ಯಾತ್ಮಾ ಧ್ವನಿಃ' ಎಂದು ನಮ್ಮವರೆಂದರು. 'Poetry is the suggestive sound' ಪಾಶ್ಚಾತ್ಯ ಪಣದವರೆಂದರು. 'ಕಾವ್ಯವು ಧ್ವನ್ಯಾತ್ಮಕವಾಗಿದೆ' ಎಂಬ ಮಾತು ಪೂರ್ವ ಪಶ್ಚಿಮಗಳಿಗೆ ಒಪ್ಪಿಗೆಯಾಗಿದೆ. ಹೃದಯದಲ್ಲಿ ಜಾಗ್ರತ ಭಾವನೆಯು ಪ್ರಕಟವಾಗಲು ಚಿದಂಬರದಲ್ಲಿ ಸುತ್ತಾಡುತ್ತಿದೆ. ಭಾವನೆಯ ಚಲನೆಯೇ ಉದ್ಭವಕ್ಕೆ ಕಾರಣ. ನಾದವು ತಾನೂ ಹೃದಯಾಕಾಶದಿಂದ ಹೊರಬಿದ್ದು ಸಂಕೇತವಾಗಿಯೇ ಶಬ್ದರೂಪದಲ್ಲಿ ಗೋಚರಿಸುತ್ತಿದೆ. ಶಬ್ದಾರ್ಥಗಳು ನಾದದ ಒಂದು ಸಂಕೇತ ಮಾತ್ರ. ಆದರೆ ನಿಜವಾದ ಭಾವನೆಯ ಅರಿವು ದೊರೆಯಬೇಕಾದಲ್ಲಿ ಶಬ್ದಾರ್ಥಗಳನ್ನು ಮೀರಿ ನಾದ ಶಕ್ತಿಗೆ ಶರಣುಹೋಗಬೇಕು. ನಾದದ ಅಂಚಿನಲ್ಲಿಯೇ ಭಾವನೆಯ ಸಂಚಿದೆ. ಈ ನಾದವನ್ನೇ ಶಬ್ದಶಕ್ತಿ ಎಂದು ಕರೆಯಬಹುದು. ಆದರೆ ಬರಿ ಶಬ್ದ ಮಾತ್ರವೆ ನಾದ ದ್ಯೋತಕವಲ್ಲ. 'ಶಬ್ದ'ವು ನಾದದ ಪರಿಭಾಷೆಯಲ್ಲಿ ನಿಯೋಜಿತವಾದುದು ಎಂದು. ಆಗ ಅಲ್ಲಿ 'ರಾಜಪುರುಷ' ಎನ್ನುವ ಮಾತಿನ ಜೀವಾಳ ಜ್ಞಾಪಿಸಿ ಕೊಳ್ಳಬೇಕು.

ನಾದವು ನಿರಾಕಾರಿಯಾದ ಚೈತನ್ಯ. ಶಬ್ದವು ನಾದದ ಪ್ರಕೃತಿ. ಕವಿ ಭಾವ ಚಿಂತನೆಯಲ್ಲಿರುವಾಗ ಅವನ ಭಾವನೆಯು ನಾದದ ಬೆನ್ನೇರಿ ಗುಯ್‌ಗುಡುತ್ತಿದೆ. ತನ್ನನ್ನು ಕಾಯುತ್ತನಿಂತ ಪ್ರಕೃತಿಯೊಡನೆ ಬೆರೆತು ತನ್ನ ಲೀಲೆಗಾರಂಭಿಸುತ್ತಿದೆ. ಉದಾತ್ತ ಕಾವ್ಯವಾದರೂ ಸಹೃದಯನ ಹೃದಯ ಗಾಮಿಯಾಗುವುದೆಂದರೆ ಶಬ್ದವನ್ನು ಇಲ್ಲಿಯೇ ಬಿಟ್ಟು ಕೇವಲ ನಾದವು ಅವನ ಹೃದಯವ್ಯಾಪಿಯಾಗಿ ತನ್ನ ನಿಜರೂಪವನ್ನು ಅಲ್ಲಿ ರೂಪಿಸಬೇಕು. ಇದುವೆ ಕಾವ್ಯ ಸಾರ್ಥಕತೆ! ವೈಯಾಕರಣಿಗಳು ಶಬ್ದಶಕ್ತಿಯನ್ನು 'ಸ್ಫೋಟ'

ವೆಂದು ಕರೆದಿದ್ದಾರೆ. ಆ ಸ್ಫೋಟವನ್ನು ಶಾಬ್ದಿಕ ಚೈತನ್ಯವೆಂದು ಪರ್ಯಾಯ ವಾಗಿ ಹೇಳಿದ್ದಾರೆ ಎನ್ನಬಹುದು.

ಶೀಕ್ಷಾಂ ವ್ಯಾಖ್ಯಾಸ್ಯಾಮಃ |
ವರ್ಣಃಸ್ವರಃ | ಮಾತ್ರಾ ಬಲಂ | ಸಾಮಃ ಸತಾನಃ

ನಾದಸಮಗ್ರತೆಯೇ ರಸಾನುಭವಕ್ಕೆ ಕಾರಣ. ಕವಿಯು ಕೊಡುಗೆ ಯನ್ನು ಕಿವಿಯಿಂದ ಕೊಳ್ಳಬೇಕು. ಅವನು ತನ್ನ ಶಬ್ದಗಳಿಂದ ನಾದ ಹೊಮ್ಮುವಂತೆ ತನ್ನ ಹಾಡನ್ನು ಹೇಳುವನು; ಇಲ್ಲವೆ ಹೇಳಿಸುವನು. ಕಾವ್ಯವು ಕಿವಿಯ ವಿಷಯ. ನಾಟ್ಯವು ದೃಶ್ಯವಾದರೂ ಕಿವುಡರಿಗೆ ಮುದ್ರಾ ವ್ಯಂಜಿತ ನರ್ತನವೂ· ಅಭಿನಯ ಚತುಷ್ಟಿಯ ವರ್ತನವೂ ಒಂದೇ. ಅಂತೆಯೇ ಅಭಿನಯ ಪ್ರಯೋಗ ನೋಡುವವನಿಗೆ ಕಣ್ಣು ಮಾತ್ರವೇ ಸಾಲದು. ಕಿವಿಯು ಅವಶ್ಯ ಕವಿಗೆ. ನಾಲಿಗೆ ಚಪಲವಿರಬೇಕು. ಸಹೃದ ಯನಿಗೆ· ಕಿವಿ ಸಾಗ್ರತವಿರಬೇಕು. ಅಂದರೆ ಕಾವ್ಯ ಕುತೂಹಲಕ್ಕೆ ತಣಿವು. ಈ ನಾದ ಮಹಾತ್ಮೆಯನ್ನು ಇಲ್ಲವೆ ಕಾವ್ಯದ ಸತ್ವ ಎಲ್ಲಿದೆ ಎನ್ನುವದನ್ನು ಶ್ರೀ ಬೇಂದ್ರೆಯವರು ತಮ್ಮ 'ಭಾವಗೀತ' ಎನ್ನುವ ಕವನದಲ್ಲಿ ತೋರಿಸಿ ದ್ದಾರೆ.

''ಓಂಕಾರದ ಶಂಖನಾದಕಿಂತ ಕಿಂಚಿದೂನಾ
ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ"

ಕಲ್ಪನೆಯ ವಿಲಾಸವೆ ಭಾವನಾವಿಷ್ಕಾರ ಭೃಂಗದ ಬೆನ್ನೇರಿ ಬಂದಿದೆ· ತುಂಬಿಯ ಗುಂಗಾನದ ಸಾದೃಶ್ಯದೊಡನೆ ಮೈವೆತ್ತಿದೆ. ಅದೂ ಓಂಕಾರದ ಪ್ರವಣದ ಸಾಮತಿ ಪಡೆದಿದೆ. ಅಂದರೆ ಅದಕ್ಕೆ ಶಬ್ದಾರ್ಥಗಳ ಅರಿವಿಲ್ಲ. ಏನೋ ಹೃದಯ ವೀಣೆಯನ್ನು ಮೀಟಿ 'ಟಂವ್' ಎನ್ನಿಸುವದು ಮಾತ್ರ ಅದರ ಕೆಲಸ. ಅದರಿಂದ ಹೃದಯ ಪುಲಕಿತವಾಗುತ್ತಿದೆ. ಶಬ್ದವನ್ನು ಕೇಳಿದಾಗಲೂ, ರಸ ಧರ್ಮಗಳನ್ನು ಗುರುತಿಸಿದಾಗಲೂ ರಸಾನುಭವವು ಬುದ್ಧಿಗ್ರಾಹ್ಯವಾದುದು. ಎಂದರೆ ಅತೀಂದ್ರಿಯವಾದುದು.

ನಾದವು ಶಬ್ದದ ಬೂದಿಯಲ್ಲಿ ಮುಚ್ಚಿದ ಕೆಂಡವಲ್ಲ. ಶಬ್ದದ ಜೋಲು ಹಿಡಿದು ನಾದ ಪ್ರಪಂಚ ಮೈಚಾಚಿದೆ. ಶಬ್ದ ನಾದದ ನೀರು ತುಂಬಿಕೊಂಡ

ಸೀರದ. ಸಹೃದಯು ಕವಿಯ ನಾದ ಮಾಧುರ್ಯವನ್ನೆಲ್ಲ ಶಬ್ದಮುಖಾಂತರ ಸಾಕ್ಷಾತ್ಕರಿಸಿಕೊಳ್ಳಬೇಕು. ಕವಿಗೆ ಶಬ್ದವೇ ಕಲ್ಪವೃಕ್ಷವಲ್ಲದಿದ್ದರೂ, ಸಹೃದಯನಿಗೆ ಮಾತ್ರ ಚಿಂತಾಮಣಿ. ಕವಿ ತನಗೆ ದೊರೆತ ಯಾವ ಶಬ್ದ ದಲ್ಲಿ ಯಾವ ನಾದ ಮಾಧುರ್ಯವನ್ನು ತುಂಬಿದ್ದಾನೋ ಅವನ್ನು ಹಿಂಡಿ ತೆಗೆಯಲು ಕಣ್ಣು ಸಾಲದು. ಅದರಿಂದ ಆ ಧ್ವನಿಶಕ್ತಿ ಹೊಮ್ಮುವಂತೆ ನಾಲಿಗೆ ಕೆಲಸಮಾಡಬೇಕು. ಕಿವಿ ಅದನ್ನು ಗ್ರಹಿಸಬೇಕು. ಕಣ್ಣಿನಿಂದಲೇ ಕಾವ್ಯ ಅರಿತೆನೆಂಬ ಆಗ್ರಹಿಗೆ ನಾದಾನುಗ್ರಹವಿಲ್ಲ. ಶಬ್ದವು ತಾನು ನುಡಿಯಬೇಕು ಅಂದರೆ ಅದು ಕರ್ಣ ರಸಾಯನವಾದೀತು !

ಕಾವ್ಯವು ಶಬ್ದಮಯವಾಗಿದೆ. ನಾದ ಸಾಕ್ಷಾತ್ಕಾರಕ್ಕೆ ಈ ಶಬ್ದವೇ ದಾರಿಯಾಗಿದ್ದರೂ ಇನ್ನು ಬೇರೆ ಕೆಲವು ಮಾರ್ಗೋಪಕಾರಿಗಳಿವೆ. ಧ್ವನಿ ಕಾವ್ಯದ ಆತ್ಮ ಎನ್ನುವವರು ಕಾವ್ಯಮಾತಿನ ಆತ್ಮ ಎನ್ನುವ ರೀತಿಯಲ್ಲಿ. ವೇದವು ನಾದಮಯವು. ನಾದ ವಹನದಿಂದಲೇ ಅದರ ಅರ್ಥಾವಗಾಹನೆ. ವೇದವು ಕಾವ್ಯವಲ್ಲದಿರಬಹುದು. ಕಾವ್ಯವು ಕೂಡಾ ಪವಿತ್ರತೆ, ಪಾರಮ್ಯ ಪಡೆಯಬೇಕಾದರೆ ನಾದವಿಲಾಸವೆ ಭಾವನಾವಿಲಾಸದ ಕುರುಹಾಗಿರಬೇಕು. ಋಷಿಗಳು ಕಲ್ಪಾಂತಕಾಲ ತಪಿಸಿ ಮಂತ್ರ ಹೇಳಿದರು. ಮಂತ್ರವು ಗೇಯ ಸಾಮಗಾನ, ನಾದಲಹರಿ!!! ನಾದಶಕ್ತಿಯಲ್ಲಿ ಭಾವ ಭಾವನಾಸಂಪತ್ತಿ ಗಳನ್ನು ತೇಲಿಸುವದು ಸಿದ್ಧ ಕವಿಗಳ ಸಂಕೇತ. ನಾದಮಯವಾದ ವಾಣಿ ಯಲ್ಲಿಯೆ ನಿಜವಾದ ಸಾರಸ್ವತ ಸಂಪತ್ತಿದೆ. ಯೋಗ ಮಾರ್ಗದ ಅನು ಭನುವವು ಹೀಗೆ ಶಬ್ದಕ್ಕೆ ಕಾಣ್ಕೆ ಇದೆ; ಕೇಳ್ಕೆಯೂ ಇದೆ. ಅದಕ್ಕೆ ಕಾವ್ಯ ಓದುವಾಗ ಒಂದೇ ಇಂದ್ರಿಯ ಸಾಲದು "ಕಣ್ ಕಿವಿಯಾಗುತಿದೆ, ಕಿವಿ ಕಣ್ಣಾಗುತಿದೆ." ಎನ್ನುವದು ಅಂತರಾನುಭವದ ವಚನ. ಹಾಗಾಗಬೇಕು ಅಂದರೆಯೇ ಕಾವ್ಯಸಿದ್ಧಿ. ದೃಷ್ಟಿ ಸೃಷ್ಟಿಗಳ ಸಮಷ್ಟಿಯು ಕಾವ್ಯಕ್ಕೆ ಕಿವಿ ಕಣ್ಣುಗಳು ಬೇಕು.

ದೃಷ್ಟಾರನಾದ ಆಂಗ್ಲಕವಿ ಎ. ಈ. ಈ ಮಾತನ್ನೇ 'ಒಂದೇ ವರ್ಣ ವನ್ನಾಗಲೀ ಧ್ಯಾನ ಕ್ರಮದಲ್ಲಿ ಅನುವಾದ ಮಾಡಿದರೆ ಅಲ್ಲಿಂದ ಒಂದು ದಿವ್ಯ ಕಾಣ್ಕೆಯನ್ನು ಪಡೆಯಬಹುದು" ಎಂದದು ತನ್ನ ಅನುಭವ ಹೇಳಿದ್ದಾನೆ. ಇದೇ ಮಾತನ್ನು ಯೋಗದರ್ಶನವೂ ಸಾರುತ್ತಿದೆ. ಭಗವಂತನು "ಓಮಿ

ತ್ಯೇಕಾಕ್ಷರಂ ವ್ಯಾಹರನ್ ಮಾಮನುಸ್ಮರ" ಎಂದಿದ್ದಾನೆ. "ನಾದಾನು ಸಂಧಾನದಲ್ಲಿ ದಿವ್ಯಾನುಭವದ ಸಂಚಯವಿದೆ" ಎಂದು ಮನಗಾಣಬೇಕು. ಅದಕ್ಕೆ ಕವಿ ದ್ರಷ್ಟಾರನಾಗಬೇಕು.

ಸಹೃದಯನು ಈ ನಾದ ಸಾಕ್ಷಾತ್ಕಾರವನ್ನು ಸಾಧಿಸಬೇಕು ಕಾವ್ಯ ವಾಚನವು, ಅದರ ಛಂದೋಬಂಧ. ಲಯದ ವಿಲಾಸ. ಅಲಂಕಾರದ ಅನುಕರಣನೆ. ಈ ಸಾಧನ ಚತುಷ್ಟಯದಿಂದ ನಾದಲೋಕ ನೇರಬೇಕು.

ನಾದೋಪಜೀವಿಗಳಾದ ಸಹೃದಯರು. ನಾದ ನಿಧಿಗಳಾದ ಕವಿಗಳು ಸಾರಸ್ವತ ಲೋಕದಲ್ಲಿಯ ಚಿರಂಜೀವಿಗಳು. ಕಾವ್ಯವೆಲ್ಲ ನಾದಲೀಲೆ ಯಾಗಿರಬೇಕು. ಕವಿ ಈ ಲೀಲಾಲೋಲ. ಇಡೀ ಸಂಸ್ಕೃತ ಸಾಹಿತ್ಯ ಸಾಮ್ರಾಜ್ಯದಲ್ಲಿ ಒಬ್ಬನೇ ಒಬ್ಬನಾದಲೀಲಾಸಕ್ತ ಕಾವ್ಯ ಸಾಮ್ರಾಟನಾಗಿ ಹೋದ. ಈ ನಾದಸಾಮ್ರಾಟನೆ ಜಯದೇವ. ಅವನ ನಾದಲೀಲೆಯೆ "ಗೀತಗೋವಿಂದ". ಸಂಸ್ಕೃತವು ತನ್ನ ದೀರ್ಘಕಾಲದಲ್ಲಿ ಜಯದೇವನಂತಹ ಕವಿಯನ್ನಾಗಲೀ 'ಗೀತಗೋವಿಂದ'ದಂತಹ ಲಹರಿಯನ್ನಾಗಲೀ, ಮೊದ ಲಾಗಲಿ ಮತ್ತೊಮ್ಮೆಯಾಗಲಿ ಪಡೆಯಲಿಲ್ಲ. ಕನ್ನಡದ ಎರಡು ಸಾವಿರ ವರುಷದ ಕಾವ್ಯ ಸೀಮೆಯಲ್ಲಿ ಒಬ್ಬ ನಾದಪುರುಷ ಉದಯನಾದ; ಅವನೆ ಲಕ್ಷ್ಮೀಶ. ಆದರೆ ಲಕ್ಷ್ಮೀಶನು ಜಯದೇವನಂತೆ ನಾದಲೀಲೆಯಲ್ಲಿ ನಿದ್ಧ ಕವಿಯಲ್ಲವೆಂದು ಹೇಳಬಹುದು. ಅವನು ನಾದ ನಿಷ್ಠನು, ನಾದೋಪಾಸ ಕನು. ಲಕ್ಷ್ಮೀಶನಿಂದೀಚೆಗೆ ಕನ್ನಡದ ಕವಿಗಳು ಕದುಬು ಕೊಂಡಿದ್ದವು. ನಾದಲೀಲೆಗೆ ನಾದಸಿದ್ಧಿಯೊಬ್ಬನ ಬರವು ಬೇಕಿತ್ತು. ಅದುವೇ ಶ್ರೀ ಅಂಬಿಕಾತನಯರ ಆಗಮನ.

ಬೇಂದ್ರೆಯವರು ಮಾತಿಗೊಮ್ಮೆ ಹೇಳುತ್ತಾರೆ "ನೋಡಿ ಅವರು ನಿಮ್ಮಹಾಗೆ ಕವನಗಳನ್ನು ಸರಾಗವಾಗಿ ಹೇಳುತ್ತಾರೆ'' ಎಂದರೆ "ಅವರು ಅವರ ಹಾಗೆ ಹೇಳಲಿ. ನನ್ನ ಹಾಗೆ ಮಾತ್ರ ಬೇಡಿ" ಎಂದು. ಬೇಂದ್ರೆಯವರೇ ತಮ್ಮ ತಮ್ಮ ಗೀತಗಳನ್ನು ಹೇಳುವಾಗ ಶ್ರುತಿ, ತಾಳ, ಲಯಗಳನ್ನು ಮೇಳವಿಸಿಕೊಂಡು ಹೋಗುವಂತೆ ಇನ್ನೊಬ್ಬರಿಗೆ ಅದು ಅಷ್ಟೊಂದು ಸಾಧಿಸದು. ಅವರ ಕವಿತೆಯ ಭಾವಾಭಿವ್ಯಂಜನಕ್ಕೆ ಅವರೇ

ನಿಜವಾದ ಗಮಕಿಗಳು. ಬೇಂದ್ರೆಯವರ ನಾದಲೋಕವು ಕಾಣಬೇಕಾದರೆ ಮೇಲೆ ತೋರಿಸಿದ ಸಾಧನ ಚತುಷ್ಟಯದ ಮೀಮಾಂಸೆಯಾಗಬೇಕು. ಅಂತೆಯೇ ಇಲ್ಲಿ ಅವನ್ನು ಜಿಜ್ಞಾಸಿಸಬೇಕಾಗಿದೆ. ಬೇಂದ್ರೆಯವರಿಗೆ ಸಂಗೀತದಲ್ಲಿಯೂ ಪರಿಶ್ರಮವಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಅವರ ಶಾರೀರವು ನಾದೋದ್ಧಾರ ಪ್ರವೀಣ ವೀಣೆಯಾಗಿದೆ. ಅವರ ತಿಲ್ಲಾಣವೆ ಆಗಲಿ ಶ್ರೋತೃ ಸಮುದಾಯಕ್ಕೆ ಅದೊಂದು ಸಂಮೋಹವೆ. ಕವಿ ಸ್ವತಃ ತಾನು ಅನುಭವಿಸಿ ತನ್ನಿಂದ ಹೊಮ್ಮಿದ ನಾದಾಭಿವ್ಯಕ್ತಿಗೆ ಇನ್ನೊಂದು ವ್ಯಕ್ತಿಯಂತೆ ತಿಣಕಬೇಕಿಲ್ಲ. ಇವನ ನಾದಾಭಿವ್ಯಂಜನವು ನಾದಸ್ಮೃತಿ ಗಮಕಿ ಇದನ್ನು ಅಭ್ಯಾಸದಿಂದ ಸಾಧಿಸಿದರೂ ಅದು ನಾದಶ್ರುತಿ. ಸ್ಮೃತಿ ಯಲ್ಲಿ ಸಹಜವಾದ ಶಕ್ತಿ ವಿಲಾಸವಿದ್ದರೆ,ಶ್ರುತಿಯಲ್ಲಿ ಸಾಧನಾ ಕೈವಾಡವಿದೆ. ಒಂದು ಮಳೆಗೆ ತೊಯ್ದ ನೆಲ, ಇನ್ನೊಂದು ಯಾತದಲ್ಲಿ ನೆನೆದ ಹೊಲ. ಸ್ಮೃತಿಯು ಶ್ರುತಿಯ ಯೋಗ್ಯತೆಯನ್ನು ಅನುಸರಿಸಬೇಕು.

ಇಲ್ಲಿ ಶ್ರುತಿ ಸ್ಮೃತಿಯ ಅರ್ಥವನ್ನು ಶ್ರುತಿ ಹೊಂದುಗೂಡಿಕೊಂಡು ಹೋಗಬೇಕು. ಬೇಂದ್ರೆಯವರು ಎಲ್ಲರ ಕಣ್ಮಣಿಯಾದದ್ದು ಮೊದಲವರು ಬಲ್ಲವರ ಕಿವಿ ಸೇರಿದರೆಂದೆ. ಸಾವಿರದೊಂಬತ್ತು ನೂರಾ ಇಪತ್ತುನಾಲ್ಕರಲ್ಲಿ ಬೆಳಗಾವಿಯ ಸಾಹಿತ್ಯ ಸಮ್ಮೇಲನದಲ್ಲಿ ಇವರ ನಾದಲೀಲೆಯು ತುಂಬಿದ ಸಭೆಯಲ್ಲಿ ಹಕ್ಕಿಯನ್ನು ಹಾರಿಸಿತು. ವೇದಿಕೆಯ ಮೇಲೆ ಬಂದು ನಿಂತು ಸಭಾಗೃಹದ ಚಪ್ಪರದ ಕಡೆಗೆ ಕೈಮಾಡಿ ಆಕಸ್ಮಿಕವಾಗಿಯೇ "ಹಕ್ಕಿಹಾರು ತಿದೆ ನೋಡಿದಿರಾ?" ಎಂದರು, ಸಭಿಕರಿಗೆ "ಎದ್ದ ಹಕ್ಕಿ ನೋಡಲು ಈ ಮಹಾಶಯರು ಹೇಳುತ್ತಿರಬೇಕೆನಿಸಿತು. ಕ್ಷಣಕಾಲ, ಕಾವ್ಯವಾಚನವಿದು. ಎನ್ನುವ ಕಲ್ಪನೆ ಬರಲೇ ಇಲ್ಲ. ಸಕೃದುಚ್ಚರಣೆಯಲ್ಲಿಯೆ ನಾದವಾಯೆ ಯಿಂದ ಎಲ್ಲ ಹೃದಯಗಳನ್ನು ತನ್ನ ಲೀಲೆಗ ಅಭಿಮುಖಮಾಡಿಕೊಳ್ಳುವ ಶಕ್ತಿ ಸಾಮಾನ್ಯರಿಗೆ ಇರಲಿಕ್ಕಿಲ್ಲ! "ಹಕ್ಕಿ ಹಾರುತಿದೆ" ಎಂಬ ಪದ್ಯವನ್ನು ಅದು ಹಾರಿದಂತೆಯೇ ಹೇಳಬೇಕು ಎನ್ನುವದು ಬೇಂದ್ರೆಯವರ ಗೀತ ವಾಚನದ ಗುರಿ. ಅಲ್ಲಿಯ ಹಕ್ಕಿ ಗುಬ್ಬಿಯಲ್ಲ. ರೆಕ್ಕೆಯ ಬೀಸಿ ದಿಙ್ಮಂಡಲ ಗಳ ಆಚೆಗೆ ಚಾಚಿದೆ ಚುಂಚು. ಇಂತಹ ಹಕ್ಕಿ ಹಾರಬೇಕಾದರೆ ಗುಬ್ಬಿ ಹಾರಿಕೆಯು ಭುರ್ರೆನ್ನುವದಲ್ಲ. ಎರಡೂ ರೆಕ್ಕೆಗಳನ್ನು ಬೀಸಿದರೆ ವಾತಾ ವರಣದಲ್ಲಿ ಒಂದು ಬಗೆಯ ಕೋಲಾಹಲವೇಳುವಂತೆ ಸಭ್ಯರಲ್ಲಿ ಅದೇ

ಬಗೆಯ ಕಲ್ಪನೆ ಬಂದು ಹಾರುವ ಮಹಾಪಕ್ಷಿಯ ನೆನಪು ಕಲ್ಪನೆ ಆಕೃತಿಗಳು ಬರಬೇಕು. ಹಾಗೆಯೇ ಬೇಂದ್ರೆಯವರು ಹಾಡುವರು. ಆದರೆ ಅದನ್ನೇ ಸಂಗೀತಕ್ಕೆ (ಅಲಾಪನೆಗೆ) ಜೋಡುಮಾಡಿದರೆ ನಾದವನ್ನು ಕೊಲೆಗೀಡುಮಾಡಿದಂತೆಯೇ. ಅದನ್ನೆ ಎಳೆದೆಳೆದು ಹೇಳಿಕೊಂಡರೆ ವ್ಯರ್ಥಾಲಾಪವಾಗುವದಲ್ಲದೆ ಸತ್ವಶಾಲಿಯಾದ ಕಾವ್ಯವು ಕೂಡ ನಿಃಸತ್ವವೆನಿಸಿಕೇಳುವಾಗ ಮೂಗು ಮುರಿಯುಬಹುದು. ಒಮ್ಮೆ ನಮ್ಮೂರಿನ ಕಿನ್ನರಿಯೊಬ್ಬರು ಬೇಂದ್ರೆಯುವರ 'ಭೃಂಗದ ಬೆನ್ನೇರಿ ಬಂತು ಕಲ್ಪನಾವಿಲಾಸ' ಎಂಬ ಗೀತೆ ಹೇಳಿದರು ಬೇಂದ್ರೆಯವರು ಅವರ ಶಾರೀರವನ್ನು ಹೊಗಳಿದರೂ, ಅವರ ಹೇಳ್ವ ರೀತಿಯನ್ನು ತಿದ್ದಬೇಕಾಯಿತು. ನಮ್ಮ ಕಿನ್ನರಿ ಎಷ್ಟೋ ದಿನದಿಂದ ಆ ಪದ್ಯ ಹೇಳುತ್ತಿದ್ದ. ಆದರೆ ಅದನ್ನು ಓದಿಸಿದಾಗ್ಗೆ "ಎಷ್ಟು ಚನ್ನಾಗಿ ಹೇಳುತ್ತಾನೆ. ಅದರ ಭಾವಾನುಭವವಾಗುವಂತ ಸ್ವಾರಸ್ಯವಾಗಿ ಹೇಳುತ್ತಾನೆ." ಎಂದು ನಮ್ಮೆಲ್ಲರಿಗೂ ಹಿಗ್ಗು. ಬೇಂದ್ರೆಯವ ಸಮ್ಮುಖದಲ್ಲಿಯೆ ಗೀತವಾಚನವಾದಾಗ್ಗೆ ಅವರು ತಿದ್ದಿದರು. 'ನೋಡಿ ಎಲ್ಲ ಸರಿಯಾಗಿ ಹೇಳುತ್ತೀರಿ. ಆದರೆ ಭೃಂಗವೆ ಬರುವದಿಲ್ಲ. ಅದನ್ನೇರಿ ಕಲ್ಪನಾವಿಲಾಸ ಬರುವದೆಂತು?" ಮಾತು ಕೆಲವರಿಗೆ ಅರ್ಥವಾಯಿತು. ನೀವು ಹೇಳಿ ಎಂದ ಕಿನ್ನರಿ. ಅದಕ್ಕವರು ಪ್ರಸ್ತಾವನೆಯನ್ನು ಹೇಳಬೇಕಾಯಿತು. ಕಲ್ಪನಾ ವಿಲಾಸವು ಭೃಂಗದ ಬೆನ್ನೇರಿ ಬರುವದಲ್ಲವೆ? ಕೇಳುವವರಿಗೆ ಮೊದಲು ಭೃಂಗ ಬಂದ ಹಾಗೆ ನಾದ ಮಿಡಿಸಿ ಹೇಳಬೇಕು. 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸಾ' ನೀವು ಹೇಳುತ್ತಿರುವಾಗ 'ಭೃಂಗದ ಬೆನ್ನೇರಿ' ಎಂದು ಹೇಳುವಾಗ ಭೃಂಗದ ನಾದವನ್ನು ಶಿಥಿಲವಾಗಿಸದೆ ಜೋರಿನಿಂದ ಹೇಳಬೇಕು. 'ಭೃಂ....' ಎಂದು ಸಪ್ಪಳಮಾಡುತ್ತ ಹಾಡು ಆರಂಭವಾಗಬೇಕು. ಹಾಗೆ ನಾದ ಕುಣಿದು ಒರಬೇಕು. ಅಂದರೆ ಮುಂದಿನ ಕೆಲ ಸಾಲುಗಳಲ್ಲಿ ಬರುವ 'ಓಂಕಾರದ ಶಂಖನಾದಕಿಂತ ಕಿಂಚಿದೂನಾ' ಎಂಬ ಮಾತನ್ನು ಶಂಖಧ್ವನಿಯ ಹಾಗೆ ಏರಿ ಹೇಳಬೇಕು ಓಂಕಾರ ಪ್ರಣವೋಚ್ಚಾರಣೆಯಲ್ಲಿಯ ಗಾಂಭೀರ್ಯ, ಶಂಖನಾದದಲ್ಲಿಯ ವೀರ ಮಾಧುರ್ಯ ಬರಬೇಕು. 'ಏನು ಏನು, ಜೇನು ಜೇನು' ಎನ್ನುವದನ್ನು ಕುತೂಹಲ ಕೆರಳುವಂತೆ ಹೇಳಬೇಕು. "ಎನೆ ಗುಂ ಗುಂ ಗಾನಾ" ಎಂಬುದನ್ನು ಗುಂಜಾರವದಂತೆಯೆ ಹೇಳಬೇಕು. ಇದೇ ಅಂಬಿಕಾತನಯರ ನಾದ

ಪ್ರಕಾಶನದ ಜೀವಿತವು. ಅವರು 'ಭೃಂಗ' ಎನ್ನುವಾಗ ನಿಜವಾಗಿಯೂ ಭ್ರಮರ ಹಾರುವ ಕಲ್ಪನೆ ಬರುತ್ತದೆ. ಅಂದೆ ಆ ಗೀತದ ನಾದ ಸಾಕ್ಷಾತ್ಕಾರ ವಾಯಿತು. ಮೊದಲಿನ ಹಿಗ್ಗು ಇಮ್ಮಡಿಯಾಯಿತು. ನಮ್ಮ ಕಿನ್ನರಿ ಅಂದು ತಾನು ಕಂಡ ಹಿಗ್ಗಿಗೆ ಪಾರವೆ ಇಲ್ಲ. ತಾನು ನಂದನಕ್ಕೆ ಹೋಗುವ ವರೆಗೂ ಅದೇ ತೆರೆಯಳತೆಯಲ್ಲಿ ಆ ಗೀತ ಹೇಳುತ್ತಿದ್ದ. ಈ ಮೇರೆಗೆ 'ರಾಗರತಿ' ಎನ್ನುವದೊಂದು ಸಂಜೆಯನ್ನು ಬಣ್ಣಿಸುವ ಕವನವಾಗಿರಬೇಕು. ಸಂಧ್ಯಾರಾಗದ ಮಾಧುರ್ಯ ಹೃದಯ ಉಣ್ಣಬೇಕು. 'ಇರುಳು ಹೆರಣೆನಾ ಅರಳ ಮಲ್ಲಿಗಿ ಜಾಳಿಡಿ ಹಂಗಿತ್ತ। ಸೂಸ್ಯವ ಚಿಕ್ಕ್ಯತ್ತಿತ್ತ' ಎನ್ನುವ ಭಾಗವನ್ನು ಚಲ್ಲಿದ ಸೇನೆಗಳಂತೆ ಬಿದ್ದಿರುವ ಚಿಕ್ಕೆಗಳ ಕಲ್ಪನೆ ಬರಲು "ಚಿಕ್ಕ್ಯತ್ತಿತ್ತ" ಇಲ್ಲಿ ಎರಡನೆಯ ಅಕ್ಷರವನ್ನು ಒತ್ತಿ ಮುಂದಿನದನ್ನು ಬೀಸಿ ಹಾರಿಸಿದಂತೆ ಮಾಡಬೇಕು. ಇದು ಬೇಂದ್ರೆಯವರ ನಾದ ನುಡಿಗಳ ಆರೋಹಣ, ಅವರೋಹಣ, ಉದಾತ್ತ ಅನುದಾತ್ತ ಉಚ್ಚಾರಣೆಯನ್ನು ಕಾವ್ಯದಲ್ಲಿ ಬಳಿಯಿಸಿ ಜನದ ಹೃದಯವನ್ನು ಬೇಗನೆ ನಾದಜಾಲದಲ್ಲಿ ಹಿಡಿಯುವ ಮಾಟಗಾರರು ಬೇಂದ್ರೆಯವರು. ಈ ರೀತಿಯಾಗಿಯೆ ಅವರ 'ನೀಹೀಂಗ ನೋಡಬ್ಯಾಡ ನನ್ನ', "ಹೃದಯ ಸಮುದ್ರ". "ಕೊಳಲನೂದೀದ", "ಕುಣಿಯೋಣು ಬಾ" ಎನ್ನುವಲ್ಲಿ ನಾದವು ತೇಲಿ ಬರುತ್ತಿದೆ. ನಾದಶಕ್ತಿಯಲ್ಲಿ ಅಡಗಿದ ಭಾವ ದರ್ಶನಕ್ಕೆ ಆಕಾರವರಿತ ಚೈತನ್ಯ ಪ್ರವಹಣೆಯು ಶಕ್ಯವಾದ ಮಾರ್ಗ. 'ಮಾತ್ರಾಬಲಂ' ಎನ್ನುವ ಶ್ರುತಿಯು ಗಮಕದಲ್ಲಿ ಕೃತಾರ್ಥತೆಯನ್ನು ಪಡೆದಿದೆ. ಛಂದೋಬಂಧವಾಕ್ಯ ದೇಹಯಷ್ಟಿ ಎನಿಸಿದರೂ ಅದರಿಂದಲೇ ರಸಪುಷ್ಟಿ ಎನ್ನುವ ಮಾತು ಎಲ್ಲರೂ ಒಪ್ಪುವ ವಿಷಯ. ಕವಿ ತನ್ನ ರಸಾನುಗುಣವಾದ ಛಂದಸ್ಸನ್ನೇ ಆರಿಸುತ್ತಿರುತ್ತಾನೆ. ಎಂದರೆ ಕಾವ್ಯವು ತನಗೆ ಅನುರೂಪವಾದ ಮೈಯನ್ನೇಧರಿಸುತ್ತದೆ. ಆದರೆ ಕೆಲವೆಡೆಯಲ್ಲಿ ಕವಿ ಒತ್ತಾಯವಾಗಿ ಇಂಥ ವೃತ್ತದಲ್ಲಿಯೆ ಬರೆಯಬೇಕೆಂದು ಹಟ ತೊಟ್ಟರೆ ನಾದಕ್ಕೆ ಕಸವಿಸಿಯಾಗಿ ಉಸಿರುಗಟ್ಟಿದಂತಾಗಬಹುದು. ಕವಿಗೆ ಬಂದ ಸ್ಫೂರ್ತಿಯೊಡನೆ ಕಾವ್ಯದ ಯಾವುದೇ ಚರಣಗಳು ಹುಟ್ಟಿಕೊಳ್ಳುತ್ತವೆ. ಅದುವೆ ಮಾರ್ಗದರ್ಶಕವಾಗಿ ಉಳಿದ ಕಲ್ಪನಾಪ್ರವಾಹಕ್ಕೆ ದಾರಿ ತೋರುತ್ತದೆ. ಹಿಂದಿನಿಂದ ಬಂದುದೆಲ್ಲವೂ ಇದರ ಅನುವರ್ತನೆ. ಮೊದಲು ಹೊರಟನಾದ, ಆರೀತಿ ಹಿಂದಿನದನ್ನು ಎಳೆದುಕೊಂಡು ಹೋಗುತ್ತಿದೆ. ಈ

ಛಂದೋ ವೈವಿಧ್ಯವು ಕವಿಯ ಕೃತಿಯಲ್ಲಿ ಅಗತ್ಯವಾಗಿಬೇಕು. ಅಂತೆಯೆ ಮಹಾಕಾವ್ಯಗಳಲ್ಲಿ ಈ ನಿಯಮವನ್ನು 'ಶಾಸ್ತ್ರಪೂರ್ತಿ' ಉಪಯೋಗಿಸಿದ್ದಾರೆ. ಈಗಿನ ಕವಿಗಳಲ್ಲಿ ಇದಕ್ಕೆ ತುಂಬ ಅವಕಾಶವಿದೆ. ವಿಧ ವಿಧ ಛಂದಸ್ಸಿನಲ್ಲಿ ತಮ್ಮ ಭಾವ ಪ್ರಣಾಲಿಯನ್ನು ಹರಿಸಿ ರಸ ನೌಕೆ ಬಿಡಲು ಕವಿಗಳಿಗಿಗೊಂದು ಪರ್ವಕಾಲ. ಅದೇ, ಮೊದಲನೆಯದಾಗಿ ಗೀತಗಳ ಆಕಾರ ಚಿಕ್ಕದಾಗಿರುವುದು. ಒಂದು ಭಾವದ ಹೊಳಹು ಕಲ್ಪನೆಯ ಸುಳುವುಗಳನ್ನಷ್ಟೇ ಚಿತ್ರಿಸುವದು, ಕಾವ್ಯದ ಕೆಲಸವಾಗಿರುವರಿಂದ ಅಲ್ಲಿ ವೈವಿಧ್ಯಕ್ಕೆ ತುಂಬಾ ಅವಕಾಶವಿದೆ. ರೊಕ್ಕ ಕೈತುಂಬ ಸಿಕ್ಕಿದೆಯೆಂದು ಕೈಗೆ ಬಂದಹಾಗೆ ವೆಚ್ಚಮಾಡಿದರೆ ಅಪವ್ಯಯದ ಅಪವಾದ ಬರುತ್ತಿದೆ. ಅದಕ್ಕೆ ಕವಿಯು ಆಲೋಚಿಸಿ ಯಾವುದಕ್ಕೆ ಏನು ಯೋಗ್ಯವೋ ಅದನ್ನೇ ಕೊಡುತ್ತ ಹೋಗುತ್ತಿರಬೇಕು. ಹೀಗೆ ಛಂದೋ ವೈವಿಧ್ಯ ಕೃತಿಯಲ್ಲಿ ಬಳಸಿಕೊಂಡವರಲ್ಲಿ ಶ್ರೀ ರವೀಂದ್ರನಾಥರೇ ಮೊದಲಿನ ಭಾರತೀಯರೆಂದು ಹೇಳಬಹುದು. ಕನ್ನಡದಲ್ಲಿ ಈ ಬೆಳವಣಿಗೆ ಇತ್ತೀಚಿನಿಂದ ಆರಂಭವಾಗಿದೆಯಷ್ಟೆ. ಅದರ ಪ್ರವರ್ತಕರು ಯಾರೇ ಆಗಿದ್ದರೂ ಅದನ್ನು ವಿಶೇಷವಾಗಿ, ಅದರ ಹೊಸ ರೂಪುಗಳನ್ನು ಬಳಸಿ ಪ್ರಯೋಗದಲ್ಲಿ ಯಶಸ್ಸು ಪಡೆದವರು ಶ್ರೀಮಾನ್ ಬೇಂದ್ರೆಯವರೊಬ್ಬರು. ಅನೇಕ ಹೊಸಗನ್ನಡ ಕವಿಗಳು ಬಹುವಿಧದ ಪ್ರಯೋಗ ಮಾಡಿದ್ದುಂಟು. ಶ್ರೀ ಬೇಂದ್ರೆಯವರು ತಮ್ಮ ನಾದಕ್ಕೆ, ಭಾವಕ್ಕೆ ಅನುಕೂಲವಾಗುವಂತೆ ಗಣಗಳನ್ನು ಕಟ್ಟಿಕೊಂಡು ಹೊರಟವರು. ಜಾನಪದೀಯ ತ್ರಿಪದಿಯನ್ನೇ ಶ್ರಾವ್ಯವಾಗುವಂತೆ ಹಿಗ್ಗಿಸಿಕೊಂಡು ಬರೆದ ಕವಿತೆಗಳು; ಅಲ್ಲಿಬರುವ ಅನಿಯತವಾದರೂ ಅನುಕೂಲವಾದ ಉಸಿರ್ದಾಣಗಳು, 'ಉಯ್ಯಾಲೆ'ಯಲ್ಲಿಯ ಸೀಸ ಪದ್ಯಗಳು ಹಳೆಯವಾಗಿದ್ದರೂ ಆಕೃತಿಯಲ್ಲಿ ಮತ್ತೆ ಮಾರ್ಪಾಟಾಗಿವೆ. ತೀ. ನಂ. ಶ್ರೀ. ಯವರು ಹೇಳುವಂತೆ 'ಕನ್ನಡ ಹೊಸ ಕವಿಗಳ ಯಾವ ಛಂದಸ್ಸೂ ಪೂರ್ಣ ಹೊಸತೆ ಆಗಿಲ್ಲ ಎಂದು ಗಣಗಳನ್ನೆ ಬದಲಿಸಿ ಇಟ್ಟುಕೂಳ್ಳುವದು, ಎಲ್ಲಕ್ಕೂ ಮೇಲಾಗಿ ಗಣಬದ್ಧವಾದ ಹಾಡಿನಲ್ಲಿ ಶ್ರುತಿ ಸಮಾಧಾನಕ್ಕೆ ವಿಶೇಷ ಯತಿ ಪಾಲನೆ. ಇದನ್ನು 'ನಾದಲೀಲೆ'ಯಲ್ಲಿ ಕಾಣಬಹುದು. ಕನ್ನಡ ಸಾಹಿತಿಗಳೆಲ್ಲ (ಲಾಕ್ಷಣಿಕರೆಲ್ಲ) ಪ್ರಾಸವನ್ನು ಛಂದಸ್ಸಿನ ಭಾಗವೆಂದೇ ಕರೆದುಕೊಂಡು ಬಂದಿರುವರು. ಆದರೆ ಪ್ರಾಸಕ್ಕೊಂದು ಸ್ವತಂತ್ರ ಶಕ್ತಿಯಿದೆ.

ಅದು ಅಲಂಕಾರ ವಿಭಾಗಕ್ಕೆ ಸೇರಲು ಯೋಗ್ಯವಾದುದೆಂಬುದೇ ಸತ್ಯ. ಪ್ರಾಸವಿಚಾರವನ್ನು ಶಬ್ದಾಲಂಕಾರದೊಡನೆ ಮಾಡಿದರೆ ಇಷ್ಟವಲ್ಲವೆ? ಬೇಂದ್ರೆಯವರದೇ ಮಾತು— "ಪಾದ ಪದ್ಧತಿಯಲ್ಲಿ ಪದ ಕೂಡಿಬರುವಾಗ

ಯಾರಾರೆ ಗುರುಲಘು ಎಣಿಸುವರೆ?"

ಕವಿಗೆ ಹುರುಳಿನೊಡನೆಯೆ ಹೊರಮೈ ಅನಾಯಾಸವಾಗಿ ರೂಪುಗೊಂಡು ಬಂದಿರಬೇಕು 'ನಿಗಿನಿಗಿ ಮುಗಿಲು'ದಲ್ಲಿಯ ಚಿಕ್ಕ ಗಣದ ಪದದಲ್ಲಿಯು ನಾದವೃತ್ತಿ ವಿಲಾಸವಿದೆ. ಅಲ್ಲಿ ನಿಯತವಾಗಿ ಬರುವ ಚರಣಾಂತ ಯತಿಯು ಶ್ರುತಿ ಮನೋಹರವಾಗಿದೆ. ಮುಗಿತಾಯದಲ್ಲಿ, ಗಣವಿಭಜನೆಯಲ್ಲಿ ಮಾರ್ಪಾಟಾಗಿ ಉಸಿರ್ದಾಣಕ್ಕೆ ಮುಂದಿನ ಲಘು ವಿಶ್ರಾಂತಿಯು ಗೀತದ ಸೊಬಗನ್ನು ಹೆಚ್ಚಿಸಿದೆ.

" ಕಾಲೂರಿತು | ಮಳೆ
ಕತ್ತೆತ್ತಿತು | ಬೆಳೆ
ಹನಿಯೊಡೆಯಿತು ನೋಡ;
ಕಿಲಿ ಕಿಲಿ | ಹಕ್ಕಿ
ಕುಲು ಕುಲು | ನಕ್ಕು
ದಯೆಗರೆಯಿತು ನೋಡಾ "

ಮೇಲಿನ ಸಾಲಿನ ಗಣರೀತಿಯಿಂದ ಕೆಳಗಿನ ಗಣವಿಭಜನಯು ಕ್ರಮ ಭಿನ್ನವಾದರೂ ಶ್ರುತಿ ಸಂಗಮದಿಂದ ಕೇಳುವವನಿಗೆ ಹಿತವಾಗಿದೆ. ಅಂತೆಯೆ ರಚನೆ ಸಹೃದಯನಿಗೆ ಪ್ರೀತವಾಗಿದೆ. ಬೇಂದ್ರೆಯವರ ಈ ಅನುಕ್ರಮ ಗಣಯೋಜನೆಯು ನಾದಾನುನಯುಕ್ತ್ವಾಗಿಯೇ ರೂಪುಗೊಂಡಿದೆಯೆ ಹೊರತು ಕವಿಯ ಛಂದೋದೌರ್ಬಲ್ಯವೆಂದಲ್ಲ. ಬಹುಗಣದ ಛಂದಸ್ಸಿನ ರೀತಿ ಯನ್ನೂ ನೋಡಬಹುದು: -

"ಇಬ್ಬನಿತೊಳೆದರು ಹಾಲು ಮೆತ್ತಿದಾ ಕವಳಿ
ಕಂಟಿಯಾ ಹಣ್ಣು
ಹೊಳೆ ಹೊಳೆವಹಾಂಗ ಕಣ್ಣಿರುವ ಹೆಣ್ಣ ಹೇಳ
ನಿನ್ನವೇನ ಈ ಕಣ್ಣು
ದಿಗಿಲಾಗಿ ಅನ್ನತದ ಜೀವ ನಿನ್ನ ಕಣ್ಣಾರೆ ಕಂಡು
ಒಮ್ಮೆಗಿಲs

ಹುಣ್ಣಿವೀ ಚಂದಿರನ ಹೆಣಾ ಬಂತೊ ಮುಗಿಲಾಗ ತೇಲತ ಹಗಲ" ಎಂಬಲ್ಲಿ ದೀರ್ಘ ಚರಣದಲ್ಲೂ ಶೋಕವೇಗದಿಂದ ಚರಣವಿಶ್ರಾಂತಿಯಲ್ಲಿಯೆ ಯತಿ. ಈರೀತಿ ದೀರ್ಘ ಪಾದವನ್ನು ಎಳೆದು ನಿಲ್ಲದೆ, ಹೇಳುವಾಗ ಶೋಕ ಸ್ವರದ ಒಂದು ಧ್ವನಿ ನುಡಿದು ಬರುತ್ತದೆ. ಯತಿಯನ್ನು ವಿಲಂಬಿಸಿ ನುಡಿಯು ಶೋಕಸಾಹಿತ್ಯಕ್ಕೆ ಉಚಿತವಾದುದೆ. ಮಾತಿನ ಓಟದಲ್ಲಿ ಸಾಗಿಬರುವ 'ಮನದನ್ನೆ' ಯಂತಹ 'ಕವನ. ಮಧ್ಯದಲ್ಲಿ ಯತಿ ಪಾಲಿತವಾದರೂ ಒಮ್ಮೊಮ್ಮೆ ಶೋಕ ಸ್ವರಕ್ಕೆ ಬಾಧೆಯಿಲ್ಲ. ಐದು ಮಾತ್ರೆಯ ಗಣವು ಸ್ಥಳ ಸ್ಥಳದಲ್ಲಿ ಯತಿ ನಿಯಮಿತವಾಗಿದ್ದರೆ ಅಭಿಪ್ರಾಯ ಕಥನವು ಅನುಕೂಲ ವಾಗಿ ಸಾಗುವದು. ಹೇಳುವ ಮಾತಿನ ಪರಿಣಾಮವಾಗಲೇಬೇಕಿದ್ದರೆ ಮಾತಿನಲ್ಲಿ ನೆಲೆನೆಲೆಗೆ ಉಸಿರ್ದಾಣವು ಬೇಕು. ನಿಲ್ಲುವಿಕೆಯಿಂದ ಮಾತು ಹೃದಯಕ್ಕೆ ಮುಟ್ಟುವದೆಂದೆನಿಸುವದು.

" ಗಂಡು ದರ್ಪವ | ಹರಿದು
ಬಿರುಸು ಬಿಂಕವ | ತೊರೆದು
ತೋಳ ತೊಟ್ಟಿಲ । ಮಗುವು | ಆಗಿ ಬಂದೆ.
ಗೊಂಬೆ ಆಡಿಸಿದಂತೆ | ಆಡಿಸೆಂದೆ.
ನಿನ್ನ ತಾಯ್ತನದ ಸೈರಣೆಯ ವಿತರಣೆಬೇಕು
ನಿನ್ನ ತಾಳ್ಮೆಯ ಸೈಪಿನೊಂದು ಕರುಣೆಯು ಸಾಕು
ಮಲಗಿರುವ ಹಾವನ್ನು ಕೆಣಕಬೇಡ
ಕಚ್ಚಿ ವಿಷಕಾರಿದರೆ ತಿಣಕಬೇಡ"

ಐದು ಮಾತ್ರೆಯ ಗಣಗಳನ್ನು ಅರ್ಥವ್ಯಕ್ತಿಗಾಗಿ ೩| ೪| ೩ ಹೀಗೂ ಹೇಳುವದುಂಟು. ಹಾಗೆ ಹೇಳುವಾಗ ಶಾಬ್ದಿಕ ಒತ್ತಡ ಹೆಚ್ಚಿರುವದು. ಅಲ್ಲಿಯ ಯತಿ, ಸಾಧನೆಯ ಮೇಲೆ ಅವಲಂಭಿಸಿರುತ್ತದೆ. ಯತಿಯು ಅಭಿಪ್ರಾಯ ವ್ಯಂಜನಾನುಕೂಲವಾಗಿರುತ್ತದೆ. ಆದರೂ ಅದು ಕವಿಯ ಇಷ್ಟ. ನಿರ್ದಿಷ್ಟವಾದರೆ ಒಂದು ದೃಷ್ಟಿಯಿಂದ ನೈಜವಾದ ಶಕ್ತಿಗೆ ಅನಿಷ್ಟವೆಂದೇ ಹೇಳಬಹುದು. ಇದೇ ಮೇರೆಗೆ 'ಪುಟ್ಟವಿಧವೆ' 'ನರಬಲಿಯ' ರೀತಿಗಳಾಗಿರಬೇಕು. 'ಚಿಗರಿಗಂಗಳ ಚಲುವೆ'ಯ ರೀತಿ ಹೊಸತಾಗಿ ತೋರುತ್ತದೆ. ಸಖೀ ಗೀತದ ಪರಿಯಂತಲೂ

“ ಅಕ್ಕರ ಛಂದವು ಸಾಂಗತ್ಯ ಸಂಸ್ಕಾರ
ಹೊಂದಿಲ್ಲ ಬಂದಿದೆ ಹೊಸ ಹೊಸದು ”

ಎಂದು ಬೇಂದ್ರೆಯವರೇ ಹೇಳಿದ್ದಾರೆ. ನಮ್ಮ ಮಾತೇಕೆ? “ಬಂತು ಶ್ರಾವಣಾ” “ಗಂಗಾವತರಣ”ಗಳ ಸೊಗಸೊಂದು ವಿಧವಾದುದು. ‘ಹೃದಯ ಸಮುದ್ರ’ ‘ಗಾಯತ್ರಿ ಸೂಕ್ತ’ ದಲ್ಲಿಯ ರಚನೆ ಕಿವಿಗೆ ಹಿತವಾಗಿ ನಾದದಿಂದ ರಸಾನುಭವಕ್ಕೆ ಅನುವುಗೊಡುತ್ತಿವೆ. ಹಾಗೆಯೇ ಅವರು ‘ಮೇಘದೂತ’ ಬಂಧ, ಇಲ್ಲವೆ ‘ಗಂಗಾಲಹರಿ’ಯನ್ನು ಕನ್ನಡಿಸುವಾಗ ಅಂಗೀಕರಿಸಿದ ಛಂದಸ್ಸು ನವೀನವೇ ಸರಿ. ಛಂದಸ್ಸು ನಾದ ರಕ್ಷಕವಾಗಿಯೂ, ನಾದಾಸುವಾದನದಲ್ಲಿ ಸಹಾಯಕವಾಗಿಯೂ ಬರುವ ಕಾವ್ಯ ರೀತಿಯನ್ನು ಬೇಂದ್ರೆಯವರಲ್ಲಿಯೇ ಕಾಣಬೇಕು.

ಬೇಂದ್ರೆಯವರ ಗದ್ಯ ಬಂಧವು ಕೂಡ ಒಂದು ನವೀನ ವೃತ್ತಗಂಧಿಯ ಅಂದದಲ್ಲಿ ಸಾಗುತ್ತಿದೆ. ‘ಕರುಳಿನ ವಚನಗಳು’ ‘ಹಿಗ್ಗಿನ ಬೆಲೆ ನೋವಿನ ಬೆಲೆ’ಗಳು ಮಾತನ್ನು ತೂಗಿ ತೂಗಿ ಕಟ್ಟಿದವು. ಅದೂ ಒಂದು ಸೊಗಸೇ.

ಸಹೃದಯನು ತನ್ನ ಕರಣ ಹರಣಗಳನ್ನೆಲ್ಲ ಗೀತಗಳಿಗೆ ಒಪ್ಪಿಸಬೇಕಾದರೆ ಗೀತದಲ್ಲಿ ಇನ್ನೊಂದು ದೊಡ್ಡ ಗುಣವಿರಬೇಕು. ಸುಸಂಬದ್ಧವಾದ.... ಲಯ ವಿನ್ಯಾಸ. ಭಾವಗೀತೆಗಳು ಎಷ್ಟು ಧ್ವನಿ ಪ್ರಧಾನವಾಗಿವೆಯೋ ಎಷ್ಟು ‘ಲಯ’ ಬದ್ಧವಾಗಿದ್ದರೆ ಸಹೃದಯನಿಗೆ ಆ ಪ್ಯಾಯನವಾಗುವದು. ಕಾವ್ಯದಲ್ಲಿಯ ಸುಕ್ರಮ ‘ಲಯವೇ’ ರಸಪುಷ್ಟಿಗೆ ಆನಂದ ಸೃಷ್ಟಿಗೆ ಕಾರಣ. ಯಾವ ಕವಿ ತನ್ನ ಕವನವನ್ನು ಹಾಡಾಗಿಸುತ್ತಾನೋ, ಸಂಗೀತದ ಮುಂಜೆರಗಿನಲ್ಲಿ ಭಾವುಕರನ್ನು ಆನಂದಲೋಕಕ್ಕೆಳೆಯುತ್ತಾನೋ ಅವನು ‘ಲಯ’ ಸೃಷ್ಟಿಕರ್ತನಾಗಬೇಕು. ಲಯವು ತಾಲ ಪರಂಪರೆ. ನಿಯಮಿತ ತಾಲ ಸಂಯೋಜನೆಯನ್ನು ಲಯವೆಂದು ಕರೆಯಲು ಬಹುದು. ಗೀತಗೋವಿಂದವು ನಾದ ಮಾಧುರ್ಯದ ಮಧುವನವಾದುದು ಕೇವಲ ಲಯದ ಯೋಜನೆಯಿಂದ. ಶ್ರುತಿಗೆ ‘ಮಾತ್ರಾಬಲಂ’ ಎಂದು ಕಂಡಿದರೆ ಲಯದ ಶಕ್ತಿ ಮಾತ್ರೆ ಮಾತ್ರದಲ್ಲಿಲ್ಲ. ಮಾತ್ರಾನಿಯೋಜಿತ ಗಣದಲ್ಲಿದೆ. ಗಣವೇ ಲಯದ ಹಾದಿಗೆ ಆದಿ.

'ವಜ್ರಮುಖವ ಚಾಚಿ ಮುತ್ತುತಿತ್ತು ಹೂವ ಹೂವಾ
ನೀರ ಹೀರಿ ಹಾರುತಿತ್ತು ನೀರಸವಾ ಜಾವಾ
ಅಯ್ಯೊ ನೋವೆ, ಅಹಹ ಸಾವೆ, ವಿಫಲ ಸಫಲ ಜೀವಾ.

ಇಲ್ಲಿ ಮೂರು ಮಾತ್ರೆಯ ಗಣ ತಾಳಕಟ್ಟಿಕೊಂಡು ನಿಯತವಾಗಿ ಬಂದಿದೆ. ಚರಣಾಂತದ ಯತಿಗೆ ಪ್ರಾಶಸ್ತ್ಯವಿದ್ದುದರಿಂದ ಅದರ ಕೊನೆಯ ಗುರುವಿಗೆ ಒಂದು ಗಣಿದ ಬೆಲೆಯಿದೆ. ಒಂದು ಗುರುವಿನ ಮುಂದಿನ ಭಾಗ ವೆಲ್ಲ ಮೌನದಲ್ಲಿ ಮರೆಯಾಗುತ್ತಿದೆ. ಮೂರು ಮಾತ್ರೆಯ ಗಣದಲ್ಲಿ ವಿವಿಧತೆಗೆ ಅವಕಾಶವಿದ್ದರೂ ಬೇಂದ್ರೆಯವರು ಆ ಗಣಗಳನ್ನು ಬೇರೆ ರೀತಿಯಿಂದ ಉಪಯೋಗಿಸಿ 'ಲಯ'ವನ್ನು ರಕ್ಷಿಸಿದ್ದಾರೆ.—

" ಬೇಟೆಯಲ್ಲ ಆಟವೆಲ್ಲ ಬೇಟದ ಬಗೆ ನಾರೀ
ಕಾದಲನೆಡೆ ಬೇಡಬಹುಳು ಕಾದಲೆ। ಹೂಮಾಲೆ"
" ನಲ್ಲ ತೋರಿಸಿಕೊಡು ಬೇಕಾದ ವರ ಬೇಡು"
"ಒರನು ಕೂತಿತು। ಧನಿ। ಕಣ್ಣೆಲ್ಲ ಕಂಬನಿ"

ಇಲ್ಲಿ ಮೂರು ಮೂರು ಮಾತ್ರೆಯ ಗಣಗಳನ್ನು ೪।೨ ರಂತೆ ಬಳಸಿಕೊಂಡು 'ಲಯ'ಕ್ಕೆ ಭಂಗ ಬರದಂತೆ ಕವಿ ನಾವೀನ್ಯ ತೋರಿದ್ದಾರೆ. ಮೂರು ಮೂರು ಮಾತ್ರೆಯ ಗಣಯುದ್ವವನ್ನು ೪।೨ ಇಲ್ಲವೆ ೨।೪ ಹೇಳುವದೂ ಯುಕ್ತ. ಕೊನೆಯ ಗಣದಲ್ಲಿ ಯತಿನಿಬಂಧನೆಯ ಸಂಭವವಿರುವದದಿಂದ ಹೆಚ್ಚು ರಮಣೀಯವಾಗಿರುತ್ತದೆ. ಈ ರೀತಿ ಯತಿಯನ್ನು ಶ್ರುತಿ ಸಹ್ಯ ವಾಗುವಂತೆ ಸಂಗೀತಕ್ಕೆ ಅನುಕೂಲ ಮಾಡಿಕೊಂಡು ಹೇಳುವಾಗ ಕವಿ ಎರಡು ಹೊಣೆಗಾರಿಕೆ ಹೊರಬೇಕು. ಭಾಷೆಯ ರೂಪು ಕೆಡಬಾರದು. ಲಯದ ಗೋಪು ಕೆಡಬಾರದು. ಮೇಲಿನ 'ಬೇಕಾದ ವರ ಬೇಡು' ಎನ್ನುವದನ್ನು ಹೇಳುವಾಗ ಕೂಡಿ ಹೇಳಿದರೆ ಅರ್ಥ ದೋಷ ಬಂದಿತು. ಈ ಹೊಣೆಗಾರಿಕೆಯನ್ನು ಕವಿ ಯಾವಾಗಲೂ ಮೈತುಂಬ ಕಣ್ಣಿಟ್ಟು ನೋಡಬೇಕು.

ನಾಲ್ಕು ಮಾತ್ರೆಯ ಗಣಕ್ಕೆ ತಾಳವನ್ನು ಒಳಕೊಳ್ಳುವ ಶಕ್ತಿ ಮೂರು ಮಾತ್ರೆಯ ಗಣಕ್ಕಿಂತಲೂ ವಿಶೇಷವಾಗಿದೆ. ಏಕೆಂದರೆ ಅದರಲ್ಲಿ ವೈವಿಧ್ಯಕ್ಕೆ ಅವಕಾಶವಿದೆ. ನಿಯಮಿತ ಮಾತ್ರೆಯ ಗಣಗಳಲ್ಲಿ ಅವಾಂತರವಾಗಿ ಗಣ

ಗಳನ್ನು ಕಲ್ಪಿಸುವದು ಶ್ರುತಿ ಮನೋಹರವಾಗಿದೆ. ಎಂಬ ಮಾತು ಇಲ್ಲಿ ಗಮ್ಯ—

"ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ
ಚುಂಬಕ ಗಾಳಿಯು ಬೀಸುತಿದೆ
ಸೂರ್ಯನ ಬಿಂಬಕೆ ಚಂದ್ರನ ಬಿಂಬವು
ರಂಬಿಸಿ ನಗೆಯಲಿ ಈಸುತಿದೆ"

ಇಲ್ಲಿ ನಾಲ್ಕು ಮಾತ್ರೆಯ ಗಣ ನಿಯತವಾಗಿ ಗಣದ ಆರಂಭಕ್ಕೆ ತಾಳ ಬೀಳುತ್ತದೆ. ಲಯವು ಒಂದೇ ಕಡೆಗೆ ಕೆಡದೆ ಬಂದಿದೆ—

"ಬರಲಿಹ ಕಾಯಿಯ ಪಾಡಿನ ರುಚಿಯಾ
ಇದರೊಳು ಮಡಗಿಹುದು.
ನಾಳಿನ ಹಣ್ಣಿನ ರಸವಿಲ್ಲಿಯು ಮಕ-
ರಂದದೊಳಡಗಿಹುದು."

ಇಲ್ಲಿಯೂ ಅದೇ ರೀತಿಯಾಗಿ ಬಂದಿದೆ. ಆದರೆ ಉತ್ತರಾರ್ಧದಲ್ಲಿಯ ಕೊನೆಯ ಗಣವು 'ಮಕರಂದ' ಎಂಬ ಶಬ್ದವನ್ನು ಒಡೆದುಕೊಂಡು ಹೋಗಿದ್ದರೂ ಗುರುವಿನಿಂದ ಆರಂಭವಾಗುವ ಗಣ ತಾಳದ ಜೊತೆಗೆ ಯೋಗ್ಯವಿರುತ್ತದೆ. ಅಲ್ಲಿ ತಾಳ ತಪ್ಪದೆ ಲಯ ಉಳಿದಿದೆ. ಸಾಮಾನ್ಯವಾಗಿ ಇಂಥ ಪ್ರಯೋಗಗಳು ಅಪವಾದವಾಗಿ ಶ್ರುತಿಸಹ್ಯವಾಗುವದುಂಟು. ಅದಕ್ಕೆ ಕವಿಯ ಜಾಣ್ಮೆಬೇಕು. ಇದೇ ಕವನದ ಮೊದಲಿನ ಸಾಲುಗಳಲ್ಲಿಯೂ ಯತಿಯಾಗಲೀ ತಾಳವಾಗಲೀ ವಿಚಿತ್ರವೆನಿಸುವಂತೆ ಪ್ರಯೋಗಿಸಿದೆ.

"ಬಾ ಭೃಂಗವೆ ಬಾ ವಿರಾಗಿಯಂದದಿ
ಭ್ರಮಿಸುವೆ ನೀನೇಕೆ?"

ಮೊದಲಿನೆಯದರಲ್ಲಿಯ 'ಬಾ' ಎನ್ನುವದನ್ನೊಂದು ಬೇರೆ ಹೇಳಿ ಆಮೇಲೆ 'ಭೃಂಗವೆ' ಎಂಬುದನ್ನು ಹೇಳಿ ಮತ್ತೆ 'ಬಾ' ಎಂದು ಹೇಳಿಕೊಳ್ಳಬೇಕು. ಇಲ್ಲಿ ನಾಲ್ಕು ಮಾತ್ರೆಯ ಗಣವಿಭಜನೆ ಸಾಧ್ಯವಾದರೂ

ಸಾಧುವಲ್ಲ. ಆದರೆ ಒಂದು ಮಾತು. ಇವೆಲ್ಲ ಸಂಗೀತ ವೇದದ ವಿಧಗಳಲ್ಲಿ ಗಮಕಿಯ ನಾಲಿಗೆ, ಸಹೃದಯನ ಕಿವಿ, ಎರಡರಲ್ಲಿಯ ಅನುಕೂಲ ಸಿಂಧು. ಮುಂದೆ ಬರುವ ವಿರಾಗ ಎಂಬ ವಿಷಮ ಗಣ ಪ್ರಯೋಗ ಪ್ರಾಚೀನರಲ್ಲಿರ ದಿದ್ದರೂ ಇತ್ತೀಚೆಗೆ ಸೇರಿಕೊಂಡಿದೆ. ಆದರೂ ಹೇಳುವಾಗ ನಾಲಿಗೆಗೆ ಹೇಗೋ ಅನ್ನಿಸುತ್ತಿದೆ. ಕಿವಿ ಅಷ್ಟೇ ತಿಳಿದು ತಾಳ್ಮೆ ತಾಳಬೇಕು. ಅದು ಗಮಕಿಯ ನುಡಿತದ ಮೇಲಿದೆ. ಈನಾಲ್ಕು ಮಾತ್ರೆಯ ಗಣದ ವಿವಿಧ ವಿಲಾಸವೇನೋ ಇಲ್ಲಿವೆ. ಕ್ರಮ ವಿಪರ್ಯಯೆಯೇನೋ 'ಋತುಗಾನ' ದಲ್ಲಿ ಕಾಣಬಹುದು. ಆದರೂ ಕಿವಿಗೆ ಗೀತ ನಾಲಿಗೆಗೆ ಮಧುವೆರೆದಂತೆ ಬಂದಿದೆ. ಇದೇ ನಾಲ್ಕು ಮಾತ್ರೆಯ ಗಣವನ್ನೇ (ಯುಗ್ಮ) ೩|೫ ಹೇಳಿ ದರೂ ಸೊಗಸು ಹೆಚ್ಚಿದ್ದು ಕಂಡುಬರಬಹುದು. ಈ ಪ್ರಯೋಗ ಬೇಂದ್ರೆ ಯವರಲ್ಲಿ ಅಪರೂಪ.

ಇಳಿದು ಬಾ| ತಾಯಿ| ಇಳಿದು ಬಾ| ತಾಯಿ| ಇಳಿದು ಬಾ
ಹರಿಯ| ಅಡಿಯಿಂದ
ಹರನ| ಜಡೆಯಿಂದ
ಋಷಿಯ| ತೊಡೆಯಿಂದ| ಇಳಿದು ಬಾ

ಇದೇ ಮೇರೆಗೆ ೩|೪ ಮಾತ್ರೆ ಮಿಶ್ರಗಣದ 'ಚಲುವು' 'ರಾಗರತಿ' 'ನಿಗಿ ನಿಗ ಮುಗಿಲು' ಮೊದಲಾದವುಗಳಲ್ಲಿ ತೋರಿದೆ. ಐದು ಮಾತ್ರೆಯ ಗಣದಲ್ಲಿ ತುಂಬ ವೈವಿಧ್ಯ ೩|೪|೩ ಎಂದು.

"ಹಕ್ಕಿ|ಥೂಯಿತು| ಜೀವ| ರೆಕ್ಕೆ| ಯಾದವು| ಭಾವ" ಮತ್ತು
" ಪಟು| ವಾಡುಗಾರ ತುಟಿ ಮುಚ್ಚಿದನು "

ಎನ್ನುವಲ್ಲಿ ೫ ಮಾತ್ರೆಯಂತೆ ಒಡೆಯಬಹುದಾದರೂ ೨|೩|೩ ಹೀಗೆ ಕೂಡಿ ತಾಳಹಾಕುವದು. ೪|೫ ಕಡಿಮೆ. ಬೇಂದ್ರೆಯವರ ಕೆಲವು ಕವನ ಗಳಲ್ಲಿ ಹೀಗೆ ಗಣತೋರಿಸಿದರೂ ಅದು ವಿಚಾರಣೀಯವಾಗಿದೆ. 'ಕುರುಡು ಕಾಂಚಾಣಾ' 'ಮೊದಲಗಿತ್ತಿ' 'ಸಖೀಗೀತ'ದಲ್ಲಿ ಇದರ ಪ್ರಯೋಗ ತುಂಬ ಇದೆ. ಆದರೆ ವಿಷ್ಣುಗಣದ ಪ್ರಯೋಗವೆ ಹೀಗೆ ಮಾತ್ರಾ ಭೇದವಾಗ ಲಿಕ್ಕೆ ಕಾರಣ.

'ಕೂಲಿ ಕುಂಬಳಿಯವರ
ಪಾಲಿನ ಮೈದೊಗಲು
ಕಾಲಿನ ಭಂಡಾರ ಹಣೆಯೊಳಗಿತ್ತೊ'

ಇಲ್ಲಿ ಎರಡನೇ ಮೂರನೇ ಪಂಕ್ತಿಗಳಲ್ಲಿ ಬರುವ ಆದಿಗಣವು ನಾಲ್ಕು ಮಾತ್ರೆಯದೇ ಇದ್ದರೂ ಹೇಳುವ ಕಾಲಕ್ಕೆ ೫ ಮಾತ್ರೆಗಳ ಕಾಲ ಯಾಪನೆ ಮಾಡಿ ಹೇಳಬೇಕು.

" ಹಿಂಡಲಿಗಿ ವುಂಡರು ಅಂಡಲೆಯಲು ನಿನ್ನ
ನೆತ್ತರು ಒರೆಹಚ್ಚಿ ನೋಡಿರುವೆ '

ಇಲ್ಲಿಯ ನಾಲ್ಕು ಮಾತ್ರೆಯ ಗಣಗಳನ್ನೆಲ್ಲ ಐದು ಮಾತ್ರೆಗೆ ಹಿಗ್ಗಿಸಿಯೇ ಹೇಳಬೇಕು. ಕನ್ನಡದ ಛಂದಸ್ಸಿನಲ್ಲಿ ४।೫ ಮಾತ್ರೆಯ ಗಣವು ಲಯಬದ್ಧವಾಗುವದಿಲ್ಲ. ತಾಳ ತಪ್ಪುತ್ತಿದೆ. ಲಯವಿಲಯವಾಗುತ್ತಿದೆ. ಆದ್ದರಿಂದ ಅಲ್ಲಿಯ ನಾಲ್ಕು ಮಾತ್ರೆಯ ಗಣಗಳನ್ನು ನಾಲ್ಕೇ ಮಾತ್ರೆಯೆಂದು ಯಾರೂ ಭ್ರಮಿಸಿ ಅಯ್ಯೋ ಬೇಂದ್ರೆಯವರು ಎಂತ ಶ್ರುತಿ ಕಟು ಗಣಗನ್ನು ಪ್ರಯೋಗಿಸಿದ್ದಾರೆ ಎನ್ನದಿರಲಿ. ಅದು ದ್ರಾವಿಡಗಣ ಬಂಧ.

ಕಾವ್ಯದ ಬಹಿರಂಗ ನಿರೀಕ್ಷಣೆಯಲ್ಲಿ ಛಂದಸ್ಸಿನ ನಂತರ ಕಂಡುಬರುವದು. ಶಬ್ದಾಲಂಕಾರದ ಅಂಗಸೌಷ್ಠವ. ಕವಿಯು ತನ್ನ ನೈಪುಣ್ಯ ಪ್ರದರ್ಶನೆಗಾಗಿ ಇಲ್ಲಿಯೂ ತನ್ನ ಲೀಲಾವಿಲಾಸ ಗೈದಿರಬೇಕು. ಒಂದು ದೃಷ್ಟಿಯಿಂದ ಕಾವ್ಯ ಪ್ರಪಂಚದಲ್ಲಿ ನಾದವು ವಿಚಾರವಾದರೆ ಶಬ್ದಾಲಂಕಾರವು ಆಚಾರ, ರಸವು ಇದರ ಸದುನಿತ್ಯ ಸಂಸ್ಕೃತಿ ಕಾವ್ಯವು ಇಂತಹ ಸಂಸ್ಕೃತಿಯಾಗಬೇಕಾದರೆ, ಅದರ ವಿಚಾರ ಆಚಾರಗಳಲ್ಲಿ ತಾಳಮೇಳ ಬೇಕಲ್ಲವೇ? ನಾದವು ನೆನೆದದ್ದನ್ನು ಶಬ್ದಾಲಂಕಾರ ನುಡಿಯುತ್ತದೆ. ಗೈಯುತ್ತದೆ. ಆಚಾರವರಿಯದ ವಿಚಾರವು ಗಾಳಿಗೋಪುರ. ಅಂತೆಯೇ ಶಬ್ದಾಲಂಕಾರವಿಲ್ಲದ ನಾದವ್ಯಂಜನೆಯು ಮರಳಿನಿಂದ ಎಣ್ಣೆ ದೊರಕಿಸುವ ಬರಿಗೆಯ್ಮೆ, ಹೀಗೆಂದ ಮಾತ್ರಕ್ಕೆ ಶಬ್ದಾಲಂಕಾರವಿದ್ದರೆ. ಅದು ನಾದವ್ಯಂಜನೆಗಾಗಿಯೆ ಇದೆ. ಎನ್ನುವ ಕಲ್ಪನೆಯು ನಿರಾಧಾರವಾದುದು. ವಿಚಾರಗೇಡಿಗಳಾದ ಆಚಾರ ಎಷ್ಟೋ ಇರುವದುಂಟು. ಅವೆಲ್ಲ ಅಸ್ತಿವಾರವಿಲ್ಲದ ವಾಸ್ತುರಚನೆ. ಶಬ್ದಾ

ಲಂಕಾರಗಳನ್ನು ಕವಿ ಉಪಯೋಗಿಸಿದ್ದಾನೆ. ಎಂದರೆ ಅದನ್ನು ತನ್ನ ನಾದ ಲೀಲೆಯ ನೋಟಕ್ಕಾಗಿ (ಕಳೆಗಾಗಿ) ಎಂದು ಕವಿಯ ಮೇಲೆ ವಿಶ್ವಾಸವಿಟ್ಟು ಒಪ್ಪಿಕೊಳ್ಳಬೇಕು. ಆದರೆ ಈ ಶಾಬ್ದಿಕ ಝಣತ್ಕಾರವು, ಇಲ್ಲವೆ ಗಲಭೆಯು ಸಂಸ್ಕೃತಕವಿಗಳಲ್ಲಿ ನಿರರ್ಥಕವಾಗಿ ಬಂದಿದೆ. ಅವರಿಗೆ ಅದರಲ್ಲಿಯೆ ಪ್ರೀತಿ ಹೆಚ್ಚು. ಬಾಣನ ಬರಹ ಈ ಬಗೆಯ ಪ್ರಯೋಗವು. ಇದು ಹದ ಬೆದೆಯ ರಿತಾಗಬೇಕು. ನಾದವಿದ್ದಂತೆ ಅದನ್ನು ಹೊಮ್ಮಿಸುವ ಅನುರೂಪವಾದ ಶಬ್ದಾಲಂಕಾರವಾದರೆ ಒಪ್ಪು. ಅಂತಃಶಕ್ತಿಯಿಲ್ಲದೆ ಕೇವಲವಾಗಿ ಅಲಂ ಕಾರಾಡಂಬರವೆ ಕೈಯಾಡಿದ್ದರೆ ಕವಿ ಅದನ್ನು ಉಪ್ಪಯೋಗಿಸುವದು ವ್ಯರ್ಥ. ಏಕೆಂದರೆ ಅಲಂಕಾರವೂ ರಸಪುಷ್ಟಿಗೆ ಸಹಾಯ ನೀಡುವಂತಹದಿರುವಾಗ ನಾದವಿಲ್ಲದಾಗ ಅದನ್ನು ಉಪಯೋಗಿಸುವದು ವ್ಯರ್ಥಶ್ರಮವಲ್ಲವೆ? ನಾಯಿ ಹೊಡೆಯಲು ಬಣ್ಣದ ಕೋಲಿನ ರೀತಿ, ಇಲ್ಲವೆ 'ಗೊಣಗೊಣ ಮಂತ್ರ'ವಾಗು ವದು. ಸಹೃದಯನಂತೂ ಶ್ರದ್ಧಾಳು. ಈ ಬಾಹ್ಯದಲ್ಲಿ ಆಂತರ್ಯದ ಗುಟ್ಟಿದೆ ಎಂದು ಮಬ್ಬಿಗೆ ಬೀಳುವವ ಒಳಸೇರಿ ನೋಡಿದರ ಅವನ ಗುಟ್ಟು ರಟ್ಟಾಗು ವದು. ಇದು ಕವಿಯ ಅಧಃಪತನ! ಕನ್ನಡ ಜನಾಂಗಕ್ಕೆ ಆರ್ಥಿಕದಾರಿದ್ರ ಅಂಟಿಕೊಡಿದ್ದರೆ ಲೇಖಕ ವರ್ಗಕ್ಕೆ ಶಾಬ್ದಿಕ ಸಂಪತ್ತಿ ಇಲ್ಲದಾಗಿದೆ. ದುಡ್ಡಿ ಲ್ಲದಾಗಲು ಜನತೆ ಹೆಚ್ಚಿನ ವೆಚ್ಚ ಹಚ್ಚಿದಾಗ ಅದನ್ನು ದುಂದುಗಾರಿಕೆಯೆಂ ತಲೂ ಹಾಗೆ ಮೆರೆಯುವದನ್ನು 'ಚೈನಿ' ಎಂದು ಹೆಸರಿಡುವರು. ಸಾಹಿತ್ಯ ಪ್ರಪಂಚದಲ್ಲಿಯೂ ಅದೇ ಅಲಂಕಾರಗಳು ಚಿನ್ನವಾಲರಲ್ಲಿ ಬಿಡಿಬಿಡಿಯಾಗಿ ಹಚ್ಚಿದ ಪಣ್ಯವಸ್ತುಗಳಲ್ಲ. ಎನ್ನುವ ಮಾತನ್ನು ಬೇಂದ್ರೆಯವರ ಅಲಂಕಾರ ವಿಚಾರ ಮಾಡುವಾಗ ನನ್ನ ಗೆಳೆಯರಾದ ಮಾನ್ಯ ಲೇಖಕರು ಬರೆದದ್ದು ತುಂಬ ಸತ್ಯವಾದುದು. ಶಬ್ದಾಲಂಕಾರವಂತೂ ನಾದಕನ್ಯೆ ಸ್ವಯಂವರ ದಲ್ಲಿ ಗೆದ್ದ ತನ್ನ ಹೃದಯ ಪುರುಷ [ಹಿಂದೆ ನಾದವೇ ಪುರುಷಶಕ್ತಿ, ಶಬ್ದವೆ ಪ್ರಕೃತಿ ಎನುವ ಮಾತು ಬಂದಿದೆ. ಈ ಕೊನೆಯ ಮಾತನ್ನು ಅದಕ್ಕೆ ವಿರೋ ದಾಭಾಸವಾಗವೆಂದು ಅಲಂಕಾರಿಕವಾಗಿ ಹೇಳಿದೆ. ಮೊದಲನೆಯದು ಸತ್ಯ ಮತ್ತಿನದು ಅಲಂಕಾರಿಕ.]

ಕವಿ ನಾದಬ್ರಹ್ಮನಾಗಬೇಕಾದರೆ ಶಬ್ದಬ್ರಹ್ಮಾತೀತನಾಗಬೇಕು. ಶಬ್ದ ಬ್ರಹ್ಮನ ಆಚೆನಾದ ಬ್ರಹ್ಮನನಾಡು ಎಂಬ ಮಾತು ಮೇಲೆ ಬಂದಿದೆ. ನಾದ ಬ್ರಹ್ಮನ ಸಾಕ್ಷಾತ್ಕಾರಕ್ಕೆ ಶಬ್ದಬ್ರಹ್ಮವೇ ನೆಲೆ. ಬೇಂದ್ರೆಯವರ ನಾದಪ್ರಿ

ಯತೆಯನ್ನು ಕುರಿತು ಬರೆಯುವಾಗ ಅವರ ಶಬ್ದಾಲಂಕಾರ ಪ್ರಯೋಗ ವನ್ನು ವಿಮರ್ಶಿಸುವದು ಅನುಕ್ರಮಿಕ ವೃತ್ತಿಯೆ. ಯಾವುದೊಂದು ಮಾತನ್ನು ಹೇಳುವಾಗ ಆದನ್ನು ತೂಕಹಾಕಿ ಅಳವು ಹವಣಗಳನ್ನು ಅರಿತು ಆಡುತ್ತಾರೆ ಲಕ್ಷಣಶಾಸ್ತ್ರಗಳಲ್ಲಿ ಹೇಳುವ ಶಬ್ದಾಲಂಕಾರಗಳನ್ನು ವಿವೇಚಿಸುವದಕ್ಕೆ ಇದು ಸಮಯವೂ ಅಲ್ಲ. ಸ್ಥಾನವೂ ಅಲ್ಲದಿರಬಹುದು. ಬೇಂದ್ರೆಯವರು ಸ್ವಭಾವತಃ ಪ್ರಯೋಗಪ್ರಿಯರು. ಲಾಟಾನುಪ್ರಾಸ, ವೃತ್ಯನುಪ್ರಾಸಗಳ ಸೂಕ್ಷ್ಮ ಭೇದವನ್ನು ಆರಿಸುತ್ತ ಕೂಡ್ರುವದಾಗಲಿ ಯಮಕ ಮೊದಲಾದ ಹತ್ತಾರು ಪುನರುಕ್ತವಭಾಸ ಮೊದಲಾದ ಹತ್ತೆಂಟು ಗಂಟುಹಾಕಿಕೊಳ್ಳು ರಗಳೆಯಿಂದ ತಪ್ಪಿಸಿ ಪ್ರಾಸವೆನ್ನುವದೊಂದು ಶಬ್ದಾಲಂಕಾರವೆನ್ನಿರಿ. ಎಲ್ಲವನ್ನೂ ಅದರ ಹೊಟ್ಟೆಯಲ್ಲಿಯೇ ಸೇರಿಸಿ ಅದರ ಸೂಕ್ಷ್ಮ ಪರಿಯನ್ನ ತೋರಿಸುವ ಒಂದು ತೃತಯಃ ಪಂಥದಿಂದ ಲೇಖ ಮುಂದೆ ಸಾಗಬೇಕು.

ಇಂದಿಗೂ ಕರ್ನಾಟಕವು ಬೇಂದ್ರೆಯವರ "ಪಟ್ಟದ ಹಾಡು" ಎಂದು ಹೇಳಿಕೊಳ್ಳುವ ಕುಣಿಯೊಣುಬಾ ಎಂಬ ಪದ್ಯದ ಕೆಲವು ಸಾಲುಗಳಿವು-

೧. ತಿಗರ್‍ಯಾಗಿ ಚಿಗರ್‍ಯಾಗಿ
ನಿದ್ದೀಯ ಬಗರ್‍ಯಾಗಿ
ಗಾಳಿಗು ಹಗುರಾಗಿ | ಕುಣಿಯೋಣು ಬಾ.

೨. ಗರಗರ
ಗಿರಿಗಿರಿ
ಹಿಗ್ಗಿಗ್ಗಿ ಹಿರಿಹಿರಿ
ಸೈಸೈ ಸರಿಸರಿ | ಕುಣಿಯೋಣು ಬಾ.

೩. ಹಗಲಿರುಳು ತಾಳಕ್ಕ
ಮುಗಿಯದ ಕಾಳಕ್ಕ
ಜನುಮಗಳ ಮ್ಯಾಳಕ್ಕ | ಕುಣಿಯೋಣು ಬಾ.

ಈ ಪದ್ಯದ ಸಾಲುಗಳಲ್ಲಿ ಬರುವ ಪ್ರಾಸವು ಶಬ್ದಾಲಂಕಾರದ ಸೊಬಗಿನಿಂದ ರಂಜಿಸುವದು. ಕನ್ನಡದಲ್ಲಿಯ ಪ್ರಾಸವನ್ನು ಶಬ್ದಾಲಂಕಾರದಲ್ಲಿ ಸಲಾಗದು. ಏಕೆಂದರೆ ಶಬ್ದಾಲಂಕಾರವು ಅರ್ಥವರಿಯದೆಯೂ ಅದರ

ಅಭಿವ್ಯಕ್ತಿಯಾಗಬೇಕು. ಕನ್ನಡ ಬರದೆ ಇದ್ದವರು ಕೂಡ ಕೇವಲ ಶಬ್ದದ ನೃತ್ಯದಿಂದಲೆ ಹುರುಳನ್ನು ಅರಿಯಬೇಕು. ಕನ್ನಡದ ಪ್ರಾಚೀನ ಪರಂಪರೆಯಲ್ಲಿ ಬರುವ ದ್ವಿತೀಯಾಕ್ಷರ ಪ್ರಾಸವು ಸಹೃದಯಶ್ರೋತೃವಿಗೆ ಪ್ರತೀತವಾಗುವದೇ ಇಲ್ಲ. ಅದು ಶ್ರೀ. ಬೇಂದ್ರೆಯವರ ಅಭಿಪ್ರಾಯದಂತೆ "ಈ ಪ್ರಾಸವು ನಾಲ್ಕಾರು ಸಾಲುಗಳನ್ನ ಪೋಣಿಸುವ ತೂತು" ಆದರೆ ಪ್ರಾಚೀನದ ದ್ವಿತೀಯಾಕ್ಷರ ಪ್ರಾಸವೇ ಹೊಸ ಕನ್ನಡದಲ್ಲಿ ಅಂತ್ಯಾಕ್ಷರಕ್ಕೆ ಹಾರಿದೆ. ಕೇವಲ ಅಂತ್ಯಾಕ್ಷರದ ಪ್ರಾಸದ ಹಣೆಬರಹವೂ ಹಾಗೆಯೆ. ಪ್ರಾಸವು ಎಲ್ಲಿಯೆ ಇರಲಿ ಕಾವ್ಯನಾದವದ್ನು ನಿನದಿಸಬೇಕು. ಈ ಮೂರು ವಿಭಾಗದಲ್ಲಿಯ ಅಂತ್ಯ ಪ್ರಾಸಕ್ಕೆ ಅನು ಪೂರ್ವಿ ಯಿದೆ. ಅದರಿಂದಲೇ ಅದು ಅನುಪ್ರಾಸದ ದಾರಿಯಲ್ಲಿ ನುಗ್ಗಿ ಕಾವ್ಯಕ್ಕೆ ಅಲಂಕಾರವೆನಿಸಿದೆ. ಶ್ರೀ. ದಿವಾಕರರು ಒಮ್ಮೆ ಕಲಕತ್ತೆಯ P. E. N. ಸಂಘದಲ್ಲಿ ಶ್ರಿ. ಬೇಂದ್ರೆಯವರ 'ಕುಣಿಯೋಣು ಬಾರ' ಎಂಬ ಕವನ ಅಂದು ತೋರಿಸಿದಾಗ ಬಂಗಾಲಿಯ ಕನ್ನಡವರಿಯದ ಜನ ಈ ಸೊಗಸಿಗಲ್ಲ ಅರ್ಥವಿದೆಯೇ? ಎಂದು ಕೇಳಿದರಂತೆ. ಅವರೆ ಹೇಳಿದ್ದರಂತೂ ಸಹೃದಯ ಉತ್ಸಾಹನಿಯಂತ್ರಣಕ್ಕ ಅಸಮರ್ಥನಾಗಿ ಕುಣಿಯುತ್ತಿದ್ದನೇನೋ! ಇದು ಅದರಲ್ಲಿರುವ ಪ್ರಾಸ ಶಕ್ತಿ. ಕವಿತೆ ಹೃದಯಂಗಮವಾಗಲಿಕ್ಕೆ ಪ್ರಾಸವು ಕಾರಣ ಕೋಟಿಯಲ್ಲಿ ಸೇರುತ್ತದೆ. ಈಪ್ರಾಸ ಪ್ರಯೋಗದ ಔಚಿತ್ಯವನ್ನು ಅದರ ಸುಂದರ ಬಂಧವನ್ನು 'ಸಚ್ಚಿದಾನಂದ' ದಲ್ಲಿ ಕಾಣಬಹುದು.

'ನಿನ್ನುಸಿರು ಕಟ್ಟಿದೀ ಬಂಧ। ಐದರ ಸಂದ। ಕಡಲು ಏಳೊಂದ।
ಕುಣಿತ ಸ್ವಚ್ಛಂದೋ — ಸಚ್ಚಿದಾನಂದ.
ನಾತೊಟ್ಟ ದೇಹಗಳ ಲೆಕ್ಕ
ಇಡುವರ ಸೊಕ್ಕ
ಯ ನೋಡಿ ನಕ್ಕ
ಸಿಗಲೊಲ್ಲಿ ಬೇಕು ನೀ ನನಗ ಜೀವ ಜೀವಾಳಾ s
ರಾಜಘನ ನೀಳಾ
ನನ ಒಡಪ ಒಡೆದವ ಯಾವಾ
ನೋವೆ ನನ ಜೀವಾ
ಈಗಿನೀ ಭಾವಾ। ಈಗಿನೀಭಾವಾ।

ಇಲ್ಲಿ ಅನುಪ್ರಾಸದ ನವಿಲಿನ ನಣಿಗೆಯಿದ್ದರೆ

"ಆತನೀತನವಂತ ಯಾತನದ ಯಾತನೆಯ
ಯಾತ ಕಿರುಗೊಟ್ಟೋದು ನಿಂಥಾಂಗ
ನಾನೀನ ನುಡಿ ನುಂಗಿ ತಾನೀನ ತಾನೆತಾ
ತಾನಾಗಿ ತನನನನ ಬಂಥಾಂಗ
ರಂಗೊಂದು ದಂಗೊಂದು ಗುಂಗೊಂದು ಒದಕ್ಕೊಂದು
ಹತ್ತಾಗಿ ಜತ್ತಾಗಿ ಸುಳಿಥಾಂಗ"

ಇದಂತೂ ಮಾಯಾಕಿನ್ನರಿ. ಇಲ್ಲಿಯ ನಾದ ಮಾಯೆಯನ್ನು ಕವಿ ಯಮಕದ ಹೆಜ್ಜೆಗೆ ಅನುಪ್ರಾಸದ ಗೆಜ್ಜೆ ಕಟ್ಟಿ ಕುಣಿಸಿದ್ದಾನೆ. ಮಾಯಾ ಕಿನ್ನರಿಯಲ್ಲಿಯ ಹುರುಳು ಹೊಮ್ಮಬೇಕಾದರೆ ಸಖೀಗೀತದ ಜೋಡಿಗೆ ಇಂತ ಅಲಂಕಾರ ಶ್ರುತಿಯ ಅವಶ್ಯಕತೆಯೆಂದು ಬೇರೆ ಹೇಳಲು, ಹಾಡಿದ್ದೆ ಹಾಡಿದಂತೆ. ಕವಿಗೆ ಯಮಕ ಅನುಪ್ರಾಸಗಳಲ್ಲಿಯ ಪ್ರೀತಿಗಾಢವಾದು ಎಂದೂ ಅವನು ಅಲಂಕಾರ ಕನ್ನಿಕೆಯನ್ನು ಬಲಾತ್ಕರಿಸಿಲ್ಲ. ಇದು ಕವಿಯ ಪ್ರೌಢಿಮೆಯೆಂದೇ ಹೇಳಬೇಕು. ಇಲ್ಲವಾದರೆ ಪ್ರಾಸಕ್ಕಾಗಿ ಹೆಣಗಾಡಿ ಪಾದ ಮುರಿದುಕೊಂಡು ಕವಿತೆ ಬರೆದ ಕವಿಗಳೂ ಇದ್ದಾರೆ. ಎಂದರೆ ಪ್ರಾಸವು ಬೇಜಾರ ಪಟ್ಟುಕೊಳ್ಳುವಂತೆ ಕ್ರಿಮತೆಯನ್ನು ಹ್ಯಾಗೆ ತೋರೀತು? ಕವಿಯ ನಿಜವಾದ ಪ್ರಾಸಪರಿಣತಿಯನ್ನು ಕಾಣುವದು ಕನ್ನಡದ ಮೇಘಸಂದೇಶದಲ್ಲಿ. ಅಲ್ಲಿ ಶಬ್ದಕ್ಕೆ ಶಕ್ತಿಬಂದು ಇಲ್ಲವೆ ಮೇಘದೂತವು ಕನ್ನಡ ಜನತೆಯ ಕಿವಿಯ ಹೃದಯದ ಕಾವ್ಯವಾದುದು ಪದ್ಯ ಪದ್ಯಗಳಲ್ಲಿಯೂ ಕಂಡ ಪ್ರಾಸದ ವಿಲಾಸದಿಂದ ಕ್ರಿಪದಿಯ ಇಲ್ಲವೆ, ಪದ್ಯದ ಒಂದು ಸಾಲನ್ನೆ ಪುನಃ ಹೇಳುವ ರೀತಿಯೊಂದು ಶಬ್ದಾಲಂಕಾರದ ಸ್ಮರಣೆ ತಂದುಕೊಡುತ್ತದೆ.

'ರೋಹಿಣಿಯ ಎದೆಯಕೆಂಪೆಳ್ಳು
ಗೆಳತಿ ಅವನವಳು
ನಲಿತಾಳ ಮುಂದs
ನಲಿತಾಳ ಮುಂದ?
ಹಾಕ್ಯಾರ ಚಿಕ್ಕಿಗೆಳಿತ್ಯಾರ

ಕೃತ್ತಿಕೀ ಹಾರ
ಕೃತ್ತಿಕೀ ಹಾರ ಽ
ಕಳಿಲಾಕ ಇದ್ದಬಿದ್ದ ಕೇತ ಽ
ಬೆಳದಿಂಗಳ ನೋಡ !!

ಇಲ್ಲಿಯ ಪದ ಪುನರುಚ್ಚರಣೆಯು ಕವನವನ್ನು ಉಯ್ಯಾಲೆಯಲ್ಲಿ — ತೂಗಿ ಜೀಕವಾಡಿಸಿ ಮುಂದೊಯ್ಯುವಂತೆ ಭಾಸವಾಗುತ್ತದೆ. ಗೀತದ ಗತಿ ಮುಂದೆ ಸಾಗಬೇಕು. ಎಂದರೆಯೆ ಸಹೃದಯ ತಲೆದೂಗುವದು.

ಜಿಜ್ಞಾಸುರಪಿ ಯೋಗಸ್ಯ ಶಬ್ದ ಬ್ರಹ್ಮಾತಿವರ್ತತೆ ಬೇಂದ್ರೆಯವರಂತೂ ಸಿದ್ಧರು. ನಾದಬ್ರಹ್ಮತಾದಾತ್ಮ್ಯವಡೆದ ನಾದಬ್ರಹ್ಮರೆ!

# ಬೇಂದ್ರೆಯವರ ಪ್ರತಿಭಾವಿಲಾಸ

**ಲೇಃ— ಪಂ. ಕೇಶವ ಶರ್ಮಾ ಗಲಗಲಿ**

ನವನವ ಕಲ್ಪನೆಗಳಿಂದ ಕೂಡಿದ ಬುದ್ಧಿಯೇ ಪ್ರತಿಭಾವಿಲಾಸವೆಂದು ಹೇಳುತ್ತಾರೆ. ಇಂತಹ ಬುದ್ಧಿಯು ಮನುಷ್ಯರಾಗಿ ಹುಟ್ಟಿದವರೆಲ್ಲರಲ್ಲಿಯೂ ಇರುವದಿಲ್ಲ. ಅದು ಅನೇಕ ಜನುಮಗಳ ಸಂಸ್ಕಾರದಿಂದ ಹುಟ್ಟಿದಾಗಲೇ ಕೆಲವರಿಗೆ ಪ್ರಾಪ್ತವಾಗುವದು. ಅದು ಈ ಜನ್ಮದಲ್ಲುಂಟಾಗುವ ಸಂಸ್ಕಾರದಿಂದ ಪುಟಕ್ಕಿಟ್ಟ ಚಿನ್ನದಂತೆ ಮತ್ತಿಷ್ಟು ಪ್ರಕಾಶಮಾನವಾಗಿ ಜಗದಲ್ಲಿ ಬೆಳಕನ್ನು ಬೀರುವದು. ಜನ್ಮ ಕುಂಡಲಿಯಿಂದ ನಾವು ಇಂತಹ ನಿಸರ್ಗದತ್ತ ಪ್ರತಿಭೆಯನ್ನು ಊಹಿಸಬಹುದು. ಬುದ್ಧಿಕಾರಕ ಬುಧನು ಬಲಶಾಲಿಯಾಗಿದ್ದು, ಹರ್ಶಲ ನೇಪಚ್ಯೂನ ಗುರುಶುಕ್ರರೊಡನೆ, ಒಬ್ಬೊಬ್ಬರೊಡನೆಯಾದರೂ ಶುಭದೃಷ್ಟಿಯುಳ್ಳವನಾಗಿದ್ದರೆ ಇಂತಹ ನೈಸರ್ಗಿಕ ಬುದ್ಧಿಶಾಲಿಗಳಾಗಿರುವರು. ಶ್ರೀಮಾನ್ ಬೇಂದ್ರೆಯವರು ೧೮೯೬ ನೇ ಇಸವಿಯ ಜನವರಿ ೩೧ ನೇ ತಾರೀಖಿನ ಮುಚ್ಚಂಜೆಯಲ್ಲಿ ಹುಟ್ಟಿದ್ದಾರೆ. ಅವರದು ಸಾಯನ ಸಿಂಹಲಗ್ನವಿದ್ದು ಗುರು ಲಗ್ನದಲ್ಲಿರುವನು. 'ಜೀವೋ ಜ್ಞಾನಸಖಂ' ಎಂದು ವರಹಾಮಿರಾಚಾರ್ಯರು ಹೇಳುವಂತೆ ಅವರು ತಮ್ಮ ಆಯುಮಾನದಲ್ಲಿ ಜ್ಞಾನಸುಖವನ್ನುಂಡು ತಣಿದಿದ್ದಾರೆ. ಕವಿತಾಕಾರಕ ಶುಕ್ರನು ಅವರ ಕುಂಡಲಿಯಲ್ಲಿ ಬಲಶಾಲಿಯಾಗಿರುವನು. ಹರ್ಶಲನ ಅಧಿಕಾರವಿರುವ ೩೧ ನೇ ತಾರೀಖೂ ಅಸ್ತಮಿತನಾಗುತ್ತಿರುವ ಸೂರ್ಯನೂ, ಅವರಿಗೆ ಅನೇಕ ಸಾಂಸಾರಿಕ ಎಡರುಗಳನ್ನು ಎದುರಿಸಲು ಹಚ್ಚಿದೆ. ಎಡರುಗಳನ್ನು ಎದುರಿಸುವ ಸ್ವಾನುಭವದಲ್ಲಿ ಅವರ ಮುಖದಿಂದ ಹೊರಬಿದ್ದ ಉದ್ಗಾರಗಳು 'ತುತ್ತಿನ ಚೀಲ' ಮೊದಲಾದವು ಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಪಡೆಯುವ ಯೋಗ್ಯತೆಯ ಕಾವ್ಯಗಳಾಗಿ ಹೊರಬಿದ್ದಿವೆ. ಸಿರಿವಂತರ ಸುಖಾಸನದಲ್ಲಿ ಲೋಲಾಡುವ ಭಾಗ್ಯವನ್ನವರು ಪಡೆದಿದ್ದಾರೆ.

"ದೇವರದೊಂದು ಗೋರಿಯಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ"

ಮೊದಲಾದ ಬಡವರ ಪ್ರಾತಿನಿಧ್ಯವನ್ನು ಚಿತ್ರಿಸುವ ಕವಿತಾಕೆಂಡಗಳು ಹೊರನುಗ್ಗುತ್ತಿದ್ದಿಲ್ಲ.

ಬೇಂದ್ರೆಯವರು ಯಾವ ವಿಷಯವಾಗಿ ಕವಿತೆಗಳನ್ನು ಬರೆಯಲಿ,ಅವು ಆಂತರಿಕ ಪ್ರೇರಣೆಯಲ್ಲಿ ಅವರು ಸಾಧಾರಣ ಸಮಾಧಿಯವಸ್ಥೆಯಲ್ಲಿರುವಾಗಲೇ ಹೊರಬಿದ್ದಿವೆ. ಅಂತೆ ಅವಿಷ್ಟು ಅಲ್ಪಕಾಲದಲ್ಲಿ ಕರುನಾಡ ತುಂಬೆಲ್ಲ ವ್ಯಾಪಿಸಿ, ಜನಮನವನ್ನು ರಂಜಿಸುತ್ತಿರುವವು. ಕರುಳಿನ ವಚನಗಳನ್ನೇ ನೋಡಿರಿ, ರವಿಂದ್ರರ "ಕ್ರಿಸೆಂಟಮೂನಿ" ತರುವಾಯ ಇಂತಹ ಬಾಲನನ್ನು ಅಧಿಕರಿಸಿ ಬರೆದ ಕಾವ್ಯರಾಣಿಯನ್ನು ನಾವು ನೋಡುವುದು ಸುದುರ್ಲಭ. ಅದರಲ್ಲಿಯೂ ನಮ್ಮ ಕನ್ನಡಿಗರಾಡುವ ತಿಳಿನುಡಿಯಲ್ಲಿ ಜನವಾಣಿಯಲ್ಲಿ ಇಂತಹ ಒಂದು ವಚನವನ್ನು ಉದಹರಿಸಿದರೆ ಸಾಕು?

'ನನ್ನ ಬೆಲ್ಲದಚ್ಚಿನ ಬೊಂಬೆಯೇ ನೀನು ನಕ್ಕರೊಂದು ರುಚಿ
ನೀನು ಅತ್ತರೊಂದು ರುಚಿ।
ನೀನು ನಗುತ್ತಲೆ ನಾನು ನಿನ್ನವಳೆಂದೆನಿಸುವುದು
ನೀನು ಅಳುತ್ತಲೆ ನೀನು ನನ್ನವನೆಂದೆನಿಸುವದು.
ನೀನು ನಕ್ಕರೊಂದು ರುಚಿ ನೀನು ಅತ್ತರೊಂದು ರುಚಿ
ನಿನ್ನ ಬಾಡಿದ ಮೋರೆ ನೋಡಿ ನನ್ನ ಕಣ್ಣಲ್ಲಿ ನೀರು ನಿಲ್ಲುವುದು
ನನ್ನ ಅರಳಿದ ಮುಖನೋಡಿ ನಿನ್ನ ತುಟಿಯಲ್ಲಿ
ನಗೆಯಾಡುವದು.
ನೀನು ನಕ್ಕರೊಂದು ರುಚಿ, ನೀನು ಅತ್ತರೊಂದು ರುಚಿ
ನೀನು ನಕ್ಕರೆ ಬೆಳಕಿನ ಬೆಳೆ, ನೀನು ಅತ್ತರೆ ಮುತ್ತಿನ ಮಳೆ
ನೀನು ನಕ್ಕರೊಂದು ರುಚಿ ನೀನು ಅತ್ತರೊಂದು ರುಚಿ'

ಈ ಕವಿತೆಯನ್ನು ಓದಿದರೆ ಕಾಲಿದಾಸನು "ಧನ್ಯಾಸ್ತದಂಗಜರಸಾಮಲಿನೀ ಭವಂತಿ" ಎಂದು ಉದ್ಗಾರ ತೆಗೆದಿರುವದು ಸಾರ್ಥಕವೆನಿಸುತ್ತದೆ. ಮಕ್ಕಳ ಧೂಳಿಯಿಂದ ತಾಯಿತಂದೆಗಳು ಪುನೀತರೂ ಧನ್ಯರೂ ಆಗುವರು. ಮಗುವಿನ ಅಳುವಿನಲ್ಲಿಯೂ ತಾಯಿಯ ಅಂತರಂಗವು ಅನುಪಮ ಸೌಂದರ್ಯವನ್ನು ಕಾಣುವದು. ಇದುವೆ ಮರ್ತ್ಯಲೋಕದಲ್ಲಿ ಮಾನವನು ಕಾಣುವ

ಸ್ವರ್ಗಸೌಂದರ್ಯ ಸಂಸಾರವು ಒರಿ ದುಃಖಮಯವಲ್ಲ ಆನಂದಮಯವೂ ಇದೆ. ಹಾಗೆ ನಡೆದರೆ ಸಂಸಾರ ಬಂಧನದಲ್ಲಿಯೇ ಸ್ವಾತಂತ್ರ್ಯ ಸುಖವನ್ನು ನಾನು ಪಡೆಯುವೆನೆಂದು ರವೀಂದ್ರರೂ ಹೇಳಿದ್ದಾರೆ. ಅವರ 'ಮುಕ್ತಿಯ ಉಪಾಯ" ಎಂಬ ಒಂದು ಕಥೆಯಲ್ಲಿ, ಓರ್ವ. ಸಂಸಾರಿಯು ಸಂಸಾರವನ್ನು ಮಾಡಲಾರದೆ ಬೇಸತ್ತು ಸಂಸಾರ ಶುಕ್ತಿಯಲ್ಲಿ ಮುಕ್ತಿಯ ಮೌಕ್ತಿಕವು ದೊರೆಯದೆಂದು, "ವೈರಾಗ್ಯಮೇವಾಭಯಂ" ಎಂದು ತಿಳಿದು ಸನ್ಯಾಸಿಯಾಗಿ ಅಲೆಯುತ್ತ ಅಲ್ಲಿಯೂ ಚಿರಂತನ ಶಾಂತಿಯನ್ನು ಕಾಣದೆ ಪುನಃ ತನ್ನ ಹೆಂಡತಿ, ತಂದೆ ಇರುವ ಊರಿಗೆ ಬಂದು ಹೆಂಡಂದಿರಿಂದ ಬುದ್ಧಿವಾದವನ್ನು ಪಡೆದು ಪುನಃ ಸಂಸಾರಿಯಾಗುತ್ತಾನೆ. ಈ ಕಥೆಯಲ್ಲಿ ರವೀಂದ್ರರು ಸಂಸಾರದಲ್ಲಿ ಕೂಡಾ ನಾವು ಮುಕ್ತಿಯ ಆನಂದವನ್ನು ಪಡೆಯಬಹುದೆಂಬುದನ್ನು ತೋರಿಸಿದ್ದಾರೆ. ಮದುವೆಯ ಹಡಗವನ್ನೇರಿ ಹಿಗ್ಗಿನ ದಾರಿಯನ್ನು ಹುಡುಕುವ ಹುಡುಗನಿಗೆ ಸುಖದುಃಖಸಾಗರದ ಸ್ವರೂಪವಾದ ಸಂಸಾರದಲ್ಲಿಯೇ ಅವನು ವಿವೇಕಿಯಾದರೆ ಅವನಿಗೆ ಹಿಗ್ಗಿನ ದಾರಿ ಸಿಕ್ಕುವದು. ನಿಜವಾದ ಕೌಟುಂಬಿಕನಿಗೆ ಮಕ್ಕಳ ಮಾಣಿಕದ ಕಣಿಯಾದ ಚಿಂತಾಮಣಿಯು ಸಿಕ್ಕುವದು. ಮಾತೆಲ್ಲ ಮುತ್ತಿನ ಎಳಿ ಎಳೆಯುವಂತಹ ಜೇನಿನ ಥಳಿಯಾದ, ಹಿಗ್ಗಿನ ತೊಳಿಯಾದ,ಮುಂಗೈಯ ಮೇಲೆ ಮುದ್ದಂಡು ಬೀರುವ ಮುದ್ದು ಮಾತಿನ ಗಿಣಿಯು ದೊರೆತು ಸಂಸಾರವೆ ಸಗ್ಗವಾಗುವದು. ಸ್ವರ್ಗ ನರಕಗಳೆರಡೂ ಇಲ್ಲಿಯೇ ಇರುತ್ತವೆ. ಅವನ್ನು ತೋರಿಸುವದೇ ಕವಿಯ ಕಾವ್ಯದ ಗುರಿ. ಇವನ್ನು ನಾವು ಬೇಂದ್ರೆಯವರ ಸಂಸಾರ ಮೊದಲಾದ ಕಾವ್ಯ ಚಿತ್ರದಲ್ಲಿ ಕಾಣಬಹುದು. ಕಾಣದ ಕಡಲಹಾದಿಯನ್ನು ಹಿಡಿದ ಈ ಸಂಸಾರದಲ್ಲಿ ಮುಳಗಾವ ಬೆಂಡಿಗೆ ತೆಕಿ ಮುಕ್ಕಿ ಬಿದ್ದು ತನ್ನ ಹಿನ್ನರಿಯನ್ನು ತಾನು ಹಿಡಿದು ತನ್ನ ಜೀವನದ ತಂತಿಯನ್ನು ಮಿಡಿದು ಇಂಪಾದ ಸ್ವರವನ್ನು ಇಲ್ಲಿ ಕೇಳಬಹುದು. ಇಲ್ಲವೆ ಸ್ಥಿರ ತಾರೆಯ ಗಮನದ ಗುರಿಯಿಲ್ಲದ ಸಂಸಾರವು ಪ್ರಭಂಜನಾಕ್ರಾಂತ ಅರ್ಣವ ಪೋತದಂತೆ ಸಾಗರದ ತಳವನ್ನೂ ಕಾಣಬಹುದು.

ಸಂಸಾರದ ಸುಖ ದುಃಖಗಳ ಚಿತ್ರವನ್ನು ಜನರಾಡುವ ನುಡಿಯಲ್ಲಿ ಬೇಂದ್ರೆಯವರಷ್ಟು ಸೊಗಸಾಗಿ ಚಿತ್ರಿಸಿದವರನ್ನು ನಾನಿನ್ನೂ ಕನ್ನಡ ನುಡಿಯಲ್ಲಿ ಕಂಡಿಲ್ಲ. ಇಂತಹ ನುಡಿಗಳಲ್ಲಿ ಇವರ ಹೃದಯ ಮಾರ್ದವವು ಹೊರ

ಸೂಸಿ ಉಕ್ಕುತ್ತಿರುವದು. ಉದಾಹರಣಕ್ಕಾಗಿ ಒಂದು ಗೀತವನ್ನು ನೋಡುವಾ—

"ಒಂದು ಕ್ಷಣಾ ಕಂಡ ತಪ್ಪಿಗೆ। ಎಂದಿನ ತನಕಾ ಕೊರಗೋದs
ಕೊರಗೋದ ಮತ ಸೊರಗೋದ."

ಸ್ತ್ರೀಯರ ಹೃದಯವು ಸ್ವಾಭಾವಿಕವಾಗಿ ವೃದುವಾದದ್ದು. ಕರ್ಕ ಮೀನ ಲಗ್ನದಲ್ಲಿ ಹುಟ್ಟಿದವರಂತೂ ಅತಿಶಯ ಕೋಮಲ ಹೃದಯವುಳ್ಳವರಾಗಿರುವರು. ಸ್ತ್ರೀಯರಲ್ಲಿ 'ಗಂಡು ಹೆಣ್ಣುಗಳು' ಹುಟ್ಟವದಿಲ್ಲವೆಂತಲ್ಲ. ಆದರೆ ಅವರು ಸ್ತ್ರೀಜಾತಿಯ ದ್ರೋಹಿಗಳು. ಸಣ್ಣ ಪುಟ್ಟ ಸಂಗತಿಗಳಿಗಾಗಿ ಕೋಮಲ ಸ್ತ್ರೀಯರು ಮರಗುವದು ಬಹಳ. ಪತಿ ಪುತ್ರರು ಎಷ್ಟು ಸಮಾಧಾನ ಹೇಳಿದರೂ ಅವರು ಕೇಳುವದಿಲ್ಲ. ಇದು ನಿತ್ಯ ಸಂಸಾರಿಕನ ಅನುಭವ—

"ಕಂಡ ರೂಪ ಕಂಡರಿಸುತ್ತ ಕಂಡ ಕಡೆಗೂ ಕೂಡೋದs
ಕೂಡೋದs ಮತ್ತ ನೋಡೋದು."

ಕಂಡದ್ದನ್ನೇ ನೆನಿಸುತ್ತ ಕೂಡುವದು, ಕೂಡುವದು ನೋಡುವದು ಮತ್ತೂ ನೋಡುವದು ಸ್ತ್ರೀ ಸ್ವಭಾವದ ಚಿತ್ರವಿದು.

"ಕಂಡ ಕಣ್ಣಿಲೆ ಕಣ್ಣೀರ ಸುರಿಸಿ ನೆನೆದ ನೆನಪಿಗೆ
ಬಯ್ಯೋದs ಬಯ್ಯೋದs ಮತ್ತ ಸುಯ್ಯೋದ"

"ಸತತ ರುದಿತೋಚ್ಛೂನ ನಯನಂ" ಅಮರಕ ಶತಕದಲ್ಲಿ ಇಂತಹ ಸ್ತ್ರೀ ಸ್ವಭಾವದ ವೈಚಿತ್ರ್ಯವು ನೋಡಲಿಕ್ಕೆ ಸಿಕ್ಕುವದು.

"ಬೆಳೆದ ಬದುಕಿಗೆ ಬಾಯಿ ಬಿಟ್ಟು ಸುಟ್ಟದೈವಕ
ನೊಯೋದs ನೊಯೋದ ಮತ್ತ ಸುಯ್ಯೋದs"

ದು:ಖದಲ್ಲಿದ್ದಾಗ ಸ್ತ್ರೀಯರ ಮನವನ್ನು ಸಾಂತ್ವನ ಪಡಿಸುವದು ಬೊಮ್ಮನಿಗೂ ಸಾಧ್ಯವಿಲ್ಲ. ಮಹಾಭಾರತದ ದ್ರೌಪತಿಯು

" ರಣ ಚಂಡಿಯು ಆ ಬೆಂಕಿಯ ಮಗಳು
ಹೆಣ್ಣಿನ ರೂಪದ ಬರಿಸಿಡಿಲಾ "ಗಿದ್ದರೂ

ದುಃಶಾಸನಾದಿಗಳ ವಧೆಯಾಗುವ ವರೆಗೆ ಭೀಮನಂತಹ ವೀರ ನಿಗೂ ಆಕೆಯನ್ನು ಸಮಾಧಾನಪಡಿಸುವದಾಗಲಿಲ್ಲ. ಆಕೆ ಸುಯ್ಯುತ್ತಲೇ ಇದ್ದಳು.

ಬೇಂದ್ರೆಯವರಲ್ಲಿ ಅನುಪಮ ರಾಸಿಕ್ಯವದೆ. ಅಂತೆಯೆ ಅವರಾಡುವ ಮಾತುಗಳು ವ್ಯಾಕರಣದ ನಿಯಮ ನಿರ್ಬಂಧಗಳಿಂದ ದೂರಿದ್ದರೂ, ಗ್ರಾಮೀಣ ಭಾಷೆಯಲ್ಲಿದ್ದರೂ ಸರ್ವಜ್ಞನು ಹೇಳವ 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ' ಎನ್ನುವಂತೆ ಚಂದ್ರೋದಯದಷ್ಟು, ಕವಿದ ಕಾರ್ಗತ್ತಲೆಯಲ್ಲಿರುವ ಕನ್ನಡಿಗರಿಗೆ ಆಹ್ಲಾದದಾಯಕವಾದವು. ಒಮ್ಮೆ ಅವರು ಹುಬ್ಬಳ್ಳಿಯ ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದರು. ಧಾರವಾಡದಿಂದ ಎರಡು ಮೂರುಸಾರೆ ಅಲ್ಲಿ ಹೋಗಿ ಬರುತ್ತಿದ್ದರು. ಇದನ್ನೇ ಅವರ ವಿದ್ಯಾರ್ಥಿಗಳು ಗಮನದಲ್ಲಿಟ್ಟುಕೊಂಡು ಅವರ "ಹುಬ್ಬಳ್ಳಿಯಾಂವಾ" ಎಂಬ ಕವಿತೆಯೊಳಗಿನ ಚರಣವನ್ನು ತಕ್ಕೊಂಡು "ವಾರದಾಗ ಮೂರು ಸರತಿ ಬಂದು ಹೋಗಾಂವಾ" ಎಂದು ಅವರಿಗೇ ತಿರುಗಿ ಅನ್ವಯಿಸಿದರಂತೆ. ಅವರ ಮಾತು ಶಶಿಯುದಿಸಿ ನಲುದಂತೆ ಬೇರೆ ಸಾಕ್ಷ್ಯಬೇಡ. ಅಷ್ಟು ವಿದ್ಯಾರ್ಥಿ ಪ್ರಿಯವಾಯಿತು ಆ ಗೀತ. ಆಧುನಿಕ ಸಂಸ್ಕಾರವು ಮುಟ್ಟದ ಶಿಕ್ಷಣ ಸ್ಪರ್ಶವಿಲ್ಲದ ಹಳ್ಳಿಗರಲ್ಲಿ ಕೂಡ ಕೆಲವರು ಅವರ ಕವಿತೆಗಳನ್ನು ಯಾರ ಬಾಯಿಂದಲೋ ಕೇಳಿ—

" ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ
ಆಗ ಸಂಜೆಯಾಗಿತ್ತ.
ಮಂಜಿನ ಮುಸುಕ ಹ್ಯಾಂಗೊ ಬಿದ್ದಿತ್ತ
ಮ್ಯಾಲಕ್ಕೆದ್ದಿತ್ತ...."

ಇತ್ಯಾದಿ ಗೀತದ ತುಣುಕುಗಳನ್ನು ಆನಂದ ಲಹರಿಯಲ್ಲಿ ಅನ್ನುತ್ತಿರುವುದನ್ನು ಕೇಳಿದ್ದೇನೆ. 'ಅತ್ತೊಂದು ಹತ್ತುಕೋಟಿ ಇತ್ತೊಂದು ಹತ್ತು ಕೋಟಿ' ಆ ಕ್ರೋಶದ ದನಿಯಿಂದ ಸಾಲೆಯ ಹುಡುಗರೆನ್ನುವದೇನು ಅಚ್ಚರಿ

ಯಲ್ಲ. ಕವಿಯು ಜೀವಮಾನದಲ್ಲಿ ಈ ಮೇರಗೆ ಕೀರ್ತಿಲತೆ ಹಬ್ಬಿದ್ದು ಕವಿ ಜನ್ಮಸಾರ್ಥಕತೆಗೆ ಬೇರೆ ಪ್ರಮಾಣಬೇಡ.

ಇನ್ನು ಏಕೀಕೃತವಾಗದ ಕರ್ನಾಟಕದಲ್ಲಿ ಅಷ್ಟೊಂದು ಜಾಗ್ರತಿಯಿಲ್ಲ. ಮಂಗಳೂರಿನವರು ಆಡುವ ಕನ್ನಡ ಬೇರೆ. ಮೈಸೂರಿನವರು ಆಡುವ ಕನ್ನಡದಲ್ಲಿ ಅರ್ಧ ಇಂಗ್ಲೀಷು. ಬೇಕಾದರೆ ಕೈಲಾಸಂರವರ ನಾಟಕ ನೋಡಿರಿ. ಧಾರವಾಡ ಕನ್ನಡ ಬೇರೆ ಇಂತಹ ಅವಸ್ಥೆಯಲ್ಲಿ ಬೇಂದ್ರೆ ಯವರ ರಮಣೀಯ ಗೀತಗಳು 'ಏಕೀಭೂಯಮಾನ ಕರ್ನಾಟಕದ ತುಂಬೆಲ್ಲ ವ್ಯಾಪಿಸಿರಲಿಕ್ಕಿಲ್ಲ ವಂಗಭಂಗದ ಕಾಲದಲ್ಲಿ ಶ್ರೀ ರವೀಂದ್ರರ ಗೀತ 'ಬಂಗಾಲದ ಹಳ್ಳಗಳು, ಬಂಗಾಲದ ನದಿಗಳು ತರುಣರ ಹೃದಯಗಳನ್ನು ಕೂಡಿಸಲಿ! ಕೂಡಿಸಲಿ! ಪವಿತ್ರಗೊಳಿಸಲಿ! ಪವಿತ್ರಗೊಳಿಸಲಿ' ಎಂಬರ್ಥದ್ದು ತರುಣರ ಹೃದಯಗಳನ್ನು ಉನ್ಮಥಿಸಿ ಭಾವನಾ ತರಂಗಳನ್ನು ಉಕ್ಕೇರಿಸಿ ದಂತೆ ಏಕೀಭಕ್ಷಿಣ್ಯಮಾಣ ಕರುನಾಡಿನಲ್ಲಿ ಒಂದು ದಿನ ಭೀಮೆಯಿಂದ ಕಾವೇರಿಯವರೆಗೂ ಜನಮನವನ್ನು ರಂಜಿಸಹತ್ತುವವೆಂಬುವದರಲ್ಲಿ ಸಂದೇಹ ವಿಲ್ಲ. ಬೇಂದ್ರೆಯವರ ಗೀತಗಳು ಆಡುವ ಮಾತುಗಳು (ಇಲ್ಲಿಯವು) ಅಲ್ಲಿಯವರ (ಮೈಸೂರಿನ ಮೊದಲಾದವರ) ಹೃದಯಕ್ಕೆ ತಾಕುವದಿಲ್ಲ. ಭಾಷಾಭಿನ್ನತೆಯೇ ಇದಕ್ಕೆ ಕಾರಣ. ಅಥವಾ ಇಷ್ಟೊಂದು ಪರಸ್ಪರ ಸಂಪರ್ಕಾಭಾವ. ಇಂತಹ ಆಡುವ ಮಾತುಗಳೆಲ್ಲ ಕನ್ನಡದ ವ್ಯಾಕರಣದ ಕಟ್ಟುಗಳಿಗೆ ನಿಲುಕತಕ್ಕವಲ್ಲ ಆಯಾ ಜನರ ಸಂಪರ್ಕ ಸಾನ್ನಿಧ್ಯ ಸಹವಾಸ ಗಳಿಂದಲೇ ಲಭಿಸತಕ್ಕವು. ಕರ್ನಾಟಕದ ಏಕೀಕರಣವಾದ ಬಳಿಕ ಕನ್ನಡಿ ಗರ ನಿಜವಾದ ಬಾಂಧವ್ಯವುಂಟಾದ ನಂತರ ಬೇಂದ್ರೆಯವರ ಕವಿತೆಗಳ ಬೆಳಕು ಇನ್ನೂ ಹೆಚ್ಚಾಗಿ ಬೀಳತಕ್ಕದ್ದಿರುವದು. ಆಗ ಅವರ ಕವಿತಾ ಶುಕ್ರನು ಪರಮ ತೇಜಸ್ವಿತೆಯಲ್ಲಿ ಬರುವನು. ಆವ ದಿನವೆಂಬುದನು ಖಗೋಲ ವೇತ್ತರೂ ಹೇಳಲಾರರು—

" ಯಥಾ ಕಾಷ್ಠಂಚ ಕಾಷ್ಠಂಚ ಸಮೇಯಾತಾಂ
ಮಹೋದಧೌ ।
ಸಮೇತ್ಯಚ ವ್ಯಪೇಯಾತಾಂ ಕಾ ತತ್ರ ಪರಿದೇವನಾ ।
ಋಣಾನುಬಂಧ ರೂಪೇಣ ಪತಿಪತ್ನಿ ಸುತಾಲಯಾಃ ।"

ಎಂಬ ವೇದಾಂತಿಗಳ ವಚನವನ್ನು ದಿನಾಲು ಕೇಳುತ್ತೇವೆ. ಜೀವಿ ಜೀವಿಗಳ ಸಂಯೋಗವು ನೀರಿನ ಪ್ರವಾಹದಲ್ಲಿ ತೇಲುತ್ತ ಬಂದ ಕೊರಡು ಗಳಂತೆ ಇಷ್ಟು ನಿಸ್ಸತ್ವವಾದುದೋ? ಇಷ್ಟು ಅರಸಿಕವಾದದ್ದೋ? ಛೆ, ಇರ ಲಿಕ್ಕಿಲ್ಲ. ತಾತ್ವಿಕರ ವಚನಕ್ಕೆ ಕವಿಯ ಕೋಮಲ ಹೃದಯವು ಸಂದೇಹ ವನ್ನು ವ್ಯಕ್ತಪಡಿಸುವದು. 'ಹಂಗು' ಎಂಬ ಕರುಳಿನ ವಚನವನ್ನು ನೋಡಿರಿ—

"ಹಂಗ ಹಿಂಗಿಸಲು ಬಂದೆಯೋ? ಭವವ
ಭಂಗಿಸಲು ಬಂದೆಯೋ?
ಜಗದಿ ಏತಕ್ಕೆ ಬಂದೆ ಎನ್ನ ರಂಗನಾಥಾ
ಮಂಗಲಕೆ ಮಂಗಲವೆ
ತಂಗಲು ಬಂದೆಯೋ? ನನ್ನ ತೊಡೆಯಮೇಲೆ ನನ್ನ
ಡಿಯ ತೊಟ್ಟಿಲಲ್ಲಿ ಕಾಲಿಟ್ಟ ಕಾರಣವೇನು?"
"ನನ್ನ ನನಸಿನ ನನೆಯೇ, ನನ್ನ ಕನಸಿನ ಕೆನೆಯೇ
ಹಣ್ಣಾಗುವೆಯ ಬಳಗದ ಬನದಲ್ಲಿ ಬೆಣ್ಣೆಯಾಗುವಿಯಾ
ಜಗದ ಹುಳಿ ತಿಳಿಯಲ್ಲಿ? ಸಂಸಾರವೆಂಬ ಕಡಲ ಉಕ್ಕಿನ
ತೆಕ್ಕೆಯಲ್ಲಿ ಕೂಡಿಬಂದ ಮರದ ತುಂಡುಗಳಂತಿರಬಹುದೇ?
ನೀನು ನನ್ನ ಪಡೆದುದು, ನಾನು ನಿನ್ನ ಹಡೆದುದು."

ಇಷ್ಟು ಜೀವಿಗಳ ಸಂಗಮವು ನೀರಸವಾಗಿರಲಿಕ್ಕಿಲ್ಲ. ಪ್ರೇಮ ಮಯ ಹೃದಯಕ್ಕೆ ಇಷ್ಟು ವೈರಸ್ಯವು ಸಹಿಸಲಸಾಧ್ಯ. ರವೀಂದ್ರನಾಥರ 'ಪೋಷ್ಟಮಾಸ್ಟರ'ನ ಕಥೆಯಲ್ಲಿ ಅಗಲಿದ ಹುಡಿಗೆಯಿಂದ ಹೇಗೋ ಮಾಸ್ತ ರನು ವೇದಾಂತ ವಚನಗಳಿಂದ ತನ್ನ ಹೃದಯವನ್ನು ಸಮಾಧಾನ ಪಡಿಸಿ ಕೊಳ್ಳುತ್ತಾನೆ. ಆದರೆ ಎಳೆಯ ಬಾಲಿಕೆಯು ಅಗಲಿದ ಆ ಅಣ್ಣನಿಂದ ಕಾತರತೆಯನ್ನು ಪಡೆದು ತನ್ನ ಕೋಮಲ ಹೃದಯವನ್ನು ಈ ಜಡವೇದಾಂತ ವಚನಗಳಿಂದ ಹೇಗೆ ಸಂತೈಸಬೇಕು? ಅಥವಾ ಅವಳಿಗೆ ಇವು ತಿಳಿಯುವ ಬಗೆಯಾದರೂ ಎಂತು?

ಸಾಮಾನ್ಯವಾದ ಸಂಸಾರದ ಚಿತ್ರಗಳಲ್ಲಿ ರಮ್ಯ ಕಲ್ಪನೆಗಳನ್ನು ತಂದು ಚಿತ್ರಿಸಬಲ್ಲ ಶಕ್ತಿಯು ರವೀಂದ್ರರಂತೆ ನಮ್ಮ ಬೇಂದ್ರೆಯವರಲ್ಲಿಯೂ ಒಡ

ಮೂಡಿದೆಯೆಂದು ಕನ್ನಡಿಗರಾದ ನಾವು ಅಭಿಮಾನದಿಂದ ಹೇಳಿಕೊಳ್ಳ ಬಹುದಾಗಿದೆ.

ಅವರ ಐವತ್ತು ವರುಷದ ಹುಟ್ಟು ಹಬ್ಬವನ್ನು ಅವರ ಗೆಳೆಯರು ಆನಂದದಿಂದ ಆಚರಿಸುವ ಮಂಗಲ ಸಂದರ್ಭದಲ್ಲಿ ನಮ್ಮದೊಂದು ಶುಭ ಸಂದೇಶವು ಇರಲೆಂದು ಆನಂದರಿಂದ ಒಂದೆರಡು ನುಡಿಗಳನ್ನು ಬರೆದಿದ್ದೇವೆ. ಶ್ರೀ ಬೇಂದ್ರೆಯವರು ಸಾಯನಸಿಂಹ ಲಗ್ನದಲ್ಲಿ ಹುಟ್ಟಿದ್ದಾರೆ. ಸಂಸಾರದ ಅನೇಕ ಯಾತನೆಗಳನ್ನು ಅವರು ಸಿಂಹಸದೃಶ ಪರಾಕ್ರಮಶಾಲಿಗಳಾಗಿ ಎದುರಿಸಿ, ಕನ್ನಡ ನುಡಿಗೆ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯವಾಗಿದೆ. ಅವರ ಮಾತೃಭಾಷೆ ಮರಾಠಿಯಾಗಿದ್ದರೂ ಸಾಕು ತಾಯಿಯಾದ ಕನ್ನಡ ಋಣವನ್ನು ತೀರಿಸುವದಕ್ಕಾಗಿ ಆಕೆಯ ಹೊಟ್ಟೆಯ (ಔರಸ) ಮಕ್ಕಳಿಗಿಂತಲೂ ಹೆಚ್ಚಾಗಿ ದುಡಿದು ತಮ್ಮದೊಂದು ಮುತ್ತಿನ ಕಂಬನಿ ಮಾಲೆಯನ್ನು ಮಾಡಿರುವರು. ರವೀಂದ್ರರು ನುಡಿದಂತೆ ದೇವಿಯು ಉಡುಗಳು ಅರ್ಪಿಸಿದ ಕಿರಣಾಭರಣವನ್ನು (ಪೈಜಣ) ಕಾಲಲ್ಲಿ ಇಟ್ಟುಕೊಂಡು ಬೇಂದ್ರೆಯವರ ಮುತ್ತಿನ ಮಾಲೆಯನ್ನು ಕೊರಲಲ್ಲಿ ಧರಿಸಿದ್ದಾಳೆ.

# ರತಿ ದರ್ಶನ

**ಲೇ:— ಎಚ್. ಜಿ. ಜೋಶಿ, ಬಿ. ಎ. (ಆನರ್ಸ)**

" Love is a divine sentiment "

ಕಾಮವು ಜಗತ್ತಿನ ಮೂಲ ತತ್ವ. ರತಿಯು ಪ್ರಪಂಚದ ಸಂಕಲ್ಪ. ಈಶ್ವರನು ಕಾಮಿಸಿದನೆಂದೆ ಲೋಕದೃಷ್ಟಿ. ರತಿಯು ರಮಿಸುವಳೆಂದೇ ಜೀವನ ತುಷ್ಟಿ. ಒಂದು ಜೀವನ ಕಾರಕ ಇನ್ನೊಂದು ಪೂರಕ' ರತಿಯಿಲ್ಲದ ಕಾಮ ವಿಕಾರ ಕಾಮನಿಲ್ಲದ ರತಿ ವಿಕೃತಿ. ಕಾಮರತಿಯ ಸಂಗಮವೇ ಜಗತ್ತಿನ ಸುಕೃತಿ ಆವಿರ್ಭಾವವು ಅಭಿವೃದ್ಧಿಗಾಗಿ.) ಇದು ಜಗತ್ತು ಎನ್ನಬೇಕಾದರೆ ಆವಿರ್ಭಾವನ ಅಭಿವೃದ್ಧಿಗಳು ಅದರ ಆಕಾಂಕ್ಷೆಗಳಾಗಿ ಜಾಗ್ರತವಿರಬೇಕು. ಕಾಮ ರತಿಯರ ವಿಪ್ರಲಂಭ ಜಗದ ಹೊರಗಿನ ಮಾತು, ನಮ್ಮ ಪುರಾಣದಲ್ಲಿ ಅವನು ಸುಟ್ಟುಕೊಂಡು ಸತ್ತರೂ ರತಿಯೊಡನೆ ಅನಂಗನಾಗಿ ಮೈಗೂಡಿ ಕೊಂಡಿದ್ದಾನೆ. ಈ ಕಾಮ ರತಿಯರ ಆನಂದ ವಿಲಾಸವೇ ಪ್ರೇಮ. ಕಾಮ ವೆಂದರೆ ಬರಿ ಭುಜಂಗನ ವಿಕೃತ ಮನೋಭಾವನೆಯಲ್ಲ ರತಿಯೆಂದರೆ ಅದನ್ನು ಅಣಿಗೊಳಿಸುವ ಪಾಶವೀ ಆಶೆಯೂ ಅಲ್ಲ. ಅವೆರಡು ಜಗತ್ತಿನ ಕಲ್ಯಾಣ ಶಕ್ತಿಗಳೆ. ಪ್ರೇಮಾನುಭಾವಿ ಕಾಲಿದಾಸನು "ಸ್ನೇಹಸ್ಯ ಲಲಿತೋ ಮಾರ್ಗಃ ಕಾಮ ಇತ್ಯಭಿಧೀಯತೆ" ಎಂದಿದ್ದಾನೆ. Love is divine sentiment ಎನ್ನುವ ಪ್ರೇಮದ ಕಲ್ಪನೆಯಾದರೂ ಮೇಲೆ ವಿವೇಚಿಸಿದಂತೆಯೇ ಇದೆ ಎಂದು ಹೇಳಬಹುದು. ಈ ಮಾತಿನಲ್ಲಿಯೂ ಕಾಮರತಿಯರ ಸಾಮರಸ್ಯ ಬೇಕೆನ್ನುವ ಧ್ವನಿಯಿದೆ. ಅಂತೆಯೇ ಕಾಮರತಿಯರ ಸಾಮರಸ್ಯವನ್ನು ಪ್ರೇಮವೆಂದು ಕರೆಯಬಹುದು. ಪ್ರೇಮ ಕವಿಶಲೆ:—

"ಇಂದು ಪ್ರೇಮ ಹೊಲೆಗಿಳಿದು ಬಿಟ್ಟಿದೆ" ಎಂದು ಬರೆದ ಮಾತಿನಲ್ಲ ಇಂದಿನ ಪ್ರೇಮವನ್ನು ಒರೆಗೆ ಹಚ್ಚಿದ್ದಾನೆ.

"ಕಾಮವು ಬರೀ ದೇಹ ದಾಹವಾಗಿ ಬಂದ ಇಂದ್ರಿಯ ಇಚ್ಛೆಯಲ್ಲ. ರತಿಯು ಈ ದೇಹ ಮೋಹವನ್ನೇ ನೆನದು ತಣಿದ ವಿರಕ್ತ ಸೌಂದರ್ಯವಲ್ಲ" ಎನ್ನುವದೇ ಶಲೆಯ ಅರ್ಥವಾಗಿರಬೇಕು.

ಜಗತ್ತಿನಲ್ಲಿ ಜೀವನದ ಅರ್ಥಮಾಡಿಕೊಳ್ಳುವ ಶಕ್ತಿ ಮಾನವನೊಬ್ಬನಿಗಿದೆ. ಅಂತೆಯೇ ಪ್ರೇಮ ವಿಚಾರವು ಅವನ ವಿಷಯಕ್ಕೆ ವಿಶೇಷವಾಗಿದೆ.

"ಋತುವಿನೊಂದು ಪ್ರೇರಣೆ ಕೂಡುವುದು ಬಲ್ಲದೇನು ಪಶುವು." ರತಿಯು ಸೆರಗು ತೆಗೆದು ನಿಲ್ಲಬಾರದು. ಕಾಮನೂ ಕೂಡ ರತಿಯಲ್ಲದಲ್ಲಿ ಕಣ್ಣೆತ್ತಬಾರದು.

" ಜಗವೆ ದೇವತನುವೆಂದು ಮಣಿದೆ ನೀನೇನು ನಿನ್ನಮತಿಯು
.... .... .... .... .... ....
ಭಕ್ತ ನೀನು ಅನುರಕ್ತ ದಿವ್ಯದಲಿ ಉಳಿದ ಕಣ್ಣ ಭವಿಯು.
ಎಲ್ಲಕಡೆಗೂ ಚೈತನ್ಯಲೀಲೆ ಕಂಡವನೆ ನೀನು ಕವಿಯು.

ಜೀವ ಕವಿಯಾಗಲು ಬೇಕಾದ ಅರ್ಹತೆಯಿದು. ವಿಶ್ವವೆಲ್ಲ ಚೈತನ್ಯಮಯವೆನ್ನುವ ಭಾವನೆ ಹೃದಯದಿಂದ ಹುಟ್ಟಿ ಬರಬೇಕು. ಆಗ ತೋರುವದು ಗಂಡು ಹೆಣ್ಣುಗಳಲ್ಲಿ ಒಂದು ಸತ್ಯ ಇನ್ನೊಂದು ಸೌಂದರ್ಯ. ಸೌಂದರ್ಯೋಪಾಸಕರಿಗೆ ಹೆಣ್ಣನ್ನು ಕಾಣದೆ ಬಣ್ಣಿಸದೆ ಸತ್ಯಸಾಧನೆಯೆಂತಾಗಬೇಕು? ( ಕವಿಗೆ ಹೆಣ್ಣು ಬೇಟದಾಟದ ಒಡವೆಯಲ್ಲ. ತನ್ನ ಸೌಂದರ್ಯದೇವಿಯ ರಮ್ಯವಾದ ರೂಪು ಅದು. ) ಅಂತೆಯೇ ಮಹಾಕವಿಯು ಕೃತಿಯಲ್ಲಿ ಅದು ಶೃಂಗಾರವಿರಲಿ, ಕರುಣ ವಿರಲಿ, ಅಲ್ಲಿ ಹೆಣ್ಣು ರತಿ, ಸೌಂದರ್ಯದೇವಿ ಇಂತಹ ಉದಾತ್ತ ಭಾವನೆಯುಳ್ಳ ಕವಿಯಿಂದಲೇ ಪ್ರೇಮಕಾವ್ಯ (Love Poetry) ಹೊಮ್ಮಿ ಬರುತ್ತದೆ.

ಇಲ್ಲಿನ ಪ್ರೇಮವಿಚಾರ ಆದರ್ಶ ಪ್ರೇಮದ್ದು ಅಮರ ಪ್ರೇಮದ ಹಾದಿಯಲ್ಲಿಯದು. ಕವಿಯ ಕೃತಿಯಲ್ಲಿ ಇಂತಹ ಅಲೌಕಿಕತೆಯನ್ನು ಕಾಣಬೇಕಾದರೆ ಜೀವನದ ರೀತಿಯಿಂದ, ಪ್ರೇಮಪಾರಮ್ಯ ದರ್ಶನ ವಾಗಬೇಕು. ಲೇಖದ ಕ್ರಮವಾದರೂ ಹಾಗೆಯೇ ಇದೆ. ಶ್ರೀ ರವೀಂದ್ರರು "ಹೆಣ್ಣೆ, ನೀನು ದೇವರಿಂದ ಮಾತ್ರ ರೂಪುಗೊಂಡಿಲ್ಲ. ಗಂಡಿ ಹೃದಯದಿಂದಲೂ ರೂಪುಗೊಂಡಿರುವಿ.

" O women, you are not meraly the
hand work of God, but also of man "

ಎನ್ನಬೇಕಾದರೆ ಅದರಲ್ಲಿ ಗಂಡಿನ ಕಾಮದೃಷ್ಟಿಯಿಲ್ಲ. ·ಗಂಡು ಹೆಣ್ಣನ್ನು ಸೌಂದರ್ಯಶಕ್ತಿಯೆಂದರಿತು, ಅದನ್ನು ಮೆಚ್ಚಿ ಆರಾಧಿಸುವಾಗ ತನೂ ಚಲುವು ತುಂಬಿರಬಹುದು. ದೇವರು ದೇವನೇ ಆದರೂ ಅವನಿಗೆ ಪುಷ್ಪ ಪ್ರಸಾಧನೆ ಭಕ್ತನ ಬಯಕೆಯುಲ್ಲವೆ? ಶ್ರೀ. ಬೇಂದ್ರೆಯವರು ಕೂಡ ಪ್ರೇಮಜೀವಿಗಳು. ಅವರು ಮೇಘದೂತದಲ್ಲಿ ಕವಿ ಕಾಳಿದಾಸನನ್ನು ಕುರಿತು ಹಾಡಿದ ಮಾತುಗಳು ಅವರ ಯೋಗ್ಯತೆಯವೇ ಎಂದು ಹೇಳಬಹುದು. ತಮ್ಮ ಹೃದಯದ ಶಕ್ತಿಯನ್ನೇ ಕಾಳಿದಾಸನಿಗೆ ರೂಪಿಸಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಕವಿಯು ಪ್ರೇಮಯೋಗದ ಪ್ರಭೋದೆಗೆ ಕಾವ್ಯ ವೊಂದೇ ಸಾಧನೆ. ಹೀಗಿದ್ದರೂ ಅಂಬಿಕಾತನಯರನ್ನು ಕಾಣಲು ಬೇರೆ ಮಾರ್ಗಗಳಿವೆ. ಆದರೂ ಕಾವ್ಯಮಾರ್ಗವೇ ಸುಗಮವಾದುದು.

ಹೆಣ್ಣಿನ ರೂಪುವಿಲಾಸಗಳ ಬಣ್ಣನೆ ಗಂಡಿಗೆ ಬೇಕಾಗಿರುವದು, ಕೇವಲ ಕಾಮದಾಹದಿಂದಲ್ಲ. (ಇಲ್ಲಿ ಕಾಮ ಎಂದರೆ ಬೇಟ ಕೆಳೆಯುವ ಒಂದು ವಿಕೃತ ಆಕರ್ಷಣ ಶಕ್ತಿ ಎಂದು ಉಪಯೋಗಿಸಿಕೊಂಡಿದೆ.)ಲೌಕಿಕ ರೀತಿಯಲ್ಲಿಗಂಡು ಹೆಣ್ಣಿನ ಸಂಬಂಧವೇ ಬೇರೆಯಿರುತ್ತದೆ. ಕವಿಯು ಹೆಣ್ಣಿನೊಡನೆ ಸರಸ ವಾಡಿದರೂ ಕೆಸರಿನಲ್ಲಿ ಬೆಳದ ಕಮಲದಂತೆ ಬೀದಿಯಲ್ಲಿ ಹೋಗುವ ಹೆಣ್ಣನ್ನು ಕಣ್ಣು ನಾಟಿಸಿ ನೋಡುತ್ತ ನಿಂತರೂ ಕವಿಕಾಮಿಯಲ್ಲ. ಅವನು ರಸಋಷಿ (ಬೇಂದ್ರೆಯವರು ರಸಋಷಿಗಳೆಂದು ಆಗಲೇ ನನ್ನ ಗೆಳೆಯರು ತಮ್ಮ ಲೇಖ ನದಲ್ಲಿ ತೋರಿಸಿದ್ದಾರೆ.) ಲೌಕಿಕತೆಯನ್ನೆಲ್ಲ ಮರೆವಿನಲ್ಲಿ ನೂಕಿ ಅಲೌಕಿಕ ಹೆಣ್ಣುಗಂಡಿನ ಪ್ರೀತಿಯ ಹಾಡು ಹೇಳುವ ಕವಿಗೆ ಕಣ್ಣೇಬಾಯಿ ದೃಷ್ಟಿಯೇ ರಸನೆ, ಚಲುವೆ ಉಣ್ಣಲು. (ಅನ್ನ) ಹೀಗೆ ಕವಿ ಉಂಡಷ್ಟು ಹೆಣ್ಣನ್ನು ಕಾಮಿ ತನ್ನ ಜೀವಿತದಲ್ಲಿ ಕಂಡಿರಲಿಕ್ಕಿಲ್ಲ. ಅಂತೆಯೆ ಕವಿಯ ಹೆಣ್ಣಿನಮಾತು ಗಳು ಕಿವಿಗೆ ಹಿತ, ಕೇಳಿದರೆ ಮನ ಹಿಗ್ಗುತ್ತದೆ. ಕಾಮಿಯದು ಹಾಗಲ್ಲ ಅವನಮಾತು ಕರ್ಕಶ ಮನಸ್ಸಂಕೋಚಕ್ಕೆ ಕಾರಣವಾದವುಗಳು. ಕವಿಕಾವ್ಯ ಬರೆಯುವಾಗ ನಮ್ಮ ಲೋಕದವನಲ್ಲ ಎನ್ನುವ ಮಾತು ಅವನು ಹೆಣ್ಣಿನ ರೀತಿನೀತಿಗಳನ್ನು ಹೇಳುವಾಗ ನಮಗೆ ಕಲ್ಪನೆ ಬರದೆ ಹೋದರೂ, ಅವನು

ಕಾಮಿ, ವಿಟನೆಂಬ ಕಲ್ಪನೆ ಬರದಿರುವದೇ ಅದಕ್ಕೆ ಸಾಕ್ಷಿ. ಅಂತೆಯೆ ಅವನು ತೋರಿಸಿದ ಹೆಣ್ಣುಗಳಲ್ಲಿ ಅದರ ಒಲವಿನಲ್ಲಿ ರತಿ ಮೈದಳೆದು ಮಾಡಿಬಂದಿದೆ- ಎಂದು ತೋರಬೇಕು. / ಶ್ರೀಮಾನ್ ಬೇಂದ್ರೆಯವರ ಕಾವ್ಯದಲ್ಲಿ ಹೆಣ್ಣು, ಜೀವನದಿಂದಲೆ ಅವತರಿಸಿದ್ದರೂ ರತಿಯು ರಸದಲ್ಲಿ ಮಿಂದು ಮುಕ್ತಿ ಸತಿಯಾಗಿದ್ದಾಳೆ. ಹೆಣ್ಣು ಆದರ್ಶವು ತನ್ನ ಧ್ಯೇಯವನ್ನು ಸಫಲಗೊಳಿಸಿ ಕಾಣಿಸಿಕೊಂಡಿದೆ. ಅಲ್ಲಿಯ ಹೆಣ್ಣು ಸಂಸಾರದ ಅಗ್ನಿಕುಂಡದಲ್ಲಿ ಎದ್ದ ಪವಿತ್ರಜೀವಿ.

ಬೇಂದ್ರೆಯವರ ಹೆಣ್ಣು ರಸದಲ್ಲಿ ಮಿಂದು ಪ್ರತಿಭಾಭವನದಲ್ಲಿ ನಿಂತು ರಸಕಾಮಿಗಳ ಕುತೂಹಲವನ್ನು ತಣಿಸುತ್ತದೆ. ಅಂತೆಯೇ ಅವರ ಕಣ್ಣಿನಲ್ಲಿ ಕಂಡ ಹೆಣ್ಣು ಎಂತಹದು ಎಂದು ಹೇಳುವ ಮಾತೇ ಲೇಖನದ ಉದ್ದೇಶ. ಕವಿ ಹೆಣ್ಣಿನಲ್ಲಿ ರತಿಯನ್ನು ಕಂಡಿದ್ದಾನೆ. ರತಿ ಸೌಂದರ್ಯ-ಶಕ್ತಿ! ಸತ್ಯಭಕ್ತಿ! ಸಾನಂದ ಶುಕ್ತಿ! ಆದರ್ಶ ಹೆಣ್ಣು. ಶೃಂಗಾರದ ಕಣ್ಣು. ಜೀವನದಲ್ಲಿ ಸಮಗ್ರ ಸ್ವಾರಸ್ಯವು ಉದಿತವಾಗಬೇಕಾದರೆ, ಹೆಣ್ಣು ಜೀವನದಲ್ಲಿ ರತಿಯ ಆವಿರ್ಭಾವವಾಗಬೇಕು. ಹೆಣ್ಣಿನ ಒಲವು ಚಲವುಗಳಲ್ಲಿ ಜೀವನಸಂತೋಷವು ಹುದುಗಿಕೊಂಡಿದೆ ಎನ್ನುವ ಮಾತನ್ನು ಎಲ್ಲಿಯೂ ಬೇಂದ್ರೆಯವರ ಕವನಗಳಲ್ಲಿ ಕಾಣಬಹುದು.

ಶೃಂಗಾರವು ಕೇವಲ ಹುಡುಗಾಟವೂ ಅಲ್ಲ, ಗಂಡುಹೆಣ್ಣುಗಳ ಲೈಂಗಿಕ ಚೇಷ್ಟೆಯೂ ಅಲ್ಲ, ಅದು ಸುಖೀಜೀವನದ(Happy life)ಹರುಷ ವಿಲಾಸವೊಂದು ಗಂಡುಹೆಣ್ಣಿನ ಸುಖದ ಸಂಸಾರವೇ ಜಗತ್ತಿನ ಜೀವನದಲ್ಲಿ ಹಿರಿದಾಗಿದೆ. ಹೆಣ್ಣಿನಲ್ಲಿ ತನ್ನ ಗಂಡಿನ ಅಡಿಗೆ ಅರ್ಪಿಸುವ ಒಂದು ಆತ್ಮಾರ್ಪಣ ಬುದ್ಧಿಯಿದೆ. ಗಂಡಿಗೆ ಅದರ ಹಿಗ್ಗಿಗಾಗಿ ಅದರೊಡನೆ ಕೂಡಿ ನಲಿಯುವ ಒಂದು ಗುಣವಿದೆ. ಹೆಣ್ಣು ಹೃದಯದಿಂದ ಗಂಡಿಗೆ ಬಾಗಿದರೂ ‘ಅಬಲೆ’ ಯಲ್ಲ. ತನ್ನ ಪ್ರಿಯನ ದಾಸಿಯಾದರೂ ಸ್ವಾತಂತ್ರಮೂರ್ತಿಯಾಗಿರಬಹುದು. ದ್ರೌಪದಿ ಅಗ್ನಿಪುತ್ರಿ ಚಂಡಿಯಾದರೂ ಮನೆಯಲ್ಲಿ ಗೃಹಿಣಿ, ನೀರೆ, ಸಖಿ, ಪ್ರೇಯಸಿ ಪ್ರಿಯತಮರಿಗೆ ಈ ಮೂಲ ಶಕ್ತಿಯ ಪ್ರವಾಹದಲ್ಲಿ ತಮ್ಮ ಜೀವನ ನೌಕೆಯನ್ನು ತೇಲಿಸಿಕೊಂಡು ಹೋಗುವ ಶಕ್ತಿ ಇದ್ದರೆನೇ ಆ ದಾಂಪತ್ಯದಲ್ಲಿಯ ಶೃಂಗಾರ ತನ್ನ ಸೊಗಸನ್ನು ತೋರುತ್ತದೆ.

ಶೃಂಗಾರವು ಪ್ರಣಯಿಗಳ ಪ್ರಾಣಗೀತ. ಅಲ್ಲಿ ತಮ್ಮ ಜೀವನವನ್ನು ದಿವ್ಯ ಮಾಡುವ ಒಂದು ಶಕ್ತಿ ಸಂಪತ್ತನ್ನು ದಂಪತಿಗಳು ಕಂಡುಕೊಳ್ಳುವರು.

ಬೇಂದ್ರೆಯವರ ಕಾವ್ಯವು ಸಾಮಾನ್ಯ ಜೀವನದಿಂದೆದ್ದಂತಿದ್ದರೂ ದಿವ್ಯ ಜೀವನಕ್ಕೆ ಪ್ರೈಚಾಚಿ ನಿಂತಿದೆ. ಪ್ರಣಯವಿಲಾಸಗಳನ್ನು ಜೀವನದಿಂದ ಒತ್ತಿ ಹೇಳಿದರೂ ಆದರ್ಶದ ಸಂದೇಶ ಅದರೊಡನೆ ಧ್ವನಿಗೊಡುತ್ತಲಿದೆ. ಅವರಲ್ಲಿ ಪ್ರಣಯ ವಿಲಾಸಗಳ ಬಗ್ಗೆ ಇರುವ ಕಲ್ಪನೆ ಕಾಣಿಸಿದ ಅವರ ಮಾತುಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

"ಪಾಶ್ಚಿಮಾತ್ಯರಲ್ಲಿ ಕುರುಡಕಾಮನಿಗೆ ಸ್ವೈರಸಂಚಾರವಿದ್ದರೂ ರತಿಗೆ ಋತುಋತುವಿಗೂ ಮರಣಭಯತಪ್ಪಿದ್ದಲ್ಲ. ನಮ್ಮಲ್ಲಿಯೇ ಕಾಮನು ಅನಾದಿಕಾಲದಿಂದ ಅನಂಗನಾಗಿರುವದರಿಂದ ರತಿಯ ವಿಲಾಪಾಶ್ರುಗಳಿಂದಲೇ ಪ್ರೇಮವಲ್ಲರಿ ಕಮರಬೇಕು. ಇಲ್ಲವೆ ದೈವಕೃಪೆಯಿಂದ ಚಿಗುರಬೇಕು ಇಲ್ಲವೆ ಪತಿಯೊಲವಿಗೆ ಪಣತೊಟ್ಟ ಸತಿಯ ಸಾಹಸವೆಲ್ಲ ತವದ ವೈರಾಗ್ಯ ವಿಲಾಸವಾಗಿ ಬೂದಿಯೊಳಗಿಂದಲೇ ಅಡಗಿದ್ದ ಬೆಂಕಿಯಂತೆ ಕೊನೆಗೆ ಏಳಬೇಕು. ಪಾಶ್ಚಿಮಾತ್ಯರ ಸರಸವು ವಿರಸದ ಪ್ರಸ್ತಾವನೆ ನಮ್ಮ ರಸವೇ ನಿರಸ ಹೀಗೆ ಸಾಮಾನ್ಯವಾಗಿ ತೋರಿದರೂ ಹಿಂದಿಯರ ವೈವಾಹಿಕ ಜೀವನವೇ ಸಂಸ್ಕಾರವಂತರ ಮನೆಗಳಲ್ಲಿ ಜೀವಮಾನದುದ್ದಕ್ಕೂ ಪ್ರಣಯಪರಿಪಾಕದ ರೀತಿಯೆ ಆಗಿದೆ."

ಇಂದಿನ ಜೀವನದಲ್ಲಿಯ ಪ್ರಣಯವಿಲಾಸದ ಒಂದು ಆದರ್ಶ ಕನಸನ್ನು ಬೇಂದ್ರೆಯವರ ಕಾವ್ಯ ಕನವರಿಸುತ್ತಿದೆ. "ಕಾಮಕಸ್ತೂರಿ"ಯಲ್ಲಿ ತೋರಿದ ಶೃಂಗಾರ ಸಖೀಗೀತದಲ್ಲಿ ಹಣ್ಣುಗೊಂಡು ಮುಂದಿನ ಕವನಗಳಲ್ಲಿ ಅಮೃತಮಯವಾಗಿದೆ. ಅಲ್ಲಿಯ ವಿಲಾಸಗಳ ಪರಿಗಳನ್ನು ಬಿಡಿಬಿಡಿಸಿ ನೋಡುವದು ಬೇಂದ್ರೆಯವರ ಶೃಂಗಾರಸಾಗರಮಥಿಸುವವರ ಕೆಲಸ.

ಕವಿಗೆ ಹೆಣ್ಣಿನ ಜೀವನವು ಬರಿ ವಿನೋದಕ್ಕಾಗಿ ತೋರುವದಿಲ್ಲ. ಅದು ಅವನ ಜೀವನದ ರಮ್ಯತೆಗೂ ಸಹಾಯಕವಾಗಿ ಕಾಣುವದು. ಹೆಣ್ಣಿನಲ್ಲಿ ಲೋಕ ಸಾಂತ್ವನದ ಒಂದು ಮುಗ್ಧ (Innocent) ಮಾಯೆ ಇದೆ. ಈ ಮಾಯೆಯನ್ನು ಅರಿತರೆ ಹೆಣ್ಣು ಉಪನಿಷತ್ತಿನ ಉಷೆ. ಅದುವೆ ಕವಿದೃಷ್ಟಿಯ ಸತ್ಯತೆ. ಇದು ಕವಿಗಳಾದವರಿಗೆಲ್ಲ ಇದೆ ಎಂದು ಹೇಳಿದರೆ ಇಲ್ಲದವರು ಕವಿತೆ ಬರೆದರೂ ಕವಿಗಳಲ್ಲ ಎಂದಂತಾಯಿತು. ಹೆಣ್ಣಿನ ವಿಷಯದಲ್ಲಿ ಹೃದಯದಲ್ಲಿ ಅನುಕಂಪಬೇಕು. ಅದನ್ನು ದೇವಶಕ್ತಿ ಎಂದು ತಿಳಿದು ಅನುನಯಿ

ಸಲು ಭಕ್ತಿಬೇಕು. ಅದರ ಚಪಲತೆ ಮೀರಿ ರಮ್ಯಜೀವನವು ಪ್ರತಿಗಾಮಿ ಯಾದರೆ ಅದನ್ನು ನಿಯಂತ್ರಿಸಲು ಪುರುಷಶಕ್ತಿಬೇಕು.

ಶ್ರೀ. ಬೇಂದ್ರೆಯವರ ಕಾವ್ಯ ನಿರೀಕ್ಷಣೆಯಲ್ಲಿ ಒಂದು ಉದಾತ್ತಭಾವನೆಯು ತೋರುವದು. (ಹೆಣ್ಣಿನ ಬಗೆಗೆ) ಹೆಣ್ಣನ್ನು ತನ್ನ ಅಮೃತ ಸಾಮತಿಯಿಂದ ಕಂಡು ಅದರ ದಿವ್ಯತೆಯನ್ನು ಜಗತ್ತಿಗ ತೋರಿಸುತ್ತಾರೆ. ಶ್ರೀ. ಬೇಂದ್ರೆಯವರು ಕಾವ್ಯದಲ್ಲಿ ಹೆಣ್ಣನ್ನು ಕಂಡುದು ಮೂರುತೆರನಾಗಿ.

(೧) ಕಾಮಕಸ್ತೂರಿ ನಾದಲೀಲೆಯ ಕೆಲವು ಕವಿತೆಗಳಲ್ಲಿ ಹೆಣ್ಣು ಪ್ರಣಯಿನಿ, ಚಂಚಲತೆ ಇದ್ದ ಚಲಮುಲದ ನೀರೆ.

(೨) ಸಖೀಗೀತದಲ್ಲಿ ಹಾಗು ಇನ್ನಿತರ ಕೆಲವು ಕವನಗಳಲ್ಲಿ ಅವಳು ಎದೆಯನ್ನೆ ಸಖೀ. ಅಲ್ಲಿಯ ಪ್ರಣಯ ಸ್ನೇಹ(ಸಖ್ಯ)ದಿಂದ ವ್ಯಾಪ್ತವು. ಸಖೀಗೀತದಿಂದಲೇ ಎದ್ದ ಧ್ವನಿ ಹಿಂದಿನ ಮುಂದಿನ ಕವನಗಳಲ್ಲಿ (ಬಿಡಿಕವನ) ಕಾಣುವದು —

(೩) ಮೂರನೆಯದಾದ ಮಾತೃಶಕ್ತಿಯು. ಕವಿಯ ಹೃದಯ ಪಕ್ವವಾದಾಗ ಹೆಣ್ಣೇ ದೈವತವಾಗಿ ತೋರುವದೋ? ಇಲ್ಲವೆ--ಕವಿ ತಾನು ಭಾವ ಸಮಾಧಿಯಲ್ಲಿರುವಾಗ ಬ್ರಹ್ಮನಂತೆ ತನ್ನ ಮಾನಸ ಪುತ್ರಿಯನ್ನೇ ಮನದನ್ನೆ ಎಂದು ಭಾವಿಸುವನೋ? ಆದರೆ ಲೌಕಿಕದಲ್ಲಿಯ ಯಾವ ಪಾಪಲೇಪವೂ ಕವಿಗೆ ಇಲ್ಲ. ಬೀದಿಯಲ್ಲಿ ಹೋಗುವಾಗ ಕಣ್ಣು ಹೆಣ್ಣಿನ ಸನಿಹಕ್ಕೆ ಸುಳಿದರೆ ಸಾಕು ಅದರ ಹತ್ತಿರದವರು ಕಣ್ಣು ಕಿಸಿಯುವರು. ಕವಿ ಕಾವ್ಯದಲ್ಲಿ ಅವಳ ಮುಂಜೆರಗಿನ ಮರೆಯಲ್ಲಿಯ ಎದೆಯನ್ನು ತೆರೆದು ಎಲ್ಲರಿಗೂ ತೋರಿಸಿದರೂ ಅದು ಹಿತವೆಂದು ಕೆರಳಿದವರೆ ಅರಳಿದುದುಂಟು. ಕವಿಯು ಅಂತೆಯೇ ಯಾವ ಅಪವಾದದ ಸುಳಿವಿಗೂ ನಿಲುಕದ ವಿಚಿತ್ರ ವಿಟಜಾತಿಯವನು. ಅವನ ಕಾರ್ಯ ರೂಪಾರಾಧನೆ, ಸ್ವರೂಪನಿದರ್ಶನೆ. ಅದಕ್ಕೆ ಎಂತಹ ಕುಲೀನ ಹೆಣ್ಣನ್ನೂ ಕೂಡಾ ತನ್ನ ಕಾವ್ಯರಚನೆಗಾಗಿ ಅವನು ಕಣ್ಣಿಟ್ಟುನೋಡಿ ಅವಳ ಉಡಿಯ ನಿರಿಗೆಗಳನ್ನು ಸಡಿಲಿಸಿ ತೊಡಿಸಿ ಅಂದಚಂದಗಳು ತನಗೊಪ್ಪುವಂತೆ ಸಿಂಗರಿಸುವನು. ಇದು ಕವಿಯ ರತಿಕ್ರೀಡ. ಸೌಂದರ್ಯವಿಲಾಸ. ಆದರೆ ಇವನ ರತಿ ಯಾವಾಗಲೂ ನಿರ್ದುಷ್ಟವಾದುದು. ಇಂತಹದೇ ದೃಷ್ಟಿ ಬೇಂದ್ರೆಯವರಲ್ಲಿದೆ.

“ ಮಲ್ಲಿಗಿ ಮಂಟಪದಾಗ
ಗಲ್ಲಗಲ್ಲ ಹಚ್ಚಿ ಕೂತು
ಮೆಲ್ಲದನಿಲೆ ಹಾಡೋಣಂತ! ಯಾರಿಗೂ ಹೇಳೋಣ ಬ್ಯಾಡ.

ಎನ್ನುವ ಕವಿ

“ ನಿನತೆಕ್ಕಿಯೊಳಗ ಸಿಕ್ಕೈತಿ ಸುಗ್ಗಿ ಸ್ವರ್ಗಕ್ಕ ಸಾಕು
ತೋಳೆರಡS
ಏನೈತಿ ಸುಗ್ಗಿಯಾ ಹುರುಡ.” —ಅನ್ನುವ

ಪ್ರಣಯ ಮಿಲನದಲ್ಲಿ ಅಷ್ಟು ಸುಖ ತೋರುತ್ತದೆ. ಶೃಂಗಾರ ಜೀವನದ ಸೊಗಸು ಮಾನವೀ ಜೀವನದಲ್ಲಿ ಸ್ತಿಮಿತತೆಯನ್ನು ಕಾಯ್ದು ಜೀವನವನ್ನು ರಮ್ಯಮಾಡುತ್ತದೆ. ಆದರೆ ಅದರಲ್ಲಿ ಹೊಂದುಗೂಡಿದ ಎರಡು ಜೀವಿಗಳಲ್ಲಿಯ ಪರಿಶುದ್ಧ ರತಿಯ ನಿಷ್ಠುರ ವಿಲಾಸವಿರಬೇಕು. ಅಂದರೆ ಶೃಂಗಾರವು ಪ್ರಣಯ ವಿಲಾಸವಾಗುವದು ಇಲ್ಲದಿದ್ದರೆ ಜೀವನವೇ ಅರಣ್ಯವಾಸವೆನಿಸುವದು. ಭುಜಂಗ ಮಾರ್ಗದಲ್ಲಿ ನಡೆವ ರತಿಗೆ ಆದರ್ಶದಲ್ಲಿ ಎಡೆಯಿಲ್ಲ. ಅದರ ಕೇರಿಯೇ ಬೇರೆ. ಅಂತೆಯೇ ಸೂಳೆಗೇರಿಗಳು ಹೊರಕೇರಿಗಳಾಗಿರಬಹುದು. (ಹೆಣ್ಣು ಗಂಡು ಕೂಡಿದಾಗ ಅವುಗಳ ಹೃದಯ ಓತು ಸೋತಿರಬೇಕು. ಅವರ ದೃಷ್ಟಿ ಸ್ನೇಹದಲ್ಲಿ ಹೂತು ಕಾತು ಫಲಿಸಿರಬೇಕು.

“ ಹುಬ್ಬು ಹಾರಿಸಿದಾಗ ಹಬ್ಬ ಎನಿಸಿತು ನನಗ
‘ಅಬ್ಬ’ ಎನಬೇಡS ಗೆಣತಿ ಸಾವಿರಕ
ಒಬ್ಬನೋಡವ್ವ ನನನಲ್ಲ”

ಎಂದು ನಲ್ಲೆ ತನ್ನ ನಲ್ಲನಲ್ಲಿ ಕಾಣುವ ಹೆಮ್ಮೆ ಚಲುವಿಕೆಗಳನ್ನು ಹುಚ್ಚು ಪ್ರೀತಿಯ ಹೊಚ್ಚಹೊಸ ಪ್ರಣಯಿಗಳು ತಮ್ಮ ಅನುಭವ ಸ್ಮರಿಸಿ ಜ್ಞಾಪಿಸಿಕೊಳ್ಳಬೇಕು.) ತನ್ನ ಎದೆಗೊಪ್ಪಿದವನನ್ನು ಒಪ್ಪಿಟ್ಟು ಮಾತನಾಡುವ ನಲ್ಲೆಗೆ ತನ್ನವನ ವಿಷಯಕ್ಕೆ ಪ್ರೀತಿ ನೆರೆಗೊಂಡು ಹೊಮ್ಮಿದಾಗ ತಳೆದ ಮುಗ್ಧತೆ ಇದು.

" ನೀರನ ನೋಟಕ್ಕ ನೀರ ಕಡೆದಿತು ಜೀವ
ಧೀರ ಧೈರ್ಯವ ಕಳೆದಾನ ನನ್ನೊಂದ
ತೀರ ಮರಳೀಯ ಮಾಡ್ಯಾನ"

ಹೆಣ್ಣು ತನ್ನ ಹೃದಯ ಉಬ್ಬಿಬಂದಾಗ ಹೇಳುವ ಮೂಕ ಮಾತಿದು. ಅವನದೊಂದು ನೋಟ ಇವಳನ್ನು ಅಧೀರಳನ್ನಾಗಿ ಮಾಡಿದೆ. ಆದರೆ ಆ ಹೆದರಿಕೆಯಲ್ಲಿ ಹಿಂಸೆಯ ಭೀತಿಯಿಲ್ಲ. ನಾಣ್ಚಿನ ಕೈವಾಡವಿದೆ. ಹೆಣ್ತನದ ಹೃದಯ ಧರ್ಮವದು. ಗಂಡಿನ ಹೃದಯ ಕೂಡ ಹೀಗೆಯೆ ಹಣ್ಣೊಡೆದು ಮೃದುವು ಆಗಿರಬೇಕು. ಒಮ್ಮೆ ನಲ್ಲೆ ಏಕೋ ಪ್ರಣಯಕೋಪ ತಾಳಿರಬಹುದು. ಇಲ್ಲವೆ ಮೋಜಿಗಾಗಿ ಮನಸ್ಸು ಮುಚ್ಚಿಕೊಂಡಿರಬಹುದು ಆಗ ನಲ್ಲ ಹೇಳುತ್ತಾನೆ:

". ಸುಗ್ಗಿ ಬಂದರು ಮುಗ್ಗಿಯೇ ಇರುವಿ
ಕಣ್ಣುಮುಚ್ಚಿ ನಿನ್ನ ನೆನೆದೆ
ಎದೀ ಮುಗುಳ ತೆರೆಯಲೊಲ್ಲಿ"

ಎಂದು ನೊಂದು, ಅವಳನ್ನು ಸಂತವಿಸುತ್ತಾನೆ:

" ಬಂಗಾರದ ಮಾಡದಿಂದ
ಸಿಂಗಾರದ ಮಳೆಗರಿಸೇನ
ಹ್ಯಾಂಗಾರೆ ಕಣ್ಮನಸೆತ್ತಿ
ಒಮ್ಮೆ ನೋಡ ಒಮ್ಮೆ ನೋಡ."

ಎಂದು ಅವಳ ಕಣ್ಣ ಬೆಳದಿಂಗಳಿಗಾಗಿ ಕಾತರಿಸಿ ಬೇಡುತ್ತಾನೆ. 'ಒಮ್ಮೆ ನೋಡ ಒಮ್ಮೆ ನೋಡ' ಎನ್ನುವ ಮಾತಿನ ಸ್ವಾರಸ್ಯ ಓದಿದರೆ ತಿಳಿಯದು. ಅನುಭವಿಸಿ ಆನಂದಿಸಬೇಕು./ ಬೇಂದ್ರೆಯವರ ಕಾವ್ಯದಲ್ಲಿ ಗಂಡಿಗೆ ತಾನು ಪುರುಷ. ಹೆಣ್ಣು ತನ್ನ ತೊತ್ತು ಸೊತ್ತು ಎನ್ನುವ ಹೀನವಾದ ಅಧಿಕಾರ ಉನ್ಮತ್ತತೆ ಇಲ್ಲ. ನಿಶ್ಚಲವಾದ ರತಿಗೆ ಸಂಚಲನೆಯುಂಟಾದರೆ ಜೀವನದಲ್ಲಿ ತಪ್ಪುಹಾದಿಗೆ ಪ್ರಾರಂಭ;

ಸಂಸಾರದ ಸಂತಾಪ ಪ್ರಣಯ ಪ್ರಸಂಗದಲ್ಲಿ ದಂಪತಿಗಳನ್ನು ಕಂಗೆಡಿಸುತ್ತದೆ. ಹೆಣ್ಣು ತನ್ನ ಮೂಕ ಶೋಕದಿಂದ ಮುಳು ಮುಳು ಅತ್ತು ಮೈರಕ್ತವನ್ನು ಕಣ್ಣೀರಿನಿಂದ ಹೊರನೂಕಿ ಕೊರಗಿ ಬಾಡುತ್ತದೆ. ಆಗ ನಲ್ಲ ಹೇಳುತ್ತಾನೆ:—

" ನನಕ್ಕೆಯ ಹಿಡಿದಾಕೆ ಅಳುನುಂಗಿ ನಗುವೊಮ್ಮೆ
ನಾನೂನು ನಕ್ಕೇನ
ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ
ಹುದಲಾಗ ಸಿಕ್ಕೇನ"

ಯಾಕೆ ನೀನಳುವುದು? ನೀನಳುತ್ತಲೆ ಇದ್ದರೆ ನನಗೆ ಸೊಗಸೆ? ನಿನ್ನ ಅಳುವು ನನ್ನನ್ನು ಸೆರೆದಪ್ಪುತ್ತದೆ. ಆಗ ಬಾಳೆಲ್ಲ ಗೋಳಾಟ. ಅದಕ್ಕಾಗಿ

" ಹುಸಿ ನಗುತ ಬಂದೇವ ನಸು ನಗುತ ಬಾಳೋಣ"
" ಬಡನೂರು ವರುಷದ ಹರುಷದಿ ಕಳೆಯೋಣ
ಯಾಕಾಗಿ ಕೆರಳೋಣ?"

ಎನ್ನುತ್ತಾನೆ. ಹೆಣ್ಣಿನ ಬಾಳುವೆಯು ಕಿಚ್ಚು ಶಾಂತಿ ನಿಲಯವೆನಿಸಬೇಕಾದರೆ ಇಂತಹ ನಲ್ಲನ ನಲ್ನುಡಿಯ ಸಾಂತ್ವನ ಬೇಕಲ್ಲವೇ? ಪ್ರೇಮ ಭರಕ್ಕೆ ನೂರು ವರುಷದ ಆಯುರ್ಮಾನವು ಚಿಕ್ಕದು. ಅದು ಅವರ ಜೀವನದ, ಅನಂತ ಜೀವನದ ಅಂಶ ಅಲ್ಲವೇ? )

ಹೆಣ್ಣು ತನ್ನ ಮೆಚ್ಚಿನ ಗಂಡಿನ ಅಗಲಿಕೆಯನ್ನು ಸಹಿಸದು. ಯಾಕಂದರೆ—

" ಆತಗಾಕೆ ಮೈ ಉಸಿರು, ಉಸಿರ
ಮೈಯಾಗೆ ಆತಗಾಕೆ"

ಅಂತಹದೊಂದು ನಿತ್ಯ ಮಿಲನದ ಬೆಸುಗೆ ಅವರ ಜೀವಾಳದಿಂದೆದ್ದು ಬಂಧಿಸುತ್ತಿದೆ. ಇಂತಹ ಪ್ರಣಯದಲ್ಲಿ ವಿಪ್ರಲಂಭವು ಹೂವಿಗೆ ಸಿಡಿಲು ಬಡಿದಂತೆ.

" ಕಾಂತಾರ ಕ್ಹೋಗ್ಯಾನ ಕಾಂತಾ ನಿನ್ನವನೇನ
ಕಾಂತೆ ಏಕಾಂತ ಬಯಸಿದ, ಗಿಣಿಹೇಳ
ನಿಂತಾಳ ಕಾದು ನಿನಗಾಗಿ "

ಇಲ್ಲಿಯೆ ದಾಂಪತ್ಯ ಜೀವನದಲ್ಲಿ ಕಾಮ ತನ್ನ ಅಲರಂಬನೆಸೆದಿದ್ದಾನೆ. ಏಕಾಂತ ಜೀವನವು ನೀರ ನೀರೆಯರ ನೀರಸ ಜೀವನ ನಿರಾಸಕ್ತ್ಯಾಗಿ.ಹೃದಯ ಹತ್ತಿರಿದ್ದು ಮೈ ಹತ್ತಿರಿಲ್ಲದಿದ್ದರೆ ಮನ ತಣಿಯದು.

" ಕನಸು ಮನಸಿನಲಿ ಕಾಂತರಾಗೆ
ಏಕಾಂತ ಬೇರೆ ಬೇಕೆ? "

ಎಂದು ಕವಿಯೇ ಕೇಳಿದರೂ ಇಲ್ಲಿ ಏಕಾಂತದ ಬಯಕೆ ಹೇಳಿದ್ದಾರೆ. ಏಕಾಂತ ವಾಸವೆಂದರೆ ಸ್ವೈರ ಕಾಮನ ಭೈರವ ನರ್ತನದಿಂದ ಅತಿ ಸುಖ ಲಪಸಿಕೊಳ್ಳುವದಲ್ಲ. ಅದು ಕೇವಲ ದೈಹಿಕ ತೃಪ್ತಿಯ ಮಾತ್ರಲ್ಲ. ಹೃದಯದ ಆಪ್ತಸಮಾಲೋಚನೆ ಕೂಡ. ವಿಪ್ರಲಂಭದ ಇದೇ ಪರಿಯೊಂದು—

" ಸೀರಿಗೆ ನಡೆದಾಗ " ತೋರುವದು ಹೆಣ್ಣಿಗೆ ತಾನೊಲಿದ ಗಂಡಿನ ಧ್ಯಾನವೇ ಮೂರುಕಾಲ ಗಂಡಿಗೆ ತಾನೊಲಿದ ಹೆಣ್ಣಿನ ನೆನಹೆ ಸದಾ ಸರ್ವಕಾಲ. ಅವರ " ಅಕ್ಕರತೆ " ಎಂಬ ಕವನವು 'ಶಲೆಯ' " Love's philosophy " ಎಂಬ ಕವನವನ್ನು ಜ್ಞಾಪಿಸಿಕೊಡುತ್ತದೆ. ಒಮ್ಮೆ ಗಂಡು ಕಾಮ ಕಾಮಕಸ್ತೂರಿಯ ತೆನಿಯೊಂದನ್ನು ಅವಳ ಮುಡಿಗೆ ಮುಡಿಸಲು ತಂದಿದ್ದಾನೆ. ಆಗ ಅವನಿಗೆ ತನ್ನ ಪ್ರೇಯಸಿಯಲ್ಲಿ ಎಂತಹ ಅಭಿಮಾನ! ಎಷ್ಟು ನೆಚ್ಚು! ಆ ಕಾಮ ಕಸ್ತೂರಿಯ ಗೊಂಚಲನ್ನು ಹಿಡಿದುಕೊಂಡು ಹೇಳುತ್ತಾನೆ.

" ಅದನs ನೀ ಮುಡಿದಂದ
ಮುಡಿದಂಥ ಮುಡಿಯಿಂದ
ಗಾಳಿಯ ಸುಳಿಯೊಂದು

ಬಂದೆನಗ ತಗಲಿದಂದ
ತಣಿ ತಣಿ ತಣಿವಂದ
ಈ ಮನಕ"

ಇಷ್ಟು ಆಶಿ.ಅಂತೆಯೆ ಬೇಂದ್ರೆಯವರ ಕವನದಲ್ಲಿ ಒಂದು ತತ್ವ ಅವರ ಶೃಂಗಾರ ದೃಷ್ಟಿಯನ್ನು ಸ್ಪಷ್ಟೀಕರಿಸಲು ಕಾಣಿಸಿಕೊಂಡಿದೆ.

"ಹೆಣ್ಣು ಗಂಡಿಗೆ ಚಲುವು ಗಂಡು ಹೆಣ್ಣಿಗೆ ಒಲವು
ಇದುವೆ ಹೆಣಿಗೆಯ ಬಲವು ಮೂಲೋಕಕು"

ಇದೇ ಆ ಪ್ರಣಯ ಸೂತ್ರ.ಗಂಡು ಹೆಣ್ಣಿನಲ್ಲಿ ಇರಿಸಿದ ಭಾವನೆಗೆ:—

"ಕಾಮುಕನು ನಾನೆಂದು—ಪ್ರೇಮದೇವತೆ ನೀನು
ಬೆಂಬದಿಗೆ ನಿಂತೆ ಬಾಗಿ
ರಾಮಣೀಯಡ ರೂಪು ಮುಂಬದಿಗೆ ಬರದಿರಲು
ಉಳಿಯುವೆನೆ ಕಾಮಿಯಾಗಿ?"

ಇಲ್ಲಿ ಗಂಡು ಹೃದಯದ ನಿಷ್ಕಾಮ ರತಿಯ ನಿದರ್ಶನವಿದೆ. ಇಲ್ಲಿಯ ಗಂಡಿನ ಮನಸ್ಸು ದೊಡ್ಡದು. ಇದೇ ರೀತಿಯ ರತಿಯ ಆವಿಷ್ಕಾರವನ್ನು ಹೆಣ್ಣಿನಲ್ಲಿಯೂ ಕಾಣಬಹುದು.

"ಮುಕ್ತಿನೆಕ್ಕ ನರವನಿಕ್ಕೆ
ಮುದ್ದಿಗೆ ಕಳಿಕಟ್ಟೀತೆ?
ತೊಯ್ದು ಎವೆಯ ಮುದ್ದನಿಡಲು
ಮುದ್ದಿಗೆ ಅದು ಮುಟ್ಟೀತೆ?"

ಪ್ರಣಯಾನಂದವು 'ಆನಂದ'ವೆ. ಯಾವ ದುಗುಡು ದುಮ್ಮಾನಗಳು ಅದನ್ನು ಮಸಳಿಲಾರವು. ಆದರೆ ಹೃದಯದಲ್ಲಿ ಸುಸ್ಥಾಯಿಯಾದ ನೆಚ್ಚು ಮಾತ್ರ ಇರಲು ಬೇಕು. ಪ್ರಣಯ ಕೇಲಿಯಲ್ಲಿ ಎಲ್ಲ ನೋವನ್ನು ಕೊಚ್ಚಿ ಕೊಂಡು ಹೋಗುವ ಒಂದು ಶಕ್ತಿ ಇದೆ, ಎಂಬ ಮಾತು ಮೇಲಿನ ಕಾವ್ಯದ ಸಂದೇಶ.

" ಅನ್ನ ಪ್ರಾಣಗಳ ಮಿಥುನದಂತೆ ಮೈಯೆರಡು
ಕಲೆತು ಬೆರೆತು
ಮನದ ಕಾವಿನಲಿ ಕಾಮವಾಗಿ ಮನದಾಚೆಗೆನೋ ಅರಿತು "

ಪ್ರಣಯ ಮಿಥುನಗಳ ವಿಷಯವಾಗಿದ್ದ ಕವಿಯ ಕಲ್ಪನೆ ಇದು. ಗಂಡಿನಿಂದ ಅಗಲಿದ ಹೆಣ್ಣು, ಅದರಲ್ಲಿಯೂ ಪರಮಾತ್ಮ ಪ್ರೇಯಸಿ ರಾಧೆ ಕೃಷ್ಣಕಾಣದಾಗ, ಮುಡಿಯ ಹೂದಂಡಯನ್ನು ಯಮುನೆಯ ದಂಡೆಗ ಬೀಸಿಹಾಕಿ

" ಹೊಳೆಯೊಳು ಹೊತ್ತಾರೆ
ಧುಮುಕಿ ನಾ ಸತ್ತಾರೆ
ಹೊಂದೇನೆ? ಅವನ ಹೊಂದೇನೆ? "

ಎಂದು ನೋವುಗೊಳ್ಳುತ್ತಾಳೆ. ಇಂತಹ ಸಖೀಹೃದಯದ ಸೀರಿಗ ಗಂಡು ಹೃದಯ ಉತ್ತರಿಸಬೇಕಾದುದು

" ನೀನಿಲ್ಲದಾನಿಲಲು ನೆಲವಿದೆಯೆ? "

ಹೀಗೆ ಗಂಡು ಹೆಣ್ಣು ಪರಸ್ಪರವಾಗಿ ಭಾವಿಸುವದರಿಂದ ಕಲ್ಯಾಣ ಪಡೆಯುವರು.

" ಗಂಗೆಯು ಕಷ್ಟವು ಗೌರಿಗೆ ತಿಳಿಯದು
ಹೆಂಗಸಿನ ಕಷ್ಟವು ಗಂಡಸಿಗೆ
ಎಂದಿಗೂ ತಿಳಿಯದು ಏತಕೆ ತಿಳಿಯೋದು
ದು:ಖವು ನಮ್ಮದು ನಮಗೆ ಇದೆ. "

ಎಂದು ನಲ್ಲೆ ದೀನಳಾದಾಗ ಯಾವ ಪುರುಷನಲ್ಲಿಯೂ ಗಂಡುತನದ ಪಾರುಷ್ಯ ಉಳಿಯದು. ಮತ್ತೊಮ್ಮೆ ಅವನೂ ಕೂಡ ಆ ಸತಿಯಲ್ಲಿ

" ಗಂಡುದರ್ಪವ ಹರಿದು
ಬಿರುಸುಬಿಂಕವ ತೊರೆದು
ತೋಳತೊಟ್ಟಿಲ ಮಗುವು ಆಗಿಬಂದೆ
ಗೊಂಬೆಯೊಡಿಸಿದಂತೆ ಆಡಿಸೆಂದೆ.

ಎನ್ನುವನು. ಇಲ್ಲಿ ತಾರುಣ್ಯ ಮೂಗಿದೆ. ಹೃದಯಕ್ಕೆ ಹದ ಬಂದಿದೆ. ಜೀವನದಲ್ಲಿ ಸೊಗಸು ನೆಲೆಯೂರಿದೆ. ಶೃಂಗಾರಜೀವನದ ಸಾರ್ಥಕತೆಯ ಗುರುತು ಈ ಮಾತಿನ ಹೃದಯದಲ್ಲಿ ಹುದುಗಿದೆ.

ಹುಚ್ಚುವಿಕಾರಕ್ಕೆ ವಶವಾದ ಹೆಣ್ಣುಜೀವವೊಂದು ಕಾಮತೃಪ್ತಿಗಾಗಿ ಪೈಚಾಚಿ ಬೀದಿಗಿಳಿದಾಗ ಕವಿ "ಹೋಗವ್ವಾ ಮನೆಗೆ ಹೋಗವ್ವಾ" ಎಂದು ಹೇಳುತ್ತಾನೆ. ಶೃಂಗಾರವಾಗಲಿ ಪ್ರೇಮಸಾಮುತಿಯಾಗಲಿ ಇಂದು ಸಮಾಜ ದಲ್ಲಿ ಮನೆಮಾತಾಗಿದೆಯೆ ಹೊರತು ನಮುಷ್ಟಿಯ ಕಲ್ಪನೆ ಜಗಕ್ಕಿಲ್ಲ. ಇಂದಿನ ಗಂಡಿಗಂತೂ ತನ್ನವಳಿಗೆ ಇನ್ನೊಬ್ಬರ ಕಣ್ಣು ಸೋಂಕದಿರಲಿ, ತನಗೆ ಮಾತ್ರ ಹೊರಟರೆ ಕಣ್ಣಿಗೆ ಹಬ್ಬವಾಗುವಂತೆ 'ಚಿಗರಿಗಂಗಳ ಚೆಲುವೆಯರ' ಚಲ್ಲಾಟ ಬೇಕು. ಹೀಗಾಗಿ 'ಹೆಣ್ಣುಪಾಡು ನಾಯಿಪಾಡಾಗಿದೆ.' ಇದೇ ಮಾತನ್ನೇ ಕವಿ 'ಹೆಣದ ಹಿಂದೆ' ಎಂಬಲ್ಲಿ ಹೇಳಿ ಹೆಣ್ಣಿನ ದಿವ್ಯ ಶಕ್ತಿಯನ್ನು ತೋರಿದ್ದಾರೆ. ಇಲ್ಲಿಯ ರೀತಿಯನ್ನು ಕಂಡು ಯಾವ ಸಹೃದಯನೂ "ರತಿಯು ಸಿನ್ನ ರಸದಲ್ಲಿ ನಾಂದು ಆಗಿಹಳು ಮುಕ್ತಿ ಸತಿಯು" ಎಂದು ಉದ್ಗಾರ ತೆಗೆಯದಿರಲಾರನು ದಂಪತಿಗಳ ಪ್ರಣಯ ಜೀವನದಲ್ಲಿ ಸಖ್ಯವೇ ಸ್ಥಾಯಿಯಾಗಿರುವಾಗಿನ ಅವರ ಇರವು ಅರಿವಿನ ಬಗ್ಗೆ "ಸಖಿಗೀತ"ದಲ್ಲಿ ಪರಿಪಕ್ವವಾದ ವಿಚಾರ ಲಹರಿ ಬಂದಿದೆ.) ಒಮ್ಮೆ ನಲ್ಲೆ ತನ್ನ ಪರಿತಾಪದಿಂದಲೋ ಹುಸಿ ಮುನಿಸಿನಿಂದಲೋ ಒಡೆಯದ ಮೌನ ಧರಿಸಿದಾಗ ನಲ್ಲ ಹೇಳುತ್ತಾನೆ:

" ಮೌನದಲ್ಲಿಯುಕೂಡ ಮಾತಿನಧ್ವನಿಯಿರಲಿ
ಮೂಕ ಮೌನವು ಒಂದು ಶಾಪದೊಲು
ತಾಪವಕೊಡುವುದು ತಾ ಪರಿಹರಿಸದು
ಜೀವಯಾತನೆಯ್ನು ಅದು ಎಂದಿಗೂ
ಮಾತಿನಲ್ಲಿರುವಂಥ ಮೌನದ ಧ್ವನಿಯಿಂದ
ವಿಹ್ವಲತೆ ಬೆಳೆಯುವದಿಬ್ಬರಲಿ
ಇಬ್ಬರ ಮನವಾಗ ಇಬ್ಬಗೆಯಾಗುವದು
ಒಬ್ಬಗೂ ಸುಖವಿಲ್ಲ ಬದುಕಿನಲಿ. "

ಸರಸ ದಾಂಪತ್ಯವು, ಅವಳ ಗಂಟು ಮೌನದಿಂದ ವಿರಸವಾಗುವದೋ ಎಂಬ ಭೀತಿ ನಾಯಕನಿಗೆ ಬರುತ್ತದೆ. ಜೀವನವನ್ನು ರಮ್ಯವಾಗಿ ಸಾಗಿಸಿಕೊಂಡು ಹೋಗಲು ಸಖೀಗೀತದ ನಾಯಕನು ಹೇಳುತ್ತಾನೆ.

ಬಂದ ಸಂಕಷ್ಟಗಳಿಗೆಲ್ಲ ಎದೆಗೊಡಬೇಕು. ನೀನು ಬಡತನದ ಒಲೆಯಲ್ಲಿ ಬಾಳುವೆಯ ಕುಲುಮೆಯಲ್ಲಿ ಸುಟ್ಟ ಹಪ್ಪಳದಂತಾಗಿರಬಹುದು ಆದರೂ ನುಂಗು ನುಂಗು ಬಂದ ದುಃಖ. "ಕುದಿಎಸರು ಬರದಿದೆ ಚಳಿಬಿಸಲು ಉಣ ದಿರೆ ಪರಿಪಾಕ ಎಂಬುದು ಎಂತಹದು?"

ಸಖೀಗೀತದ ನಾಯಕನ ನುಡಿಗಳಲ್ಲೆಲ್ಲ ಶ್ರಿ. ಬೇಂದ್ರೆಯವರು ಹೆಣ್ಣನ್ನು ಕಾಣುವ ರೀತಿ ಗೊತ್ತಾಗುತ್ತದೆ. ನಿಜವಾದ ದಾಂಪತ್ಯದಲ್ಲಿರುವ ಪ್ರೀತಿ ಅಭಯದಾಯಕವಾಗುವದು. "ಪ್ರೀತಿ ಜೀವನದ ಸ್ವಸ್ತಿ" ಹೊರತು ಭೀತಿಯ ಹುಟ್ಟಿಸುವ ಪ್ರಿತಿಯು ಪ್ರೀತಿಯಲ್ಲ.

"ಭೀತಿಯ ಹುಟ್ಟಿಸುವ ಪ್ರೀತಿಯು ಪ್ರೀತಿಯೆ?
ಪ್ರೀತಿ ಭಕ್ಷಕನಲ್ಲ ಅನ್ನವದು
ರಕ್ಷಕ ಪ್ರೀತಿಯು ರಾಕ್ಷಸನೆಂಬರೆ?
ನಂಬದೆ ಪ್ರೀತಿಯ ಬಿಂಬವನು.?

ಹೆಣ್ಣಿಗೆ ಯಾವಾಗಲೂ ಮುಗ್ಧ ಸ್ವಭಾವದಿಂದ ಪ್ರೇಮ ಉಕ್ಕಿ ಮಿಕ್ಕಿ ಬರುತ್ತದೆ. ಪ್ರೌಢವಾದ ಗಂಡು ಅದನ್ನು ರಮಿಸಿ ತಣಿಸಬೇಕು. ಮಾನವ ಜೀವನದಲ್ಲಿ ತಾಯಿಯಂತಹ ಇನ್ನೊಂದು ಕರುಳೆಂದರೆ ನಲ್ಲೆ. ಆದರೆ ತಾಯಿ ಜನನಿ. ನಲ್ಲೆ ಗೃಹಿಣಿ. ತಾಯಿ ಹಡೆದ ಜೀವವಾದರೆ ನಲ್ಲೆ ಪಡೆದ ಗೃಹಿಣಿ ಅಂತೆಯೆ ಗಂಡು ಹೆಣ್ಣಿನಲ್ಲಿ ತನ್ನ ತಾಯಿಯನ್ನು ಸ್ಮರಿಸುತ್ತಿರಬೇಕು. ಅದು ಪುರುಷನ ಉದಾತ್ತತೆಯ ದ್ಯೋತಕ. ಶ್ರೀ. ಬೇಂದ್ರೆಯವರಿಗೆ ಈ ದೃಷ್ಟಿ ಇದೆ. ಸಖಿ ಮುಗ್ಧ ಭಾವದಿಂದ ತನ್ನ ಸರ್ವಸ್ವವನ್ನೇ ಸಖನಿಗೆ

"ನಿಮ್ಮ ಕಣ್ಮುಂದೆಯೆ ಕುಣ್ಮುಚ್ಚಿದರೆ ಸಾಕು
ಗೆದ್ದೆವು .... .... .... "

ಎಂದು ನಿವೇದಿಸಿ

"ನಿಮ್ಮ ಜೀವನದಲ್ಲಿ ಮಂಗಲವಾಗಲಿ ಎಂದೆಂದು"

ಎಂದು ಅನ್ನಲು

"ನನ್ನ ತಾಯಿಯ ನೆನದು ನಾ ಸುಮ್ಮನಾದೆನು,
ಒಳಗೊಂದು ಹೊರಗೊಂದು ಜೀವಿಸಿದೆ."

ಎಂದು ಅನ್ನುತ್ತಾನೆ. ಇಂತಹ ದಿವ್ಯ ಭಾವನೆಯೆ ಬೇಂದ್ರೆಯವರ ರತಿ ದರ್ಶನದ ದೃಷ್ಟಿ.


*

# ದತ್ತರ ದೈವ ವಿವೇಚನೆ

ಲೇ:— **ಪಂಡಿತ ಕೇಶವ ಶರ್ಮಾ ಗಲಗಲಿ**

ಸಾಯನ ಕುಂಡಲಿ

**ಜನ್ಮ ತಾರೀಖು:**— ತಾ|| ೩೧—೧—೧೮೯೬. ಸಂಜೆ ೬ ಗಂಟೆ.




ಚ. △ ಮ. ಗು. ನೇ ತ್ರಿರೇಕಾದಶ. ಶು. △ ನೇ. ರ. △ ನೇ.
ಶನಿ. ಹ 6 = ಗುರು ಶುಕ್ರರು ಕೇಂದ್ರದಲ್ಲಿ

ಗುರು ಶುಕ್ರೌ ಚ ಕೇಂದ್ರಸ್ಥೌ ಜೀವೇದ್ವರ್ಷಶತಂ ನರಃ |
ಗ್ರಹಾನಿಷ್ಟಂ ಹಿನಸ್ತ್ಯಾಶು ಚಂದ್ರಾನಿಷ್ಟಂ ತಥೈವಚ ||
ಸಾರಾವಲಿ.

ಶನಿ ಹರ್ಶಲರು ಕೇಂದ್ರದಲ್ಲಿ ೨೫ವರುಷ ಕಳೆದರೂ ದೀರ್ಘಾಯುಷ್ಯ.

ಶ್ರೀ. ಅಂಬಿಕಾತನಯ ದತ್ತರ ಕುಂಡಲಿಯು.

ಕವಿವರ್ಯ ಬೇಂದ್ರೆಯವರು ೧೮೯೬ನೇ ಇಸವಿಯ ಜಾನೇವರಿ ೩೧ನೇ ತಾರೀಖಿನ ದಿವಸ ಮೂರೂ ಸಂಜೆಯ ಮುಂದೆ ಹುಟ್ಟಿದ್ದಾರೆ. ಇದು ನನಗೆ ಹೇಳಿದ ಕಾಲವು. ಆರುಗಂಟೆ ಹಿಡಿದರೆ ಸಾಯನ ಶಿಂಹಲಗ್ನವು ೧೧ ನೇ

ಅಂಶಕ್ಕೆ ೧೬ ಅಂಶದ ಮೇಲೆ ಉದಿತವಾಗುವದು. ನಿಮಿಷಾತ್ಮಕ ಕಾಲವಿಲ್ಲದ್ದರಿಂದ ಸಾಯನ ಲಗ್ನಕುಂಡಲಿಯನ್ನು ಹಾಕಿದೆ. ನಮ್ಮ ಹತ್ತರ ಈಗ ೧೮೯೬ ನೇ ಇಸವಿಯ ರಾಫೇಲ ಎಫಿಮೆರೀಜ ಇಲ್ಲದ್ದರಿಂದ ಟಿಳಕ ಪಂಚಾಂಗದಿಂದ ಅಯನಾಂಶ ಕೂಡಿಸಿ, ಸಾಯನ ಗ್ರಹಗಳನ್ನು ಹಾಕಿದೆ. ಅವರ ಹುಟ್ಟುಹಬ್ಬದ ಮಂಗಲ ಸಮಯದಲ್ಲಿ ಜ್ಯೋತಿಶಾಸ್ತ್ರದೃಷ್ಟಿಇಂದ ಅವರ ಕುಂಡಲಿಯನ್ನು ವಿವೇಚಿಸುವದು ಅಪ್ರಸ್ತುತ ವಾಗಲಿಕ್ಕಿಲ್ಲವೆಂದು ಈ ಸಂಕ್ಷಿಪ್ತ ವಿವೇಚನೆಯನ್ನು ಕೈಕೊಂಡಿರುವೆವು.

ಶ್ರೀಮಾನ್ ಬೇಂದ್ರೆಯವರು ಸಿಂಹಲಗ್ನದಲ್ಲಿ ಹುಟ್ಟಿದ್ದಾರೆ. ಇದೊಂದೇ ಸಾಕು ಅವರು ಸಂಪಾದಿಸಿರುವ ಈ ಅತುಲಕೀರ್ತಿಗೆ, ಮೇಲೆ ಗುರು ಲಗ್ನದಲ್ಲಿ ಉದಿತನಿರುವನು. ಅಂಶತಃ ರವಿಯ ಪ್ರತಿಯೋಗದಲ್ಲಿ ಗುರು ಇದ್ದರೂ ಅವನ ಮಹಿಮೆ ಅಷ್ಟೇನು ಕಡಿವೆಯಾಗಲಾರದು. ನಮ್ಮ ಆರ್ಯ ಜಾತಕೋಕ್ತ ಒಂದೇ ಪದ್ಯದಿಂದ ನಾವು ಗುರುವಿನ ಮಹತ್ವವನ್ನು ಹೇಳಬಹುದು.

"ಕಿಂಕುರ್ವಂತಿ ಗ್ರಹಾಃ ಸರ್ವೆಯಸ್ಯ ಕೇಂದ್ರೇಬೃಸ್ಪತಿಃ।
ಮತ್ತಮಾಂಗಯಾಥಾನಾಂ ಭಿನತ್ತ್ಯೇ ಕೋಪಿಕೇಸರೀ"॥

ಸಿಂಹ ಲಗ್ನದಲ್ಲಿ ಹುಟ್ಟಿದವರು ತೇಜಸ್ವಿಗಳಾಗುತ್ತಾರೆ. ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಅವರು ಮುಂದೆ ಬರುವರು. ಲೋಕಮಾನ್ಯ ತಿಲಕರು ಸಿಂಹಲಗ್ನದಲ್ಲಿ ಹುಟ್ಟಿದ್ದರು. ಗುರುಲಗ್ನದಲ್ಲಿದ್ದವರು ಉದಾರ ನ್ಯಾಯ ಸಮತೋಲನ ಬುದ್ಧಿಯವರು. ಈ ಎಲ್ಲ ಗುಣಗಳನ್ನು ಜಾತಕ ಶಾಸ್ತ್ರವು ಹೇಳುತ್ತದೆ. ಇದನ್ನು ಬೇಂದ್ರೆಯವರಲ್ಲಿ ಮನಗಾಣಬಹುದು

ಮೊದಲು ಬೌದ್ಧಿಕ ಯೋಗಗಳನ್ನು ನಿರೀಕ್ಷಿಸುವಾ. ಬುದ್ಧಿಕಾರಕ ಬುಧನು ಕುಂಭದಂತಹ ಮಾನುಷ ಶಾಸ್ತ್ರೀಯ ರಾಶಿಯಲ್ಲಿ ಉದಿತನಿದ್ದಾನೆ. ಮಾನಸಿಕ ಶಕ್ತಿಕಾರಕ ಚಂದ್ರನು ಕನ್ಯಾ ಚಿಕಿತ್ಸಕ ರಾಶಿಯಲ್ಲಿ ವಾಣಿಸ್ಥಾನದಲ್ಲಿರುವನು. ಇವೆರಡು ಗ್ರಹಗಳು ಅವರ ಅಪ್ರತಿಮ ಪ್ರತಿಭಾ ವಿಲಾಸಕ್ಕೆ ಕಾರಣವಾಗಿವೆ. ಬೌದ್ಧಿಕ ಶಕ್ತಿಯನ್ನು ವಿಚಾರಿಸುವಾಗ ಪಡುವಣರು ತೃತೀಯ ಪಂಚಮ ನವಮಗಳನ್ನು ವಿಚಾರಿಸುವರು. ತೃತಿಯಾಧಿಪತಿ ಶುಕ್ರನು (ತೃತೀಯ ಭಾವವು ಹುಟ್ಟುಗುಣವನ್ನು ತೋರಿಸುವದು.) ಕವಿತ್ವಕಾರಕನು ಅಹುದು. ಕುಂಭ ಗೂಢರಾಶಿಯಲ್ಲಿ ಅತ್ಯಂತ ಉದಿತನಾಗಿದ್ದಾನೆ. ಇದೊಂದೇ

ಅವರ ಹುಟ್ಟು ಕವಿತ್ವದ ಅನುಪಮ ಯಶಸ್ಸಿಗೆ ಸಾಕು. ಶಿಕ್ಷಣ ಸಂಸ್ಕಾರದ ಸ್ಥಾನವಾದ ಪಂಚಮ ಭಾವಾಧಿಪತಿ ಗುರು ಇದ್ದು ಅವನು ಲಗ್ನದಲ್ಲಿದ್ದಾನೆ. ರಾಶಿಬಲಿಯೂ ಇರುವನು. ಅವರು ವಿಶ್ವವಿದ್ಯಾಲಯದ ಉಚ್ಚ ಪದವೀಧರರು ಇರಲು ಸಾಕು. ಇದಲ್ಲದೆ ಗುರುವು ಪಾಠಾಂತಕ ಶಕ್ತಿ ದ್ಯೋತಕ ಮಿಥುನ ರಾಶಿಯಲ್ಲಿ ಏಕಾದಶ ಭಾವದಲ್ಲಿದ್ದು ವರುಣನೊಡನೆ ಶುಭದೃಷ್ಟಿಯಿರುವದು, ಗುರುವರುಣರ ಶುಭದೃಷ್ಟಿಯ ಬಗ್ಗೆ ಜಾತಕ ಶಾಸ್ತ್ರವು ಬಹು ಗಂಭೀರ ವರ್ಣನೆಯನ್ನು ಮಾಡುತ್ತದೆ, ಇದು ಪರಿಣತ ಪ್ರಜ್ಞರ ಕುಂಡಲಿಯಲ್ಲಿಯ ಯೋಗವು. ಇದು ಆಧ್ಯಾತ್ಮ ಮೊದಲಾದ ಗೂಢ ಶಾಸ್ತ್ರಗಳಲ್ಲಿ ಪ್ರಗತಿಯನ್ನು ತೋರಿಸುವದು ದೈವೀ ಸಾಕ್ಷಾತ್ಕಾರ ಅನುಭವವನ್ನು ತಂದುಕೊಡುವದು" ಎಂದು ಜ್ಯೋ. ಪ್ರಧಾನರು ಬರೆದಿದ್ದಾರೆ ಬೇಂದ್ರೆಯವರ ಸ್ವಭಾವವನ್ನು ನೋಡಲಿಕ್ಕೆ ಕುಳಿತರೆ ಅವರು ಇಂತಹ ಯೋಗ್ಯತೆಯನ್ನು ಪಡೆಯುವವರೆಂದು ಹೇಳಬೇಕಾಗುವದು. ಯಾಕಂದರೆ ಗುರು ವರುಣರಿಬ್ಬರೂ ರಾಶಿ ಭಾವಗಳಿಂದ ಬಲಿಷ್ಠರಾಗಿರುವರು.

ಇನ್ನು ನವಮಾಧಿಪತಿ ಮಂಗಳನು ಉಚ್ಚರಾಶಿಯಲ್ಲಿರುವನು. ಇವು ಅವರಿಗೆ ಅತುಲ ಬುದ್ಧಿಶಕ್ತಿಯನ್ನು ಕೊಟ್ಟವೆ.

ಕವಿತಾಕಾರಕ ಶುಕ್ರನಂತೂ ಉದಿತ ರಾಶಿಯಲ್ಲಿ ಕೇಂದ್ರದಲ್ಲಿದ್ದು ವರುಣನೊಡನೆ ತ್ರಿಕೋಣ ( △ ) ಯೋಗವದೆ. ಶುಕ್ರನು ದಶಮಾಧಿಪತಿ ಇರುವವರಿಂದ ಕವಿತ್ವಮೂಲಕ ಅವರು ಕೀರ್ತಿಯನ್ನು ಸಂಪಾದಿಸಿರುವದು ಯಥೋಚಿತವಾಗಿದೆ.

ಆತ್ಮಕಾರಕ ರವಿಯು ಉದಯ ಹೊಂದುತ್ತಿರುವದಿಲ್ಲ ಅಸ್ತಮಿಸುತ್ತಿರುವನು. ಇದು ಅವರು ಲೌಕಿಕದಲ್ಲಿ ಅಧಿಕಾರಾದಿಗಳಿಂದ ಗೌರವವನ್ನು ಪಡೆಯದಿರುವದಕ್ಕೆ ಕಾರಣವು. ಆ ರವಿಯು ವರುಣನೊಡನೆ ತ್ರಿಕೋಣ ಯೋಗದಲ್ಲಿರುವದರಿಂದ ಅಲೌಕಿಕ (ಆಧ್ಯಾತ್ಮಿಕ) ಜಗದಲ್ಲಿ ಗೌರವವನ್ನು ತಂದುಕೊಟ್ಟು ಆತ್ಮೋನ್ನತಿಗೆ ಸಾಧಕನಾಗಿರುವನು. ಮಂಗಳನು ಉಚ್ಚದಲ್ಲಿರುವನು. ಆರನೇ ಸ್ಥಾನದಲ್ಲಿರುವನು ೩. ೬, ೧೧, ರಲ್ಲಿ ಪಾಪಗ್ರಹಗಳಿಗೆ ಉಚಿತಸ್ಥಾನವೆಂದು ನಮ್ಮವರು ಹೇಳುತ್ತಾರೆ. ಇದಲ್ಲದೆ ಮಂಗಳನು ಭಾಗ್ಯಾಧಿಪತಿ. ಭಾಗ್ಯೋದಯದಲ್ಲಿ ಸಂದೇಹ ವಿಲ್ಲದಿದ್ದರೂ ಪಾಪಗ್ರಹದ ಮೂಲಕ ಕಷ್ಟ ಸಾಧ್ಯವಾದ ಭಾಗ್ಯೋದಯ.

ಇನ್ನು ಇವರ ಕುಂಡಲಿಯಲ್ಲಿ ಮುಖ್ಯ ಅಶುಭಯೋಗವೆಂದರೆ ಶನಿ ಹರ್ಶಲ್‌ಯುತಿ. ಎರಡೂ ಪಾಪಗ್ರಹಗಳು. ವೃಶ್ಚಿಕ ರಾಶಿಯಲ್ಲಿ ದುರ್ಬಲ ಸ್ಥಾನದಲ್ಲಿವೆ. ಅನೇಕ ತೊಡರುಗಳನ್ನು ಎದುರಿಸಲು ಹಚ್ಚಿವೆ.

ಅವರ ೫೧ ನೇಯ ವರುಷಕ್ಕೆ ಚಲಿತ ರವಿಯು ಮೇಷ ಒಂದನೇ ಎರಡನೇ ಅಂಶಕ್ಕೆ ಬಂದಿದ್ದಾನೆ. ಮೂಲಗುರುವಿನೊಡನೆ ಇನ್ನು ಮೂರು ವರುಷಕ್ಕೆ ತ್ರಿಕೋಣ (△) ವಾಗುವದು. ಇನ್ನೂ ೫, ೬ ವರುಷ ಅವನ ಶುಭ ಫಲ ನಡೆಯುವದು. ಆದ್ದರಿಂದ ೫೧ ರಿಂದ ೫೬-೫೭ ವರುಷಗಳ ವರೆಗೆ ಅವರ ಮಾನಗೌರವಗಳು ಬೆಳೆದು ಗುರು ಅವರಿಗೆ ಆರ್ಥಿಕ ಸಹಕಾರವನ್ನು ದೊರಕಿಸಿಕೊಡುವನು. ಈ ಅವಧಿಯಲ್ಲಿ ಅವರಿಗೆ ವಾರಸಾ ನಾತೆಯಿಂದ ಅಥವಾ ಮೃತ್ಯುಪತ್ರದ ದ್ವಾರಾ ಧನಪ್ರಾಪ್ತಿಯಾಗುವ ಸಂಭವ— ಗರು ಅಷ್ಟಮಾಧಿಪತಿ, ರವಿ ಲಗ್ನಾಧಿಪತಿಗಳ ಶುಭಯೋಗವಿರುವದರಿಂದ

೫೬–೫೭ ನೇ ವರುಷಗಳ ಸುಮಾರಿನಲ್ಲಿ ಚಲಿತ ರವಿ ಮೂಲ ಮಂಗಳನೊಡನೆ ಅಶುಭಯೋಗ ಮಾಡುವನು. ಮಂಗಳನು ರೋಗಸ್ಥಾನದಲ್ಲಿರುವನು. ಶರೀರಸ್ವಾಸ್ಥ್ಯದ ಬಗ್ಗೆ ಹೆಚ್ಚು ಜಾಗರೂಕರಾಗಿರುವದು ನೆಟ್ಟಗೆ.

ಆಯುರ್ದಾಯ ದೃಷ್ಟಿಯಿಂದ ಲಗ್ನದಲ್ಲಿ ಸಿಂಹಲಗ್ನವು ಉದಿತವದೆ. ಬಲಿಷ್ಠರಾಶಿ, ಲಗ್ನದಲ್ಲಿ ಮಹತ್ವದ ಶುಭಗ್ರಹ ಗುರು ದೀರ್ಘಾಯುಷ್ಯ ದ್ಯೋತಕ ಗುರು ವಕ್ರಿ ಇದ್ದರೂ ಬಲಿ,

"ವಕ್ರೀಣಸ್ತು ಮಹಾವೀರ್ಯಾಃ ಶುಭಾಃ"

ಎಂದು ಸಾರಾವಲಿ ಹೇಳುತ್ತದೆ. ಆಯುರ್ದಾಯಕ ರವಿಯು ಕುಂಭದಲ್ಲಿ ರಾಶಿದುರ್ಬಲನಿದ್ದರೂ ೮ ನೇ ವರುಷಕ್ಕೆ ಶನಿಯ ಅಶುಭಯೋಗ. ೧೩ ನೇ ವರುಷಕ್ಕೆ ಹರ್ಶಲನ ಅಶುಭಯೋಗ ದಾಟಿಹೋಗಿದೆ. ಈಗ ಚಲಿತ ರವಿ ಗುರುವಿನ ಶುಭದೃಷ್ಟಿಯಲ್ಲಿ ಬರುತ್ತಿರುವನು. ಮೂಲತಃ ಚಂದ್ರ ಮಂಗಳರ ಶುಭಯೋಗವಿದೆ. ಕಾರಣ ಮಂಗಳ ಅಶುಭಯೋಗವನ್ನುದಾಟಿ ೭೦–೭೫ ವರುಷಗಳನ್ನು ಮಿಕ್ಕುವರೆಂದು ತೋರುವದು. ಚಲಿತ ಗುರು ಈಗ ಮೂರು ಅಂಶ ಹಿಂದೆ ಸರಿದಿರುವನು. ಚಲಿತ ರವಿ ಅವನೊಡನೆ ಈಗ ಶುಭಯೋಗ. ೫೧ರಿಂದ ೫೪ರ ವರೆಗೆ ಗೌರವ, ಮಾನ, ಅರ್ಥಪ್ರಾಪ್ತಿ ಚನ್ನಾಗಿ.

ಸಪ್ತಮದಲ್ಲಿದ್ದ ಶುಕ್ರ ಬುಧರು ಅನುಕೂಲ ದಾಂಪತ್ಯವನ್ನು ಒದಗಿಸಿ ಕೊಟ್ಟಿವೆ. ರವಿಯು ಪತ್ನಿಯ ಸ್ವಾಭಿಮಾನವನ್ನು ತೋರುವನು.

ಇನ್ನು ಸಾಂಪತ್ತಿಕ ದೃಷ್ಟಿಯಿಂದ ಶನಿಹರ್ಷಲರು ಸುಖವನ್ನು ಕಡಿಮೆ ಮಾಡಿದರೂ ಪಂಚಮಾಧಿಪತಿ ಗುರುಲಗ್ನದಲ್ಲಿರುವದರಿಂದ ಕಾಣಿಕೆರೂಪದಿಂದ ಅವರಿಗೆ ಸಾಕಷ್ಟು ಧನವನ್ನು ಒದಗಿಸುವನು. ಧನಸ್ಥಾನದಲ್ಲಿ ಚಂದ್ರನು ಲೋಕಪ್ರೀತಿಯಿಂದ ಧನಾರ್ಜನಕಾರಕನಾಗಿರುವನು. ಸಂಪತ್ತಿ ಕಾರಕ ಶುಕ್ರನು ಏಕಾದಶದಲ್ಲಿದ್ದು ವರುಣನೊಡನೆ ಶುಭಯೋಗಿಯಾದ್ದರಿಂದ ಮಿತ್ರರಿಂದ ದೊಡ್ಡ ಕಕ್ಷೆಯಲ್ಲಿ ಸದ್ಗೃಹಸ್ಥರಿಂದ ವಿಶೇಷವಾಗಿ ಗೂಢ ಶಾಸ್ತ್ರಾದಿಗಳ ಬೆಲೆಯನ್ನು ಬಲ್ಲ ಮಿತ್ರರಿಂದ ಧನಾರ್ಜನೆಗೆ ಒಳ್ಳೇ ಸಹಕಾರ ಸಿಗುವ ಯೋಗ, ಬಲವ ತರುವದೆ.

ಇನ್ನು ಚಲಿತ ಗ್ರಹಗಳ ಯೋಗಗಳ ಫಲ ವಿವೇಚನೆಯನ್ನೆಲ್ಲ ಇಲ್ಲಿ ನಾವು ವಿವರಿಸುವದು ಸಾಧ್ಯವಿಲ್ಲ. ರಾಪೇಲ ಎಫಿಮೇರಿಜ್ ಉಪಲಬ್ಧವಾದ ನಂತರ ಅವರಿಗೆ ನಾವು ವೈಯುಕ್ತಿಕವಾಗಿ ಯಥಾವಕಾಶ ಮಾತಬಹುದು ನಮ್ಮ ಅವರ ಸ್ನೇಹ ಋಣಾನು ಬಂಧವೂ ಇರುವದು ಪೂರ್ವಾರ್ಜಕ ದೃಷ್ಟಿಯಿಂದ ಅವರ ಕುಂಡಲಿಯ ಬೆಲೆ ಎಂತಹದೆಂದು ತೋರಿಸುವದಕ್ಕಾಗಿ ಮೇಲಿನ ಸಂಕ್ಷಿಪ್ತ ವಿವೇಚನೆಯನ್ನು ಮಾಡಿದೆ. ಬುದ್ಧಿ ಮತ್ತೆ ಪರದುಃಖ ನಿವಾರಕತ್ವ, ವಾದನಿವಾದ ಪಟುತ್ವ, ಲಲಿತ ಕಲಾಲೋಲುಪತೆ, ಮೊದಲಾದ ಕುಂಭ ರವಿಯು ಸದ್ಗುಣಗಳು ಇವರಲ್ಲುಂಟು.

ಪರಾಶರ ಋಷಿಯ ತತ್ವದಂತೆ ಲಗ್ನಾಧಿಪತಿ ರವಿ ದಶಮಾಧಿಪತಿ ಶುಕ್ರ ಒಂದೇ ರಾಶಿಯಲ್ಲಿದ್ದಾರೆ. ಇದು ರಾಜಯೋಗ. ಆದರೆ ರವಿ ರಾಶಿದುರ್ಬಲ ದೀಪ್ತಾಂಶದಲ್ಲಿ ಯೋಗವಿಲ್ಲ. ನವಮಾಧಿಪತಿ ಮಂಗಳನು ಉಚ್ಚದಲ್ಲಿದ್ದರೂ ಸ್ಥಾನದುರ್ಬಲನು ಪಂಚಮಾಧಿಪತಿ ಲಗ್ನದಲ್ಲಿರುವನು. ಕೇಂದ್ರತ್ರಿಕೋಣ ಸಂಬಂಧವೇನೋ ಉಂಟು. ಆದರೆ ಅಷ್ಟು ಬಲಿಷ್ಠವಿಲ್ಲ.

"ಕೇಂದ್ರ ತ್ರಿಕೋಣಾಧಿಪಯೋ ರೇಕತ್ವಂ ಯೋಗಕಾರಕಂ।
ಅನ್ಯತ್ರಿಕೋಣಪತಿನಾ ಸಂಬಂಧೋ ಯದಿಕಿಂ ಪರಂ ॥"

ಲಘುಪರಾಶರಿ. —

24—12—45

## ‘ಆನಂದ ಸಾಹಿತ್ಯ ಮಂದಿರ’ಕ್ಕೆ ನೆರವಿತ್ತ ಮಹನೀಯರು

### ಆಶ್ರಯದಾತರು

| | | | | |
|---|---|---|---|---|
| ೧. | ಶ್ರೀ. | ಸರ್. ಗುರುರಾವ ಬೇವೂರ, ಆಯ್. ಸಿ. ಎಸ್. | .... | ೧೦—೦—೦ |
| ೨. | ಪ್ರೊ. | ರಂ. ಶ್ರೀ. ಮುಗಳಿ, ಎಂ. ಎ. ಬಿ. ಟಿ. | | ೧೦—೦—೦ |
| ೩. | ಶ್ರೀ. | ಆರ್. ಎಸ್. ಇನಾಮತಿ | .... | ೧೦—೦—೦ |
| ೪. | ,, | ಆರ್. ಎಮ್. ಛತ್ರೇಪೂರ | .... | ೧೦—೦—೦ |
| ೫. | | ಓರ್ವ ವಿದ್ಯಾರ್ಥಿನಿ .... | .... | ೧೦—೦—೦ |

### ಸಹಾಯಕರು

| | | | | |
|---|---|---|---|---|
| ೧; | ಶ್ರೀ. | ಕೆ. ವ್ಹಿ. ಪಾಟೀಲ, ಬ್ಹಿ. ಎ. ಲ್ಯಾ. ರೆ. ಇ. ಧಾರವಾಡ. | .... | ೫—೦—೦ |
| ೨. | ,, | ಆರ್. ಬಿ. ದೇಸಾಯಿ, .... | .... | ೫—೦—೦ |
| ೩. | ,, | ಆರ್. ಆರ್. ಹಬ್ಬು, .... | .... | ೫—೦—೦ |
| ೪. | ,, | ಎ. ಬಿ. ದೇಶಪಾಂಡೆ, .... | .... | ೫—೦—೦ |
| ೫. | ,, | ಆರ್. ಟಿ. ಜೋಶಿ, .... | .... | ೫—೦—೦ |
| ೬. | ,, | ಶ್ರೀಧರ, ಜಿ. ಪಾಟೀಲ .... | .... | ೫—೦—೦ |
| ೭. | ,, | ನಾರಾಯಣರಾವ ಕುಲಕರ್ಣಿ | .... | ೫—೦—೦ |
| ೮. | ,, | ಜಯವಂತ ಮೊಹರೇರ .... | .... | ೫—೦—೦ |
| ೯. | ,, | ಕಲಾಲ ಮಾಸ್ತರ ಹುಬ್ಬಳ್ಳಿ | .... | ೫—೦—೦ |

ವಿಲ್ಲಿಂಗ್ಡನ್ ಕಾಲೇಜು,<br>
ಸಾಂಗಲಿ<br>
೧೬—೨—೧೯೪೬

‘ಬೇಂದ್ರೆ ವಾಙ್ಮಯ ದರ್ಶನ’ವು ಬೇಂದ್ರೆ ಕಾವ್ಯವಿಮರ್ಶೆಯ ಪ್ರಾಂತದಲ್ಲಿ ಮೊದಲನೇಯ ಪುಸ್ತಕವಾಗಿದೆ. ಬೇಂದ್ರೆ ವಾಙ್ಮಯವನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದರ ಗುಣ ವಿಮರ್ಶೆಯನ್ನು ಇಲ್ಲಿ ಚೆನ್ನಾಗಿ ಮಾಡಲಾಗಿದೆ. ಪ್ರಸಿದ್ಧ ಲೇಖಕರಾದ ಪಂಡಿತ ಕೇಶವ ಶರ್ಮಾ ಗಲಗಲಿ ಇವರೂ ಕೆಲವು ಹೊಸ ಉದಯೋನ್ಮುಖ ಲೇಖಕರೂ ಇದರಲ್ಲಿ ಲೇಖನಗಳನ್ನು ಬರೆದಿದ್ದಾರೆ. ಬೇಂದ್ರೆಯವರ ಹುಟ್ಟುಹಬ್ಬವನ್ನು ಅಖಿಲ ಕರ್ನಾಟಕವು ಆಚರಿಸುವ ಸಮಯದಲ್ಲಿ ಈ ಪುಸ್ತಕ ಹೊರಡುತ್ತಿರುವುದು ಔಚಿತ್ಯಪೂರ್ಣವಾಗಿದೆ. ಇದರಿಂದ ಬೇಂದ್ರೆ ಕಾವ್ಯದ ಬಗ್ಗೆ ತಿಳುವಳಿಕೆಯೂ ರಸಾಸ್ವಾದವೂ ಕನ್ನಡ ಜನರಲ್ಲಿ ಹೆಚ್ಚಲು ನೆರವಾಗಿರುವದೆಂದು ನಾನು ನಂಬಿದ್ದೇನೆ. ಎಲ್ಲರೂ ಈ ಪುಸ್ತಕಕ್ಕೆ ಪ್ರೋತ್ಸಾಹ ಕೊಡುವರೆಂದು ಆಶಿಸುತ್ತೇನೆ.

ರಂ. ಶ್ರೀ. ಮುಗಳಿ<br>
ಎಂ. ಎ., ಬಿ. ಟಿ.